ವಿವೇಕಪ್ರಭ

ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ



₹ 14

ಡಿಸೆಂಬರ್ 2018

PACKAGE TOURS

Hotel Room Accom. & South Indian Veg. Food




Panchadwarka & Jyothirlinga : 22/24 DAYS

Feb 02

Pushkar, Ajmer, Nathadwar, Kankroli, Eklingji, Udaipur, Mt. Abu, Mathru Gaya, Dwarka, Bet Dwarka, Nagesham, Mul Dwarka, Porbandar, Veraval, Somnath, Dakor, Ahmedabad, Ujjain, Omkareshwar, Parli, Aurangabad, Ellora, Grishneshwar, Nasik, Triyambak, Shirdi, Shanisinganapur, Bhimashankar

Kashi Chitrakoota : 15 Days

Feb 17, Mar 09

Allahabad, Gaya, Bodhgaya, Kashi, Saranath, Ayodhya, Naimisharanya, Chitrakoot

Mini Andhra : 05 Days

Jan 09

Manthralaya, Srishailam, Mahanandi, Ahobilam (Nava Narasimha)

Andhra Special : 10 Days

Jan 03

Bhadrachalam, Annavaram, Simhachalam, Borra Caves, Draksharam, Vasavi Penugonda, Dwaraka Tirumala, Mangalagiri, Vijayawada

South India : 10 Days

Jan 24

Guruvayur, Kaladi, Trivandram, Suchindram, Kanyakumari, Rameshwaram, Madurai, Trichy, Srirangam, Tanjore, Kumbakonam, Chidambaram, Thiruvannamalai, Navagraha Temples

North East India : 10 Days


Mar 19

Guwahati, Kamakhya, Shillong, Cherrapunji, Dawki, Mawlinnong, Sela Pass, Tawang, PT Tso Lake, Bomdilla, Dirung, Kaziranga

Nepal Special : 08 Days

Feb 19

Kathmandu, Manokamana, Pokhara, Jomsom, Mukthinath, Bakthapur, Patan




Shri Hansaa Travels

Recognised by Department of Tourism, Govt. of Karnataka

: 640, 40th Cross, 8th Block, Jayanagar, Bangalore - 70

: hansaatravels@gmail.com : hansaatravels.com

: 080-26643276 / 26543891 / 9341215612 / 9341415612

ವಿವೇಕಪ್ರಭ

ಡಿಸೆಂಬರ್-2018 ಸಂಪುಟ 19 ಸಂಚಿಕೆ 12

ವಿಶೇಷ ಲೇಖನ


ಧಾರಾವಾಹಿ

















ವ್ಯವಸ್ಥಾಪಕ ಸಂಪಾದಕರು: *ಸ್ವಾಮಿ ಆತ್ಮಜ್ಞಾನಂದ* ಸಂಪಾದಕರು: *ಸ್ವಾಮಿ ಜ್ಞಾನಯೋಗಾನಂದ*

ನೆರವು: *ಆರ್. ಎಸ್. ಪೂರ್ಣಾನಂದ, ಡಾ. ಕೆ. ಎಲ್. ಪ್ರಸನ್ನಾಕ್ಷೀ, ಡಾ. ಎಚ್. ಪಾಂಡುರಂಗ ವಿಠಲ*

ಅಕ್ಷರ ಜೋಡಣೆ: *ಶ್ರೀರಾಮಕೃಷ್ಣ ಆಶ್ರಮ, ಮೈಸೂರು* ಮುದ್ರಣ: *ಮಯೂರ್ ಗ್ರಾಫಿಕ್ಸ್, ಬೆಂಗಳೂರು*

ಮುಖಪುಟ

ದ್ವಾ ಸುಪರ್ಣಾ ಸಯುಜಾ ಸಖಾಯಾ..

ಚಂದಾ ವಿವರ

ಬಿಡಿ ಪ್ರತಿ : ₹ 14 ವಾರ್ಷಿಕ : ₹ 140 ಮೂರು ವರ್ಷ : ₹ 375
ಆಜೀವ (25 ವರ್ಷ) : ₹ 3,000 ಪೋಷಕರು : ₹ 5,000 ಅಥವಾ ಹೆಚ್ಚು.

ವಿದೇಶಗಳಿಗೆ : (ಏರ್‌ಮೇಲ್) ವಾರ್ಷಿಕ : $ 20; ಮೂರು ವರ್ಷ : $ 60
ಆಜೀವ (25ವರ್ಷ) : $ 300 ಪೋಷಕರು : $ 600 ಅಥವಾ ಹೆಚ್ಚು.

ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– ಸ್ವಾಮಿ ವಿವೇಕಾನಂದ

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

E-mail: mysuru.vivekaprabha@rkmm.org Website: www.vivekaprabha.net ಫೋನ್ : 9481533505

ಪ್ರಾರ್ಥನೆ

ಶ್ರೀಶಾರದಾದೇವ್ಯಷ್ಟಕದಿಂದ

ಬ್ರಹ್ಮಸ್ವರೂಪಿಣಿ ಶಿವೇ ಶುಭದೇ ಶರಣ್ಯೇ
ಚೈತನ್ಯದಾಯಿನಿ ಭವಾಂಬುಧಿಪಾರನೇತ್ರಿ ।
ಶಾಂತಿಪ್ರದೇ ಸುವಿಮಲೇ ಸಕಲಾರ್ತಿನಾಶೇ
ಮಾತರ್ವಿರಾಜ ಸತತಂ ಮಮ ಹೃತ್ಸರೋಜೇ ॥ ೧ ॥

ಬ್ರಹ್ಮಸ್ವರೂಪಿಣಿ, ಶಿವೆ, ಶುಭವನ್ನು ನೀಡುವವಳೆ, ಶರಣ್ಯಳೆ, ಚೈತನ್ಯವನ್ನು ನೀಡುವವಳೆ, ಸಂಸಾರಸಾಗರದ ದಡವನ್ನು ದಾಟಿಸುವಂಥ ದಿವ್ಯಚಕ್ಷುಗಳನ್ನು ಹೊಂದಿದವಳೆ, ಶಾಂತಿಯನ್ನು ಕರುಣಿಸುವ, ಪರಿಶುದ್ಧಳಾದ, ಎಲ್ಲ ಬಯಕೆಗಳನ್ನೂ ಪೂರ್ಣಗೊಳಿಸುವ ಹೇ ಮಾತೆ, ನೀನು ನನ್ನ ಹೃದಯವೆಂಬ ಕಮಲದಲ್ಲಿ ಸದಾ ವಿರಾಜಮಾನಳಾಗಿ ನೆಲೆಸು.

ವೇದಾಂತವೇದ್ಯಪರತತ್ತ್ವ ಸುಮೂರ್ತರೂಪಾ
ಆದ್ಯಂತಮಧ್ಯರಹಿತಾ ಶ್ರುತಿಸಾರಭೂತಾ ।
ಏಕಾಽದ್ವಯಾ ಹಿ ಪರಮಾ ಪ್ರಕೃತಿಸ್ತ್ವಮಾದ್ಯಾ
ಮಾರ್ತರ್ವಿರಾಜ ಸತತಂ ಮಮ ಹೃತ್ಸರೋಜೇ ॥ ೨ ॥

ವೇದಾಂತದಿಂದ ತಿಳಿಯಲ್ಪಡುವ ಪರಮ ತತ್ತ್ವವು ಸ್ಪಷ್ಟವಾಗಿ ಮೂರ್ತಗೊಂಡಂತೆ ಇರುವವಳೆ, ಆದಿ-ಮಧ್ಯ-ಅಂತ್ಯರಹಿತಳೆ, ಸಮಸ್ತ ವೇದಗಳ ಸಾರಭೂತಳಾಗಿ ಇರುವವಳೆ, ಎರಡಿಲ್ಲದ ಏಕವಾದ ಪರಮ ಪ್ರಕೃತಿಯೂ ಆದ್ಯಳೂ ಆದ ಹೇ ಮಾತೆ, ನೀನು ನನ್ನ ಹೃದಯವೆಂಬ ಕಮಲದಲ್ಲಿ ಸದಾ ವಿರಾಜಮಾನಳಾಗಿ ನೆಲೆಸು.

ಮಾಯಾಮನುಷ್ಯತನುಧಾರಿಣಿ ವಿಶ್ವವಂದ್ಯೇ
ಲೀಲಾವಿಲಾಸಕರಿ ಚಿನ್ಮಯದಿವ್ಯರೂಪೇ ।
ಸೃಷ್ಟಿಸ್ಥಿತಿಪ್ರಲಯಕಾರಿಣಿ ವಿಶ್ವಶಕ್ತೇ
ಮಾತರ್ವಿರಾಜ ಸತತಂ ಮಮ ಹೃತ್ಸರೋಜೇ ॥ ೩ ॥



ಮಾಯೆಯ ಮೂಲಕ ಮನುಷ್ಯದೇಹವನ್ನು ಧರಿಸಿ ವಿಶ್ವವಂದ್ಯಳಾದವಳೆ, ಲೀಲೆಯ ವಿಲಾಸದಿಂದ ದಿವ್ಯವಾದ ಚಿನ್ಮಯ ರೂಪವನ್ನು ಧರಿಸಿದವಳೆ, ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡುವ ವಿಶ್ವ ಶಕ್ತಿಯಾದ ಮಾತೆಯೇ, ನೀನು ನನ್ನ ಹೃದಯವೆಂಬ ಕಮಲದಲ್ಲಿ ಸದಾ ವಿರಾಜ ಮಾನಳಾಗಿ ನೆಲೆಸು.

ಸಚ್ಚಿತ್ಸುಖಾನುಭವದಾಯಿನಿ ಬೋಧರೂಪೇ
ವಿಶ್ವೇಶ್ವರಿ ಪ್ರಣತಪಾಲಿನಿ ಸಿದ್ಧಿದಾತ್ರಿ ।
ಶ್ರೀಶಾರದೇ ಭುವನಮಂಗಲದಿವ್ಯಮೂರ್ತೇ
ಮಾತರ್ವಿರಾಜ ಸತತಂ ಮಮ ಹೃತ್ಸರೋಜೇ ॥ ೪ ॥

ಸತ್-ಚಿತ್-ಆನಂದಗಳ ಅನುಭವವನ್ನು ನೀಡುವವಳೆ, ಎಲ್ಲ ಅರಿವುಗಳ ಮೂಲಕ ವ್ಯಕ್ತಳಾಗುವವಳೆ, ವಿಶ್ವೇಶ್ವರಿ, ಶರಣಾದವರನ್ನು ಪಾಲಿಸಿ ಸಿದ್ಧಿಯನ್ನು ಕರುಣಿಸುವವಳೆ, ಶ್ರೀ ಶಾರದೆಯೆ, ಸಮಸ್ತ ಜಗತ್ತಿಗೆ ಮಂಗಳವನ್ನುಂಟುಮಾಡುವ ದಿವ್ಯಮೂರ್ತಿಯಾದ ಹೇ ಮಾತೆ, ನೀನು ನನ್ನ ಹೃದಯವೆಂಬ ಕಮಲದಲ್ಲಿ ಸದಾ ವಿರಾಜಮಾನಳಾಗಿ ನೆಲೆಸು.

ಸೂಕ್ತಿಪ್ರಭ

ಶ್ರೀಮಾತೆಯವರ ಉಪದೇಶಗಳು

ಈ ದೇಹದಲ್ಲಿದ್ದುಕೊಂಡು ಬದುಕಿರುವ ತನಕವೂ ಸುಖವೆಂಬುದು ಇರುವುದಿಲ್ಲ. ಈ ಪ್ರಪಂಚವೆಲ್ಲ ದುಃಖದಿಂದ ತುಂಬಿದೆ. ಸುಖವೆಂಬುದು ಬರಿಯ ಶಬ್ದ ಮಾತ್ರ. ಶ್ರೀರಾಮಕೃಷ್ಣರ ಕೃಪೆಗೆ ಪಾತ್ರರಾದವರು ಮಾತ್ರ ಅವರನ್ನು ದೇವರೆಂದು ಗುರುತಿಸುವರು. ಅವರಿಗೆ ಮಾತ್ರ ನಿಜವಾದ ಆನಂದ ಲಭಿಸುವುದು.

ಎಚ್ಚರಿಕೆಯಿಂದ ಜೀವನ ನಡೆಸಬೇಕು. ಪ್ರತಿಯೊಂದು ಕಾರ್ಯಕ್ಕೂ ಅದರ ಫಲ ಇದ್ದೇ ಇರುವುದು. ಆದ್ದರಿಂದ ಇತರರ ಬಗ್ಗೆ ಕಠಿಣ ಮಾತುಗಳನ್ನಾಡುವುದು ಅಥವಾ ಇತರರ ದುಃಖಕ್ಕೆ ಕಾರಣರಾಗುವುದು ಒಳ್ಳೆಯದಲ್ಲ.

ಒಂದು ವಸ್ತುವನ್ನು ಅದರ ಬೆಲೆಯಿಂದ ಅಳೆಯಬಹುದೆ? ಪ್ರೀತಿ, ಭಕ್ತಿಯಿಂದ ನೀಡಿದ ವಸ್ತು ಮಾತ್ರವೇ ಶ್ರೇಷ್ಠವಾದದ್ದು.

ಭಕ್ತ: ಮಾನವ ತನ್ನ ಸ್ವಪ್ರಯತ್ನದಿಂದ ಏನನ್ನೂ ಮಾಡಲಾರ. ದೇವರೇ ಪ್ರತಿಯೊಂದನ್ನೂ ಮಾಡುತ್ತಿದ್ದಾನೆ.

ಶ್ರೀಮಾತೆ: ಅದು ನಿಜ. ಆದರೆ ಅವನಿಗೆ ಯಾವಾಗಲೂ ಅದರ ಅರಿವು ಇರುವುದೆ? ಅಹಂಕಾರದಿಂದ ತುಂಬಿ ಜನರು ಭಾವಿಸುತ್ತಾರೆ, ಕರ್ಮಕ್ಕೆ ಸಂಬಂಧಪಟ್ಟಂತೆ ತಾವು ಸ್ವತಂತ್ರರು ಎಂಬುದಾಗಿ. ಅವರು ದೇವರನ್ನು ಅವಲಂಬಿಸುವುದಿಲ್ಲ. ಯಾರು ದೇವರನ್ನೇ ಆಶ್ರಯಿಸುತ್ತಾರೋ ಅವರನ್ನು ಆತ ಯಾವಾಗಲೂ ರಕ್ಷಿಸುತ್ತಾನೆ.

ಮನಸ್ಸು ಪವಿತ್ರವಾಗಿದ್ದರೆ ಏಕಾಗ್ರತೆ, ಧ್ಯಾನ ಯಾಕೆ ಸಾಧ್ಯವಾಗದು? ದೇವರ ದರ್ಶನ ಯಾಕೆ ಉಂಟಾಗದು? ಜಪ ಮಾಡಲು ಕುಳಿತಾಗ ದೇವರ ನಾಮ ಮನಸ್ಸಿನಿಂದ ನಿರಂತರ ತಾನಾಗಿಯೇ ಮೇಲೇಳುವುದು, ಅದಕ್ಕೆ ಪ್ರಯತ್ನ ಬೇಕಾಗಿಯೇ ಇಲ್ಲ.





ಅಂತರಂಗದಲ್ಲಿ ಭಕ್ತಿ ಇರಲಿ, ಕುತಂತ್ರ ಮತ್ತು ವೇಷ ಇವುಗಳನ್ನು ತ್ಯಜಿಸಿ. ಯಾರು ಆಫೀಸಿನಲ್ಲಿ ಅಥವಾ ವ್ಯಾಪಾರದ ವ್ಯವಹಾರದಲ್ಲಿರುವರೋ ಅವರು ಕೂಡ ಸತ್ಯಸಂಧರಾಗಿರಬೇಕು. ಕಲಿಯುಗದಲ್ಲಿ ಸತ್ಯವೇ ತಪಸ್ಸು.

— ಶ್ರೀರಾಮಕೃಷ್ಣರು



ದೇವರನ್ನು ಹೊರತಾದ ಯಾವುದೇ ವಸ್ತುವಿನ ಕಡೆಗೆ ಮನಸ್ಸು ಹರಿದರೆ, ಆ ವಸ್ತು ಕ್ಷಣಿಕವೆಂದು ಭಾವಿಸು. ಅನಂತರ ಮನಸ್ಸನ್ನು ಭಗವಂತನ ಪವಿತ್ರವಾದ ಪಾದಪದ್ಮಗಳಿಗೆ ಅರ್ಪಿಸಿ ಶರಣಾಗತನಾಗು.

— ಶ್ರೀಮಾತೆ ಶಾರದಾದೇವಿ



ಜೀವನದಲ್ಲಿ ನಮಗೆ ಶ್ರೇಷ್ಠವಾದ ಮಾರ್ಗದರ್ಶಕವೇ ಶಕ್ತಿ. ಇತರ ಕಡೆಗಳಲ್ಲಿರುವಂತೆ ಧರ್ಮಕ್ಷೇತ್ರದಲ್ಲಿಯೂ ನಿಮ್ಮನ್ನು ದುರ್ಬಲರನ್ನಾಗಿ ಮಾಡುವುದನ್ನೆಲ್ಲಾ ತ್ಯಜಿಸಿ. ಅದರೊಂದಿಗೆ ಯಾವ ವ್ಯವಹಾರವನ್ನೂ ಇಟ್ಟುಕೊಳ್ಳಬೇಡಿ.

— ಸ್ವಾಮಿ ವಿವೇಕಾನಂದ

ಕೈಯಲ್ಲಿ ಹಿಡಿದ ಹೂವು ಸುವಾಸನೆಯನ್ನು ಬೀರುವಂತೆ, ತೇಯುವಾಗ ಗಂಧವು ಸುಗಂಧವನ್ನು ಹೊರಹೊಮ್ಮಿಸುವಂತೆ, ಯಾವಾಗಲೂ ದೇವರ ಚಿಂತನೆ ಮಾಡುವುದರಿಂದ ಆಧ್ಯಾತ್ಮಿಕ ಜಾಗೃತಿ ಉಂಟಾಗುವುದು. ಕಠಿಣ ತಪಸ್ಸಿನ ಮೂಲಕ ಮನಸ್ಸು ಶುದ್ಧವಾಗುವುದು. ನಿತ್ಯ ಸಾಧನೆಯ ವಿನಾ ಏನನ್ನೂ ಪಡೆಯಲಾಗುವುದಿಲ್ಲ.

— ಶ್ರೀಮಾತೆ ಶಾರದಾದೇವಿ





ಶ್ರೀಮಾತೆಯವರ ಜಯಂತಿಯ ಹಾರ್ದಿಕ ಶುಭಾಶಯಗಳು



ಸಾಧನೆಯ ಬಗೆಗಳು

ಪ್ರಪಂಚದಲ್ಲಿ ಸಸ್ಯ, ಪ್ರಾಣಿ-ಪಕ್ಷಿ, ಕ್ರಿಮಿಕೀಟಗಳು ಹಾಗೂ ಮಾನವ — ಎಲ್ಲರೂ ಜೀವಿಸುವುದು ಬೇರೆ ಬೇರೆ ರೀತಿಯಲ್ಲಿ. ಒಂದೊಂದು ಜೀವಿಗೂ ಅದರದೇ ಆದ ಜೀವನ ವಿಧಾನವಿದೆ. ಆದರೂ ಜೀವಿಗಳೆಲ್ಲ ಒಬ್ಬಂಟಿಯಾಗಿ ಬದುಕಲಾರವು. ಗುಂಪು, ಹಿಂಡು, ಬಳಗ, ಸಮಾಜ — ಇವು ಒಂದು ಜೀವಿಯ, ಒಂದು ವ್ಯಕ್ತಿಯ ಜೀವನಕ್ರಮವನ್ನು ರೂಪಿಸುತ್ತವೆ. ಆಹಾರ, ನಿದ್ರೆ, ವಿನೋದ-ವಿಹಾರ, ಸಂತಾನೋತ್ಪತ್ತಿ, ವಾಸಕ್ಕೆ ಯೋಗ್ಯವಾದ ಸ್ಥಳ — ಇವೆಲ್ಲವನ್ನೂ ಸಂಪಾದಿಸಿ ಬದುಕುವ ವಿಧಾನವೇ ಜೀವಿಗಳಲ್ಲಿ ಕಂಡುಬರುವ ಸಾಮಾನ್ಯ ಸಂಗತಿ; ಅವುಗಳ ಸಹಜ ಕ್ರಿಯೆ. ಇದಕ್ಕೆ ಮಾನವನೂ ಹೊರತಲ್ಲ. ವಿದ್ಯಾಭ್ಯಾಸ, ಚಿಂತನೆ, ಬುದ್ಧಿಶಕ್ತಿ ಇವು ಮಾನವನಲ್ಲಿ ಕಂಡುಬರುವ ವಿಶಿಷ್ಟ ಸ್ವಭಾವವಾಗಿದ್ದರೂ, ಜೀವನದ ಹಲವು ಸಂಗತಿಗಳನ್ನು ಗಮನಿಸುವಾಗ ಅವನಿಗೂ ಉಳಿದ ಜೀವಿಗಳಿಗೂ ಹೆಚ್ಚಿನ ವ್ಯತ್ಯಾಸವಿಲ್ಲ. ಜನನ-ಮರಣದ ನಡುವಿನ ಬದುಕು ಆಯಾ ಜೀವಿಗಳ ಆಶೋತ್ತರಗಳನ್ನು ಪೂರೈಸುತ್ತ ಅವುಗಳನ್ನು ಮುನ್ನಡೆಸುತ್ತದೆ.

ವಿಭಿನ್ನ ಮಾರ್ಗ

ಆದರೆ ಮಾನವರಲ್ಲಿ ಕೆಲವರು ಮಾತ್ರ ತಮ್ಮ ಜೀವನ ವಿಧಾನವನ್ನು ಸಂಪೂರ್ಣ ಬದಲಾಯಿಸಿಕೊಂಡರು. ಬೇರೆ ಯಾವ ಜೀವಿಗಳಿಗೂ ಇಲ್ಲದ ಹೊಸ ಒಂದು ಉದ್ದೇಶ ಇವರಿಗೆ ಕಂಡುಬಂತು. ಕೇವಲ ಆಹಾರ, ನಿದ್ರೆ, ಮೈಥುನ, ಸಂಪಾದನೆ, ವಾಸಗೃಹ, ಸುಖ ಸವಲತ್ತು ಇಷ್ಟರಿಂದಲೇ ಅವರು ತೃಪ್ತರಾಗಲಿಲ್ಲ. ಇವುಗಳಾಚೆಗೆ, ವ್ಯಕ್ತಪ್ರಪಂಚದ ಆಚೆಗೆ ಇನ್ನೇನೋ ಇದೆ; ಎಲ್ಲವನ್ನೂ ನಿಯಂತ್ರಿಸುವ, ಎಲ್ಲದಕ್ಕೂ ಕಾರಣವಾದ ಒಂದು ಶಕ್ತಿಯಿದೆ; ಅದನ್ನು ಅರಿತುಕೊಳ್ಳಬೇಕು, ಅದನ್ನು ಹೊಂದಬೇಕು ಎಂಬ ಹೊಸ ಒಂದು ಲಕ್ಷ್ಯ ಅವರದಾಯಿತು. ದೇವರ ಅಸ್ತಿತ್ವವನ್ನು ಆಧರಿಸಿ, ಅದನ್ನು ಸಾಕ್ಷಾತ್ಕರಿಸಿಕೊಳ್ಳುವ ಅಂತಿಮ ಗುರಿಯನ್ನೇ ಜೀವನದ ಪರಮ ಉದ್ದೇಶವನ್ನಾಗಿ ಮಾಡಿಕೊಂಡ ಕೆಲವೇ ಕೆಲವು ಮಂದಿ ಧೀರರು ('ಬುದ್ಧಿವಂತ' ಎಂದು ಅಕ್ಷರಶಃ ಅರ್ಥ) ಎಲ್ಲರಿಗಿಂತ ಪ್ರತ್ಯೇಕವಾಗಿ ತಮ್ಮ ಜೀವನವನ್ನು ಬದಲಾಯಿಸಿಕೊಂಡರು. ಏಕಾಂತ ವಾಸ, ಧ್ಯಾನ-ಚಿಂತನೆ, ಉಪಾಸನೆ, ಅಧ್ಯಯನ ಇವುಗಳಲ್ಲೇ ಮುಳುಗಿ, ಸತ್ಯಾನ್ವೇಷಣೆಯಲ್ಲಿ ತೊಡಗಿಕೊಂಡರು. ಕ್ರಮೇಣ ಅವರಿಗೆ ಪರಮಸತ್ಯ ಗೋಚರವಾಯಿತು. ಅದನ್ನು ಅವರು ಸಮಾಜದ ಇತರರಿಗೂ ತಿಳಿಸಲೆಂದೇ ಆ ಸತ್ಯಕ್ಕೆ ಮಾತಿನ ರೂಪ ಕೊಟ್ಟರು. ಅಂಥ ಮಾತುಗಳನ್ನೇ ವೇದ, ಮಂತ್ರ ಎಂದೆಲ್ಲ ಕರೆದರು. ಅವರ ಉನ್ನತ, ಶ್ರೇಷ್ಠ ಬದುಕನ್ನು ಕಂಡು, ಏಕಾಂತದಲ್ಲಿ ಧ್ಯಾನಮಯ ಬದುಕನ್ನು ನಡೆಸುವ ಅವರನ್ನು ಜನರು ಋಷಿ, ಮುನಿ, ಸಂನ್ಯಾಸಿ ಎಂದು ಕರೆದು ಪೂಜಿಸಿದರು; ಸಮಾಜದಲ್ಲಿ ಅವರಿಗೆ ಉನ್ನತ ಸ್ಥಾನವನ್ನು ನೀಡಿದರು. ಹೀಗೆ ಕೆಲವೇ ಮಂದಿ ಕಂಡುಕೊಂಡ ಈ ವಿಭಿನ್ನ ಮಾರ್ಗ ನಮ್ಮ ದೇಶದಲ್ಲಿ ಮುಂದೆ ಇಡೀ ಸಮಾಜವನ್ನೇ ಪ್ರಭಾವಿಸಿತು. ದೇವರು, ಧರ್ಮ, ಅಧ್ಯಾತ್ಮ ಸಮಾಜದ ವಿವಿಧ ಮಜಲುಗಳನ್ನು ಪ್ರವೇಶಿಸಿತು. ಕುಟುಂಬ ಜೀವನದಿಂದ ಪ್ರತ್ಯೇಕವಾಗಿ ಬದುಕುತ್ತ ಭಗವದ್ ಸಾಕ್ಷಾತ್ಕಾರಕ್ಕಾಗಿ ಎಲ್ಲವನ್ನೂ ತ್ಯಜಿಸಿದವರಿಗೆ ಮಾತ್ರವಲ್ಲ; ಸಾಮಾನ್ಯ ಜೀವನ ನಡೆಸುವ ಎಲ್ಲರಿಗೂ ದೇವರು, ಧರ್ಮ ಅಗತ್ಯವೆಂಬುದನ್ನು ನಮ್ಮ ದೇಶ ಕಂಡುಕೊಂಡಿತು.

ಹಲವು ಮಾರ್ಗಗಳ ಅಗತ್ಯ

ಆಧ್ಯಾತ್ಮಿಕ ವಿಚಾರಗಳು, ದೇವರು-ಧರ್ಮ ಕೆಲವರಿಗೆ ಮಾತ್ರ ಸಾಲದು; ಸಮಾಜದ ಎಲ್ಲರಿಗೂ ಅದು ಅಗತ್ಯವೆಂಬ ಕಾರಣಕ್ಕಾಗಿಯೇ ನಮ್ಮಲ್ಲಿ ಈ ಬಗೆಯ ಧಾರ್ಮಿಕ ಜೀವನವನ್ನು ನಡೆಸುವುದಕ್ಕೆ ನೂರಾರು ಮಾರ್ಗಗಳು ರೂಪುಗೊಂಡವು. ಎಲ್ಲವನ್ನೂ ತ್ಯಜಿಸಿ ಸತ್ಯಾನ್ವೇಷಣೆಗೆ ಹೊರಟ 'ಧೀರ'ರ ಮಾತೇ ಬೇರೆ; ಅವರು ಸತ್ಯಾನ್ವೇಷಣೆಗೆ ತಮ್ಮದೇ ಆದ ಮಾರ್ಗ ಕಂಡುಕೊಳ್ಳಬಲ್ಲರು. ಆದರೆ ಉಳಿದವರಿಗೆ ಯೋಗ್ಯಮಾರ್ಗದರ್ಶನ, ಆಚರಣೆಗೆ ಒಂದು ವಿಧಾನ, ಆ ವಿಧಾನವನ್ನು ಕಲಿಸುವ ಪರಂಪರೆ ಎಲ್ಲವೂ ಅಗತ್ಯವಾಯಿತು. ಹೀಗೆ ಶತಶತಮಾನಗಳ ದೀರ್ಘ ಕಾಲದಲ್ಲಿ ರೂಪುಗೊಂಡ ಆಧ್ಯಾತ್ಮಿಕ ಮಾರ್ಗಗಳು ಅನೇಕ. ಸಮಾಜದಲ್ಲಿ ವ್ಯಕ್ತಿ-ವ್ಯಕ್ತಿಗಳ ನಡುವೆ ಸ್ವಭಾವ, ಸಾಮರ್ಥ್ಯ, ಮನೋಭಾವಗಳಲ್ಲಿ ಎಲ್ಲೆಡೆ ವ್ಯತ್ಯಾಸ ಕಂಡುಬರುತ್ತದೆ. ಅದಕ್ಕೆ ಅನುಗುಣವಾಗಿ ವಿಭಿನ್ನ ವ್ಯಕ್ತಿಗಳಿಗೆ ಅನುಸರಿಸಲು ಯೋಗ್ಯವಾದ ಹಲವಾರು ಮಾರ್ಗಗಳು ರೂಪುಗೊಂಡವು. ಯಾವ ಮಾರ್ಗವನ್ನಾದರೂ ಅನುಸರಿಸಿ ದೇವರ ಕಡೆಗೆ ಸಾಗುವ ಆಯ್ಕೆ, ಸ್ವಾತಂತ್ರ್ಯ ನಮ್ಮ ದೇಶದಲ್ಲಿ ಮಾತ್ರ ಕಂಡುಬಂತು.

ವೇದ, ಉಪನಿಷತ್ತುಗಳ ಅತಿಪ್ರಾಚೀನ ಕಾಲದಲ್ಲೇ ಸತ್ಯಾನ್ವೇಷಣೆಗೆ ಹಲವು ಮಾರ್ಗಗಳಿದ್ದಂತೆ ನಮಗೆ ತಿಳಿದು ಬರುತ್ತದೆ. ಅದು ಆಧ್ಯಾತ್ಮಿಕ ಅನ್ವೇಷಣೆಯ ಕಾಲ, ಬೆಳವಣಿಗೆಯ ಕಾಲ. ಆದ್ದರಿಂದ ಅವರು ಕಂಡ ಸತ್ಯದ ದರ್ಶನವೂ ಬದಲಾಗುತ್ತ

ಬಂತು; ತಲುಪಬೇಕಾದ ಗುರಿಯೂ ಬದಲಾಗುತ್ತ ಬಂತು. ಅದಕ್ಕೆ ತಕ್ಕಂತೆ ಗುರಿಯನ್ನು ತಲುಪುವ ವಿಧಾನವೂ ಮಾರ್ಪಡುತ್ತ ಬಂತು. ವೈದಿಕ ಜೀವನದ ಆರಂಭದಲ್ಲಿ ಯಾಗ, ಯಜ್ಞ, ಉಪಾಸನೆಗಳ ಮೂಲಕ ಇಷ್ಟಾರ್ಥಗಳನ್ನು ಪೂರೈಸುವುದು ಹಾಗೂ ಸ್ವರ್ಗವೇ ಮೊದಲಾದ ಲೋಕಗಳನ್ನು ಹೊಂದುವುದು ಪ್ರಧಾನ ಗುರಿಯಾಗಿ ಕಂಡುಬಂದರೆ, ಅಂತಿಮ ಭಾಗದಲ್ಲಿ (ಅಥವಾ ಉಪನಿಷತ್ತುಗಳ ಕಾಲಘಟ್ಟದಲ್ಲಿ) ಸತ್ಯಾನ್ವೇಷಣೆ, ಆತ್ಮ-ಬ್ರಹ್ಮ ಇದರ ಸಾಕ್ಷಾತ್ಕಾರ, ವಿಚಾರ-ಚಿಂತನೆ, ಧ್ಯಾನ-ಯೋಗ ಮೊದಲಾದ ಆಧ್ಯಾತ್ಮಿಕ ಮಾರ್ಗಗಳು ಕಂಡುಬರುತ್ತವೆ. ಹೀಗೆ ಉಪಾಸನೆ ಅಥವಾ ಭಕ್ತಿ ವೈದಿಕ ಜೀವನದ ಮೊದಲ ಘಟ್ಟದಲ್ಲೂ, ವಿಚಾರ ಅಥವಾ ಜ್ಞಾನ ಅಂತಿಮ ಘಟ್ಟದಲ್ಲೂ ಪ್ರಧಾನವಾಗಿ ರೂಪುಗೊಂಡವು. ಮುಂದೆ ಇವುಗಳನ್ನೇ ವಿವಿಧ 'ಯೋಗ'ಗಳಾಗಿ, ಅಂದರೆ ಸಾಧನೆಯ ಮಾರ್ಗಗಳಾಗಿ ಪರಿಗಣಿಸಿದ್ದನ್ನು ಕಾಣುತ್ತೇವೆ. ಭಗವದ್ಗೀತೆಯಲ್ಲಿ ಕಂಡುಬರುವ ವಿವಿಧ ಯೋಗಗಳೇ ಇದಕ್ಕೆ ಯೋಗ್ಯ ನಿದರ್ಶನ.

ಜ್ಞಾನ: ಪ್ರಾಚೀನ ಮಾರ್ಗ

ಪ್ರಪಂಚದ ಹಲವು ಧರ್ಮಗಳಲ್ಲಿ ಜ್ಞಾನಮಾರ್ಗವೇ ಅಂತಿಮ ಗುರಿಯಾದ ಭಗವಂತನನ್ನು ಸೇರುವ ಮಾರ್ಗವೆಂದು ಪರಿಗಣಿಸಿದ್ದನ್ನು ಕಾಣುತ್ತೇವೆ. ವಿಶೇಷವಾಗಿ, ಭಾರತದಲ್ಲಿ ಹುಟ್ಟಿ ಬೆಳೆದ ಹಿಂದೂ, ಬೌದ್ಧ ಧರ್ಮಗಳಲ್ಲಿ ಜ್ಞಾನವು ಸಾಧನ ಮಾರ್ಗವಾಗಿ ಪರಿಗಣಿಸಲ್ಪಟ್ಟಿದೆ. ತಪಸ್ಸು, ಧ್ಯಾನ, ನಿದಿಧ್ಯಾಸನ, ಅರಿಯುವುದು – ಈ ಎಲ್ಲ ಮಾತುಗಳಿಂದ ವಿವರಿಸಲಾದ ಈ ಪ್ರಕ್ರಿಯೆ ಭಗವಂತನನ್ನು ತಲುಪಲು ಇರುವ ಮಾರ್ಗವೆಂದೇ ಹಳೆಯ ಶಾಸ್ತ್ರಗ್ರಂಥಗಳೆಲ್ಲ ವಿವರಿಸುತ್ತವೆ. ಉಪನಿಷತ್ತುಗಳಲ್ಲಿ ಜ್ಞಾನ ಮಾರ್ಗದ ವಿಕಾಸವನ್ನು ಸ್ಪಷ್ಟವಾಗಿ ನಾವು ಗುರುತಿಸಬಹುದು. ಜ್ಞಾನ-ಅಜ್ಞಾನ ಇವುಗಳಿಗಿರುವ ಅಂತರ, ವಿವೇಕಿ ಅಥವಾ ಬುದ್ಧಿವಂತನು ಜಗತ್ತಿನ ಅರ್ಥಶೂನ್ಯತೆಯನ್ನರಿತು ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬೇಕು, ಅದಕ್ಕಾಗಿ ಅಂತಹ ಧೀರನು ತನ್ನ ಅಂತರಂಗದಲ್ಲೇ ಆತ್ಮನನ್ನು ಕಂಡುಕೊಳ್ಳಬೇಕು— ಇಂತಹ ಮಾತುಗಳು ಉಪನಿಷತ್ತುಗಳಲ್ಲಿ ಕಂಡುಬರುತ್ತವೆ. ಯೋಗ, ಭಕ್ತಿ , ಇವುಗಳ ವಿಚಾರ ಕೂಡ ಉಪನಿಷತ್ತುಗಳಲ್ಲಿ ಅಲ್ಲಲ್ಲಿ ಕಂಡುಬರುವುದಿದ್ದರೂ, ಗುರುವಿನ ಉಪದೇಶದಂತೆ ಜ್ಞಾನಮಾರ್ಗದ ಮೂಲಕ ಸತ್ಯದ ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಅಲ್ಲಿನ ಪ್ರಧಾನ ವಿಧಾನ. (ಇದರ ನಂತರವೇ ನಮ್ಮಲ್ಲಿ ಜೈನ, ಬೌದ್ಧ ಧರ್ಮಗಳ ಉದಯವಾಯಿತು; ಅವುಗಳಲ್ಲಿ ಬೌದ್ಧಧರ್ಮವು ವೈದಿಕ ಪರಂಪರೆಗಿಂತ ಭಿನ್ನವಾಗಿ ನಡೆದರೂ, ಜ್ಞಾನ ಹಾಗೂ ವಿಚಾರವೇ ಅಂತಿಮ ಗುರಿಯನ್ನು ಹೊಂದಲು ಸಾಧನವೆಂಬುದನ್ನು ಎತ್ತಿಹಿಡಿಯಿತು.) ಹೀಗೆ ಉಪನಿಷತ್ತುಗಳಿಂದ ಆರಂಭಗೊಂಡ ಜ್ಞಾನಮಾರ್ಗದ ಪರಂಪರೆ ಮುಂದೆ ಷಡ್ದರ್ಶನಗಳ ಕಾಲದಲ್ಲಿ ಹಲವು ಮಂದಿ ಶ್ರೇಷ್ಠ ಸಾಧಕರ, ಋಷಿಮುನಿಗಳ ಮೂಲಕವೂ, ಶಂಕರ, ರಾಮಾನುಜ, ಮಧ್ವರೇ ಮೊದಲಾದ ಆಚಾರ್ಯರ ಮೂಲಕವೂ ವಿಸ್ತಾರಗೊಂಡಿತು. ಆಧುನಿಕ ಕಾಲದಲ್ಲಿ ಶ್ರೀರಾಮಕೃಷ್ಣ, ವಿವೇಕಾನಂದ, ಶ್ರೀರಮಣ ಮಹರ್ಷಿ, ಶ್ರೀ ಅರವಿಂದರು ಮುಂತಾದ ಸಂತರ ಪರಂಪರೆಯಲ್ಲೂ ಜ್ಞಾನಮಾರ್ಗ ಮತ್ತಷ್ಟು ವ್ಯಾಪಕಗೊಂಡಿತು. ಇತರ ಮಾರ್ಗಗಳ ಜೊತೆಗೆ ವಿಚಾರಮಾರ್ಗ ಇಂದಿಗೂ ಒಂದು ಪ್ರಧಾನ ಸಾಧನೆಯ ಮಾರ್ಗವಾಗಿ ಮುಂದುವರಿದಿದೆ.

ಕರ್ಮ: ಹಳೆಯ, ಹೊಸ ಯುಗಗಳಲ್ಲಿ

ಭಗವದ್ಗೀತೆಯಷ್ಟು ಪ್ರಾಚೀನ ಕಾಲದಲ್ಲಿಯೇ ಕರ್ಮಯೋಗವೆಂಬುದು ಸಾಕ್ಷಾತ್ಕಾರಕ್ಕೆ ಒಂದು ಮಾರ್ಗವಾಗಿ ಪರಿಗಣಿತವಾಗಿತ್ತು , ನಿಜ. ಆದರೆ ಅದಕ್ಕಿಂತಲೂ ಹಿಂದೆ ಇದೊಂದು ಸಾಧನೆಯ ಮಾರ್ಗ ಎಂಬುದಕ್ಕೆ ಹೆಚ್ಚಿನ ಪುರಾವೆ ನಮ್ಮ ವೈದಿಕ ಸಾಹಿತ್ಯದಲ್ಲಾಗಲಿ, ಇತರ ಪ್ರಾಚೀನ ಗ್ರಂಥಗಳಲ್ಲಾಗಲೀ ಕಂಡು ಬರುವುದಿಲ್ಲ. ಗೀತೆಯಲ್ಲಿ '**ಕರ್ಮಣೈವ ಹಿ ಸಂಸಿದ್ಧಿಂ ಆಸ್ಥಿತಾ ಜನಕಾದಯಃ**' *(ಗೀತೆ, ೩.೨೦)* ಎಂಬ ಮಾತು ಬರುತ್ತದೆ. ('ಜನಕನೇ ಮೊದಲಾದವರು ಕರ್ಮದ ಮೂಲಕವೇ ಸಿದ್ಧಿಯನ್ನು ಪಡೆದವರಲ್ಲವೆ?') ಇಲ್ಲಿ ಜನಕನು ಕರ್ಮಯೋಗದ ಮೂಲಕ ಸಿದ್ಧಿಯನ್ನು ಹೊಂದಿದನು ಅಥವಾ ಗುರಿ ತಲುಪಿದನು ಎಂಬ ಮಾತು, ಕರ್ಮಯೋಗವೊಂದು ಸಾಧನೆಯ ಮಾರ್ಗವಾಗಿ ಸ್ವೀಕೃತವಾದ ವಿಚಾರವನ್ನು ಸೂಚಿಸುತ್ತದೆ. ಆದರೆ 'ಜನಕಾದಯ:' ಎಂಬ ಮಾತು ಜನಕನಂತೆ ಇತರರೂ ಅದೇ ಮಾರ್ಗವನ್ನು ಅನುಸರಿಸಿ ಸಿದ್ಧಿಯನ್ನು ಹೊಂದಿದ್ದಾರೆ ಎಂಬುದನ್ನು ಹೇಳುತ್ತದೆ. ಹೀಗೆ ಕರ್ಮಯೋಗದ ಮೂಲಕ ಗುರಿಯನ್ನು ತಲುಪುವುದಾದರೂ ಹೇಗೆ? ಆಸಕ್ತಿಯಿಲ್ಲದೆ ಕರ್ಮ ಮಾಡುವ ಮೂಲಕ, ಫಲಾಪೇಕ್ಷೆಯಿಲ್ಲದೆ ಕರ್ಮ ಮಾಡುವ ಮೂಲಕ. ಗೀತೆ ವಿವರಿಸುವ ಈ ಬೋಧನೆ ಮುಂದೆ ಹೆಚ್ಚು ಪ್ರಚಲಿತವಾದಂತೆ ಕಂಡುಬರುವುದಿಲ್ಲ. ಏಕೆಂದರೆ ವಿವಿಧ ಧಾರ್ಮಿಕ ಪರಂಪರೆಗಳಲ್ಲಿ ಯೋಗ, ಜ್ಞಾನ, ಭಕ್ತಿ ಇವುಗಳ ಅನುಷ್ಠಾನ ವಿಪುಲವಾಗಿ ಕಂಡುಬರುತ್ತದೆ; ಆದರೆ ಕರ್ಮಯೋಗ ಮಾತ್ರ ಕಾಣಿಸುವುದಿಲ್ಲ. ಬಹುಶಃ ಪ್ರಾಚೀನ ಕರ್ಮಯೋಗದ ಪರಂಪರೆ ಮಧ್ಯಕಾಲದಲ್ಲಿ ಎಲ್ಲೋ ಸ್ಥಗಿತಗೊಂಡಿರಬಹುದೆ?

ಏನೇ ಇದ್ದರೂ, ಕರ್ಮಯೋಗಕ್ಕೆ ಮರುಹುಟ್ಟು ಬಂದಿರುವುದು ಸ್ವಾಮಿ ವಿವೇಕಾನಂದರಿಂದ ಎಂಬ ಅಂಶ ನಿರ್ವಿವಾದ. ಶ್ರೀರಾಮಕೃಷ್ಣರ 'ಶಿವಜ್ಞಾನೇ ಜೀವಸೇವಾ' (ಜೀವನಲ್ಲೇ ಶಿವನನ್ನು ಕಂಡು, ಈ ಜ್ಞಾನದಿಂದ ಜೀವಿಗಳ ಸೇವೆ ಮಾಡುವುದು) ಎಂಬ ಮಾತಿನಿಂದ ಹೊಸ ಬೆಳಕನ್ನು ಕಂಡ ಸ್ವಾಮೀಜಿ, ಈ ಮಾತಿನ ಹಿಂದೆ ಇದ್ದ ಅಗಾಧ ಅರ್ಥವನ್ನು ಕಂಡುಕೊಂಡರು. ಭರತಖಂಡದ ಹೀನ, ದೀನ ಸ್ಥಿತಿಗೆ ಸೂಕ್ತ ಪರಿಹಾರ ನೀಡಬಲ್ಲ ಸೇವೆಯ ಆದರ್ಶವು ಹೇಗೆ ಆಧ್ಯಾತ್ಮಿಕ ಆದರ್ಶವೂ ಆಗಿದೆ; ಹೇಗೆ ಅದ್ವೈತ ವೇದಾಂತದ ತತ್ತ್ವ ಈ ಮಾತಿನ ಹಿನ್ನೆಲೆಯಲ್ಲಿದೆ; ಎಲ್ಲ ಸಾಧನೆಯ ಮಾರ್ಗಗಳಿಗೂ ಇದು ಹೇಗೆ ಪೂರಕವಾದ ಮಾರ್ಗವಾಗಿದೆ ಎಂಬುದನ್ನು ಅವರು ಪ್ರಚುರಪಡಿಸಿದರು. ಒಬ್ಬ ವ್ಯಕ್ತಿಯ ಕರ್ಮಕ್ಷಯಕ್ಕಾಗಿ ಕರ್ಮಯೋಗವನ್ನು ಮಾಡುವ ಬಗೆಯನ್ನು ಅವರು ಹೊಸದಾಗಿ ತೋರಿಸಿಕೊಟ್ಟರು. ಅವರು ರಾಮಕೃಷ್ಣ ಮಹಾಸಂಘದ ಮೂಲಕ ಆರಂಭಿಸಿದ ಸೇವಾಕಾರ್ಯದ ಮೂಲಕ ಈ ಹೊಸ ಆದರ್ಶ ಭಾರತದೆಲ್ಲೆಡೆ ವ್ಯಾಪಿಸಿತು. ಇಂದು

ಹತ್ತುಹಲವು ಮಠ, ಆಶ್ರಮ, ಸಂಘಸಂಸ್ಥೆಗಳು ನಡೆಸುವ ಅನೇಕ ಸೇವಾಕಾರ್ಯಗಳಿಗೆ ಸ್ವಾಮೀಜಿಯವರು ತೋರಿಸಿಕೊಟ್ಟ ಈ ಕರ್ಮಯೋಗದ ಆದರ್ಶವೇ ಮೂಲಪ್ರೇರಣೆಯಾಗಿದೆ.

ಯೋಗ: ಅದರ ಹಲವು ರೂಪಗಳು

ಜ್ಞಾನಮಾರ್ಗದಂತೆ ಯೋಗಮಾರ್ಗವೂ ಅತ್ಯಂತ ಪ್ರಾಚೀನ. ಆದರೆ ಅದು ಒಂದು ಸಾಧನೆಯ ಮಾರ್ಗವಾಗಿ ಪೂರ್ಣಮಟ್ಟದಲ್ಲಿ ವಿಕಸನಗೊಂಡಿದ್ದು ಅನಂತರ; ದರ್ಶನಗಳ ಕಾಲಘಟ್ಟದಲ್ಲಿ. ಪ್ರಧಾನವಾಗಿ, ಪತಂಜಲಿಯ ಯೋಗದರ್ಶನವು ಮುಕ್ತಿಗಾಗಿ ಯೋಗಮಾರ್ಗವನ್ನು ಅನುಸರಿಸುವ ವಿಧಾನವನ್ನು ವಿವರಿಸುತ್ತದೆ. ಪತಂಜಲಿಯ ಕಾಲದಲ್ಲೇ ಅಷ್ಟೊಂದು ಪ್ರಬುದ್ಧವಾದ ಯೋಗ ಪರಂಪರೆಯಿತ್ತು ಎಂಬುದನ್ನು ಈ ಗ್ರಂಥದಿಂದಲೇ ನಾವು ತಿಳಿಯಬಹುದು. ಪತಂಜಲಿಯ ಯೋಗಸೂತ್ರಗಳಲ್ಲಿ ಹೇಳಿರುವ ಯೋಗವಿಧಾನವು ಮುಕ್ತಿಗಾಗಿ ಇರುವ ಮಾನಸಿಕ, ಆಧ್ಯಾತ್ಮಿಕ ಸಾಧನೆ. ದೈಹಿಕ ಯೋಗ ಕೇವಲ ಅಷ್ಟಾಂಗಯೋಗದ ಒಂದು ಅಂಗವಷ್ಟೇ ಆಗಿದೆ.

ಆದರೆ ಮುಂದೆ ದೈಹಿಕ ಯೋಗ ಹಾಗೂ ಪ್ರಾಣಾಯಾಮದ ಅಭ್ಯಾಸ ಇತರ ಯೋಗಶಾಸ್ತ್ರದ ಗ್ರಂಥಗಳಲ್ಲಿ ಹೆಚ್ಚು ಪ್ರಮುಖ ಸ್ಥಾನ ಪಡೆಯಿತು. ಕೇವಲ ಆಧ್ಯಾತ್ಮಿಕ ಸಾಧಕರು ಮಾತ್ರವಲ್ಲದೆ ಜನಸಾಮಾನ್ಯರೆಲ್ಲ ಯೋಗಾಭ್ಯಾಸ ಮಾಡುವ ಕ್ರಮ ಹೆಚ್ಚು ಪ್ರಚಲಿತವಾಯಿತು. ಆದರೆ ಅಲ್ಲಿ ಕೂಡ ಅಷ್ಟಾಂಗಯೋಗ ಒಂದು ಪ್ರಧಾನ ವಿಧಾನವಾಗಿ ಪರಿಗಣಿಸಲ್ಪಟ್ಟಿದೆ.

ಯೋಗಶಾಸ್ತ್ರವು ಪ್ರಧಾನವಾಗಿ ಸಾಂಖ್ಯದರ್ಶನವನ್ನು ಪ್ರಾಯೋಗಿಕವಾಗಿ ಅನುಸರಿಸುವ ಒಂದು ಪರಂಪರೆ. ಯೋಗಶಾಸ್ತ್ರದಲ್ಲಿ ಹೇಳಿರುವ ಏಕಾಗ್ರತೆ, ಸಂಯಮ, ಯಮನಿಯಮಾದಿ ಬಾಹ್ಯ-ಆಂತರಿಕ ಶುದ್ಧೀಕರಣ ಇವುಗಳನ್ನು ವೇದಾಂತವೇ ಮೊದಲಾದ ಇತರ ಸಂಪ್ರದಾಯಗಳೂ ತಮ್ಮ ಪರಂಪರೆಯಲ್ಲಿ ಅಳವಡಿಸಿಕೊಂಡಿವೆ. ಆದ್ದರಿಂದ ಯೋಗಶಾಸ್ತ್ರವು ಸಾಂಖ್ಯತತ್ತ್ವವನ್ನು ಮೀರಿ ಕೂಡ ಪ್ರಚಲಿತವಾಗಿದೆ. ಅದರಲ್ಲಿ ಹೇಳಿರುವ ಮನಸ್ಸಿನ ವಿಶ್ಲೇಷಣೆ ಹಾಗೂ ಸಾಧನೆಗೆ ಮನಸ್ಸನ್ನು ನಿಯಂತ್ರಿಸಿಕೊಳ್ಳುವ ವಿಧಾನ ಸರ್ವಮಾನ್ಯವಾಗಿದೆ ಎನ್ನಬೇಕು.

ಭಕ್ತಿ : ಅದರ ವ್ಯಾಪಕತೆ

ಉಳಿದೆಲ್ಲ ಸಾಧನೆಯ ಮಾರ್ಗಗಳಿಗಿಂತ ಭಾರತದಲ್ಲಿ ಹೆಚ್ಚು ವ್ಯಾಪಕವಾಗಿ ಮನ್ನಣೆ ಪಡೆದು, ಸಮಾಜದ ಎಲ್ಲ ಮಜಲುಗಳನ್ನು ಪ್ರವೇಶಿಸಿ, ಜನಸಾಮಾನ್ಯರೆಲ್ಲರ ನೆಚ್ಚಿನ ಆಧ್ಯಾತ್ಮಿಕ ಮಾರ್ಗವಾಗಿ ಮಾರ್ಪಟ್ಟಿರುವುದು ಭಕ್ತಿಮಾರ್ಗ. ಉಳಿದ ಮಾರ್ಗಗಳೊಂದಿಗೆ ಹೋಲಿಸಿದರೆ ಭಕ್ತಿಮಾರ್ಗ ಅನಂತರ ಬೆಳೆದು ಬಂದ ಪರಂಪರೆ. ಆದರೆ ಅದರ ಕುರುಹುಗಳನ್ನು ವೇದಗಳಲ್ಲಿನ ಸಂಹಿತಾಭಾಗಗಳಲ್ಲಿ ಕಾಣಬಹುದು. ಉಪಾಸನೆಯಾಗಿ ಅಲ್ಲಿ ಕಾಣಿಸಿಕೊಂಡ ಭಕ್ತಿ, ಮುಂದೆ ಭಕ್ತಿಪಂಥದ ಉದಯ ಹಾಗೂ ಪ್ರಸರಣದಿಂದ ಎಲ್ಲೆಡೆ ವ್ಯಾಪಿಸಿತು. ಬೇರೆ ಯಾವ ಮಾರ್ಗಗಳಿಗಿಂತಲೂ ಭಕ್ತಿ ಪಂಥದಲ್ಲಿ ಹೆಚ್ಚು ಸಂಖ್ಯೆಯ ಸಾಧು, ಸಂತರು ಹುಟ್ಟಿ ಬಂದರು; ಹಾಗೂ, ಜನಸಾಮಾನ್ಯರಿಗೆಲ್ಲ ಅನುಸರಿಸಬಹುದಾದ ಸುಲಭವೂ ವೈವಿಧ್ಯಪೂರ್ಣವೂ ಆದ ಸಾಧನ ವಿಧಾನ ಅದಾಗಿದೆ. ಇದರಿಂದಾಗಿ ಈ ಮಾರ್ಗ ತುಂಬ ಜನಪ್ರಿಯವಾಯಿತು. ಅದ್ವೈತಾಚಾರ್ಯರಾದ ಶ್ರೀಶಂಕರರು ಜ್ಞಾನಮಾರ್ಗವನ್ನೇ ಎತ್ತಿ ಹಿಡಿದಿದ್ದರೂ, ಭಕ್ತಿ ಹಾಗೂ ಉಪಾಸನೆ ಸಾಧನೆಗೆ ತುಂಬ ಉಪಯುಕ್ತವೆಂಬುದನ್ನು ಅವರು ಮರೆಯಲಿಲ್ಲ. ಇನ್ನು ವಿಶಿಷ್ಟಾದ್ವೈತ, ದ್ವೈತ ಹಾಗೂ ಇತರ ಮತಗಳ ಆಚಾರ್ಯರುಗಳಂತೂ ಭಕ್ತಿಯೇ ಭಗವಂತನ ಸಾಕ್ಷಾತ್ಕಾರಕ್ಕೆ ಅನಿವಾರ್ಯವಾದ ಅಂಶ ಎಂದು ಪ್ರತಿಪಾದಿಸಿದರು. ಎಲ್ಲಕ್ಕಿಂತ ಮುಖ್ಯವಾಗಿ ಅವತಾರ ಪುರುಷರಾದ ಶ್ರೀಕೃಷ್ಣ, ಶ್ರೀಚೈತನ್ಯ , ಶ್ರೀರಾಮಕೃಷ್ಣರು ಭಕ್ತಿಯ ಹಿರಿಮೆಯನ್ನು ಸಾರಿದರು; ಎಲ್ಲರಿಗೂ ಅದನ್ನೇ ಉಪದೇಶಿಸಿದರು. ಇದಲ್ಲದೆ, ರಾಮಾನಂದ, ಕಬೀರ, ಗುರುನಾನಕ್, ಮೀರಾಬಾಯಿ, ತುಕಾರಾಮ, ಪುರಂದರದಾಸರು, ಬಸವಣ್ಣ ಮುಂತಾದ ಸಂತರ ಜೀವನದ ಪ್ರಭಾವ ಹಾಗೂ ಅವರ ಬೋಧನೆಗಳು ಜನಸಾಮಾನ್ಯರ ಹೃದಯದಲ್ಲಿ ಅಚ್ಚೊತ್ತಿ ನಿಂತವು. ಆರಂಭಿಕ ಹಂತದಿಂದ ಹಿಡಿದು ಭಗವಂತನ ಸಾಕ್ಷಾತ್ಕಾರದವರೆಗೂ ಭಕ್ತಿಯ ವಿವಿಧ ಹಂತಗಳು ಆಚರಣೆಯಲ್ಲಿ ಕಂಡುಬರುತ್ತವೆ; ಅವು ಸಾಧಕನನ್ನು ಗುರಿಯತ್ತ ಸುರಕ್ಷಿತವಾಗಿ ಕೊಂಡೊಯ್ಯುವುವು.

ಸ್ವಾಮೀಜಿ ಮತ್ತು ವಿವಿಧ ಮಾರ್ಗಗಳ ಸಮನ್ವಯ

ಸ್ವಾಮಿ ವಿವೇಕಾನಂದರು ಹತ್ತಾರು ಮಾರ್ಗಗಳನ್ನು, ಪ್ರಧಾನವಾಗಿ ರಾಜಯೋಗ, ಕರ್ಮಯೋಗ, ಭಕ್ತಿಯೋಗ ಹಾಗೂ ಜ್ಞಾನಯೋಗ — ಇವು ನಾಲ್ಕನ್ನು ಸಾಧನೆಯ ಮಾರ್ಗವಾಗಿ ಅನುಸರಿಸಲು ಬೋಧಿಸುತ್ತಾರೆ. ಅವರು ಹೇಳುವ ಈ ಯೋಗ ಸಮನ್ವಯ ಅತ್ಯಂತ ಪ್ರಸಿದ್ಧವೂ ಸರ್ವಮಾನ್ಯವೂ ಆಗಿದೆ. 'ರಾಜಯೋಗ'ದ ಮುನ್ನುಡಿಯಲ್ಲಿ ಹೇಳಿರುವ ಈ ಮಾತುಗಳಲ್ಲಿ ಸ್ವಾಮೀಜಿಯವರ ಸಮನ್ವಯದೃಷ್ಟಿ ಸ್ಪಷ್ಟವಾಗಿ ಮೂಡಿ ಬಂದಿದೆ:

"ಪ್ರತಿಯೊಂದು ಆತ್ಮನಲ್ಲಿಯೂ ದಿವ್ಯತೆ ಹುದುಗಿದೆ. ಈ ಸುಪ್ತವಾದ ದಿವ್ಯತೆಯನ್ನು ಬಾಹ್ಯ ಮತ್ತು ಆಂತರಿಕ ಪ್ರಕೃತಿಯ ನಿಗ್ರಹದಿಂದ ವ್ಯಕ್ತಪಡಿಸುವುದೇ ಜೀವನದ ಗುರಿ.

ಇದನ್ನು ಕರ್ಮಯೋಗದಿಂದಾಗಲಿ, ಭಕ್ತಿಯೋಗದಿಂದಾಗಲಿ, ರಾಜಯೋಗದಿಂದಾಗಲಿ, ಜ್ಞಾನಯೋಗದಿಂದಾಗಲಿ, ಯಾವುದಾದರೂ ಒಂದು ಮಾರ್ಗದಿಂದ ಅಥವಾ ಎಲ್ಲಾ ಮಾರ್ಗಗಳ ಸಂಯೋಗದಿಂದ ಆಗಲಿ ಸಾಧಿಸಿ ಮುಕ್ತರಾಗಿ.

ಇದೇ ಧರ್ಮದ ಸರ್ವಸ್ವ. ಸಿದ್ಧಾಂತ, ನಂಬಿಕೆ, ಬಾಹ್ಯಾಚಾರ, ಪವಿತ್ರ ಗ್ರಂಥ, ದೇವಸ್ಥಾನ, ವಿಗ್ರಹ — ಇವೆಲ್ಲ ಗೌಣ." ❋

ಡಿಸೆಂಬರ್ ತಿಂಗಳ ಕಾರ್ಯಕ್ರಮಗಳು

೩	ಸೋಮವಾರ	ಏಕಾದಶಿ
೧೭	ಸೋಮವಾರ	ಸ್ವಾಮಿ ಪ್ರೇಮಾನಂದ ಜಯಂತಿ
೧೮	ಮಂಗಳವಾರ	ಏಕಾದಶಿ
೨೪	ಸೋಮವಾರ	ಕ್ರಿಸ್‌ಮಸ್ ಈವ್
೨೮	ಶುಕ್ರವಾರ	ಶ್ರೀಶಾರದಾದೇವಿ ಜಯಂತಿ

ಸಾಧಕನ ಭಾವಗಳು



❁ ಆತನಿಗೆ ಹಲವಾರು ವಿಧದಿಂದ ಸೇವೆ ಸಲ್ಲಿಸಬಹುದು. ಪ್ರೇಮಿಕ ಭಕ್ತ ಆತನೊಡನೆ ವಿವಿಧ ರೂಪದಲ್ಲಿ ಆನಂದಪಡುತ್ತಾನೆ. ಕೆಲವು ವೇಳೆ ಯೋಚಿಸುತ್ತಾನೆ, 'ನೀನು ತಾವರೆ, ನಾನು ದುಂಬಿ' ಎಂದು. ಇನ್ನು ಕೆಲವು ವೇಳೆ ಭಾವಿಸುತ್ತಾನೆ, 'ನೀನು ಸಚ್ಚಿದಾನಂದ ಸಾಗರ, ನಾನು ಅದರಲ್ಲಿ ಮೀನು' ಎಂದು. ಮತ್ತೆ ಕೆಲವು ವೇಳೆ ಯೋಚಿಸುತ್ತಾನೆ, 'ನಾನು ನಿನ್ನ ನರ್ತಕಿ' ಎಂದು. ಆತನ ಮುಂದೆ ಹಾಡುತ್ತಾನೆ, ನರ್ತಿಸುತ್ತಾನೆ. ಕೆಲವು ವೇಳೆ ಸಖೀಭಾವ-ದಾಸೀಭಾವ. ಕೆಲವು ವೇಳೆ ವಾತ್ಸಲ್ಯಭಾವ-ಯಶೋದೆಯಂತೆ. ಕೆಲವು ವೇಳೆ ಸತೀಭಾವ-ಮಧುರಭಾವ-ಗೋಪಿಯರಂತೆ.

❁ ಬಲರಾಮ ಕೆಲವು ವೇಳೆ ಸಖನ ಭಾವದಲ್ಲಿ ಇರುತ್ತಿದ್ದ. ಕೆಲವು ವೇಳೆ ಯೋಚಿಸುತ್ತಿದ್ದ, 'ನಾನು ಕೃಷ್ಣನ ಛತ್ರಿ ಮತ್ತು ಪೀಠ ಆಗಿದ್ದೇನೆ' ಎಂದು. ವಿವಿಧ ರೀತಿಯಿಂದ ಆತನ ಸೇವೆ ಮಾಡುತ್ತಿದ್ದ.

❁ ನೀವು ಈ ಮಾತುಕತೆಗಳನ್ನೆಲ್ಲ ಕೇಳುತ್ತಿದ್ದೀರಿ. ಅರಗಿಸಿಕೊಳ್ಳಲು ಪ್ರಯತ್ನಿಸಿ. ಪ್ರಾಪಂಚಿಕರು ಸಾಧುಗಳ ಹತ್ತಿರಕ್ಕೆ ಬಂದಾಗ ತಮ್ಮ ಪ್ರಾಪಂಚಿಕ ಭಾವನೆ, ವಿಷಯಚಿಂತನೆ ಇವನ್ನೆಲ್ಲ ತಮ್ಮ ಹೃದಯದಲ್ಲಿ ಬಚ್ಚಿಟ್ಟು ಕುಳಿತಿರುತ್ತಾರೆ. ಅಲ್ಲಿಂದ ಹೊರಟು ಹೋದ ನಂತರ ಅವನ್ನೆಲ್ಲ ಹೊರಕ್ಕೆ ತರುತ್ತಾರೆ. ಪಾರಿವಾಳ ಬಟಾಣಿಯನ್ನು ತಿನ್ನುತ್ತದೆ. ನೋಡುವುದಕ್ಕೆ ಅದು ಅವನ್ನೆಲ್ಲ ಅರಗಿಸಿಕೊಂಡುಬಿಟ್ಟಂತೆ ಕಾಣುತ್ತದೆ. ಆದರೆ ಅದು ತನ್ನ ಗಂಟಲಿನೊಳಗೇ ಅದನ್ನೆಲ್ಲ ಇಟ್ಟುಕೊಂಡಿರುತ್ತದೆ. ಅಲ್ಲಿ ಬಟಾಣಿ ಗಿಜಿಗಿಜಿ ಅನ್ನುತ್ತಿರುತ್ತದೆ.

❁ ಸಂಧ್ಯಾ ಸಮಯದಲ್ಲಿ ಎಲ್ಲಾ ಕೆಲಸಗಳನ್ನು ಬಿಟ್ಟು ಆತನನ್ನು ಕರೆಯಬೇಕು. ಕತ್ತಲೆ ಆತನ ನೆನಪು ತರುತ್ತದೆ. ಆಗ, 'ಈಗ ತಾನೆ ಎಲ್ಲಾ ಕಾಣಿಸಿಕೊಳ್ಳುತ್ತಿತ್ತು; ಈ ರೀತಿಯಾಗಿ ಮಾಡಿಬಿಟ್ಟವನು ಯಾರು!' ಎಂಬ ಭಾವನೆ ಬರುತ್ತದೆ. ನೋಡಿ, ಮುಸಲ್ಮಾನರು ಎಲ್ಲಾ ಕೆಲಸಗಳನ್ನು ಬಿಟ್ಟು ಸಾಯಂಕಾಲ ನಮಾಜು ಮಾಡುತ್ತಾರೆ.

❁ ಭಕ್ತ : ಜಪ ಮಾಡುವುದು ಒಳ್ಳೆಯದೇನು?

ಶ್ರೀರಾಮಕೃಷ್ಣರು: ಹೌದು, ಜಪದಿಂದ ಆತನನ್ನು ಪಡೆಯಬಹುದು. ನಿರ್ಜನ ಪ್ರದೇಶದಲ್ಲಿ ಏಕಾಂತವಾಗಿ ಆತನ ನಾಮವನ್ನು ಜಪಮಾಡುತ್ತ ಜಪಮಾಡುತ್ತ ಇದ್ದರೆ ಆತನ ಕೃಪೆ ದೊರೆಯುತ್ತದೆ. ಬಳಿಕ ಆತನ ದರ್ಶನ. ಉದಾಹರಣೆಗಾಗಿ, ಒಂದು ದೊಡ್ಡ ಮರದ ದಿಮ್ಮಿಯನ್ನು ನೀರಿನಲ್ಲಿ ಮುಳುಗಿಸಿ ಅದನ್ನು ಸರಪಣಿಯಿಂದ ದಡಕ್ಕೆ ಕಟ್ಟಿರುವುದನ್ನು ತೆಗೆದುಕೊಳ್ಳಿ. ಆ ಸರಪಣಿಯ ಕೊಂಡಿಯಾದ ಮೇಲೆ ಕೊಂಡಿಯನ್ನು ಹಿಡಿದು ಮುಂದುವರಿದರೆ ಕೊನೆಗೆ ಹೋಗಿ ಆ ಮರದ ದಿಮ್ಮಿಯನ್ನು ಮುಟ್ಟಲು ಆಗುವಂತೆ ಇದು.

❁ ಪೂಜೆಗಿಂತ ಮೇಲಾದುದು ಜಪ, ಜಪಕ್ಕಿಂತ ಮೇಲಾದುದು ಧ್ಯಾನ, ಧ್ಯಾನಕ್ಕಿಂತ ಮೇಲಾದುದು ಭಾವ, ಭಾವಕ್ಕಿಂತ ಮೇಲಾದುದು ಮಹಾಭಾವ, ಪ್ರೇಮ. ಚೈತನ್ಯದೇವನಿಗೆ ಪ್ರೇಮ ಉಂಟಾಗಿತ್ತು. ಪ್ರೇಮ ಉಂಟಾದರೆ ಭಗವಂತನನ್ನು ಕಟ್ಟಿ ಇಡಲು ಒಂದು ಹಗ್ಗ ದೊರಕಿದಂತೆಯೆ.

❁ ಏನೂ ಬೇಕಾಗಿಲ್ಲ, ಆದರೂ ಪ್ರೀತಿಸುವುದು — ಇದಕ್ಕೆ ಅಹೇತುಕ ಭಕ್ತಿ, ಶುದ್ಧ ಭಕ್ತಿ ಎಂದು ಹೆಸರು. ಪ್ರಹ್ಲಾದನಿಗೆ ಇದು ಇತ್ತು. ರಾಜ್ಯ ಬೇಕಾಗಿರಲಿಲ್ಲ, ಐಶ್ವರ್ಯ ಬೇಕಾಗಿರಲಿಲ್ಲ, ಕೇವಲ 'ಹರಿ' ಮಾತ್ರ ಆತನಿಗೆ ಬೇಕಾಗಿತ್ತು.

❁ ಯಾವುದನ್ನೇ ಆದರೂ ಆತನಿಗೆ ಒಂದು ಪಾಲಿನಷ್ಟು ಅರ್ಪಿಸಿದರೆ ಅದರ ಸಹಸ್ರದಷ್ಟು ಪಾಲು ಹಿಂದಿರುಗಿ ಬರುತ್ತದೆ. ಅದಕ್ಕಾಗಿಯೆ ದಾನ ಧರ್ಮಾದಿಗಳನ್ನು ಮಾಡಿದ ನಂತರ ಒಂದು ಬೊಗಸೆ ನೀರನ್ನು ತೆಗೆದುಕೊಂಡು, 'ಶ್ರೀಕೃಷ್ಣಾರ್ಪಣಮಸ್ತು—ಶ್ರೀಕೃಷ್ಣನಿಗೆ ಫಲವನ್ನು ಅರ್ಪಿಸಿದ್ದೇನೆ' ಎಂದು ಹೇಳುವುದು. ಯುಧಿಷ್ಠಿರ ತನ್ನ ಸಕಲ ಪಾಪಗಳನ್ನು ಶ್ರೀಕೃಷ್ಣನಿಗೆ ಅರ್ಪಿಸಲು ಸಿದ್ಧನಾಗುತ್ತಿದ್ದಾಗ ಒಬ್ಬ (ಭೀಮ) 'ಅಂಥ ಕಾರ್ಯವನ್ನು ಎಂದಿಗೂ ಮಾಡಬೇಡ — ಶ್ರೀಕೃಷ್ಣನಿಗೆ ನೀನು ಏನು ಅರ್ಪಿಸುವಿಯೊ, ಅದು ಒಂದು ಸಹಸ್ರಮಡಿಯಾಗಿ ನಿನಗೆ ಹಿಂದಿರುಗಿ ಬರುತ್ತದೆ' ಎಂದು ಎಚ್ಚರಿಕೆ ಕೊಟ್ಟ.

❁ ನಾನು ಯಾರದು ಯಾವ ಭಾವವೊ ಅದನ್ನು ಸಂರಕ್ಷಿಸಲು ಪ್ರಯತ್ನಿಸುತ್ತಿದ್ದೇನೆ. ವೈಷ್ಣವರಿಗೆ ವೈಷ್ಣವರ ಭಾವದಲ್ಲಿಯೆ ಮುಂದುವರಿಯುವಂತೆ ಹೇಳುತ್ತೇನೆ; ಶಾಕ್ತನಿಗೆ ಶಾಕ್ತರ ಭಾವ. ಆದರೆ ಹೇಳುತ್ತೇನೆ, 'ಹೀಗೆ ಎಂದೂ ಹೇಳಬೇಡಿ ನಮ್ಮ ಮಾರ್ಗವೇ ಸತ್ಯ, ಉಳಿದುದೆಲ್ಲ ಮಿಥ್ಯ, ತಪ್ಪು!' ಎಂದು. ಹಿಂದೂ, ಮುಸಲ್ಮಾನ, ಕ್ರೈಸ್ತ — ವಿವಿಧ ಮಾರ್ಗದಿಂದ ಒಂದೇ ಸ್ಥಳಕ್ಕೆ ಹೋಗಿ ಸೇರುತ್ತಾರೆ. ತಮ್ಮ ತಮ್ಮ ಭಾವವನ್ನು ಸಂರಕ್ಷಿಸಿಕೊಂಡು ಹೃತ್ಪೂರ್ವಕವಾಗಿ ಭಗವಂತನನ್ನು ಕರೆದರೆ ಆತನನ್ನು ಪಡೆಯಬಹುದು.

❁ ದೇಶಕಾಲ ಪಾತ್ರಕ್ಕೆ ತಕ್ಕಂತೆ ಪ್ರತಿಯೊಬ್ಬನಿಗೂ ಬೇರೆ ಬೇರೆ ಮಾರ್ಗ. ಆದರೆ ಯಾವ ಮಾರ್ಗವನ್ನಾದರೂ ಹಿಡಿದು ಹೋಗಲಿ ಶುದ್ಧಮನಸ್ಕನಾಗಿ ಹೃತ್ಪೂರ್ವಕ ವ್ಯಾಕುಲತೆಯಿಂದ ಆತನನ್ನು ಕರೆದರೆ ಆಗ ಆತನನ್ನು ಪಡೆಯಬಹುದು.

ಶ್ರೀರಾಮಕೃಷ್ಣ ವಚನವೇದದಿಂದ

ಕರುಣಾಮಯಿ

ಮೂಲ ಬಂಗಾಳಿ : **ಸ್ವಾಮಿ ಸತ್‌ಸ್ವರೂಪಾನಂದ** ಕನ್ನಡಕ್ಕೆ : **ಸ್ವಾಮಿ ಜ್ಞಾನಯೋಗಾನಂದ**

ಶ್ರೀಮಾತೆಯವರನ್ನು ಹತ್ತಿರದಿಂದ ಕಂಡವರು ಅವರನ್ನು ಕುರಿತು ಬರೆದ ಸ್ಮೃತಿಚಿತ್ರಗಳ ಸಂಕಲನವನ್ನು 'ಉದ್ಬೋಧನ ಕಾರ್ಯಾಲಯ'ವು ಬಂಗಾಳಿಯಲ್ಲಿ **'ಮಾಯೇರ್ ಪದಪ್ರಾಂತೇ'** ಎಂಬ ಶೀರ್ಷಿಕೆಯಲ್ಲಿ, ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿದೆ. ಅದರಲ್ಲಿ ಶ್ರೀಮಾತೆಯವರ ಸಂನ್ಯಾಸೀ ಶಿಷ್ಯರು ಬರೆದ ಸ್ಮೃತಿಚಿತ್ರಗಳಲ್ಲಿ ಒಂದರ ಅನುವಾದವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಹಲವು ಮಂದಿ ಸಾಧಕರ, ಭಕ್ತರ ಹಾಗೂ ಆರ್ತರ ಬಾಳಿಗೆ ಸಂಜೀವಿನಿಯಂತೆ ಚೇತನದಾಯಕವಾದ ಉಪದೇಶಗಳು ಇಲ್ಲಿ ಸಂಗ್ರಹಿಸಲ್ಪಟ್ಟಿವೆ. ಶ್ರೀಮಾತೆಯವರ ಜೀವನದ ಹತ್ತು ಹಲವು ಮುಖಗಳು ದಿವ್ಯಲೋಕದ ಅಪೂರ್ವ ಬೆಳಕಾಗಿ ಇಲ್ಲಿ ಮಿಂಚಿವೆ. ಮೂಲ ಲೇಖಕರು ಶ್ರೀಮಾತೆಯವರ ಶಿಷ್ಯರು.

'ನಿರಾಕಾರಾಪಿ ಸಾಕಾರಾ ಕಸ್ತ್ವಾಂ ವೇದಿತುಮರ್ಹತಿ' ಎಂದು ಶಾಸ್ತ್ರ ಹೇಳುತ್ತದೆ. ನಿರಾಕಾರವಾದರೂ ಆಕಾರವನ್ನು ಹೊಂದುವುದು ಯಾಕೆ? 'ಉಪಾಸಕಾನಾಂ ಕಾರ್ಯಾರ್ಥಂ ಶ್ರೇಯಸೇ ಜಗತಾಮಪಿ.' ಭಕ್ತರಿಗೆ, ಮುಮುಕ್ಷುಗಳಿಗೆ ಮೋಕ್ಷವನ್ನು ನೀಡುವ ಮೂಲಕ ಅವರನ್ನು ಬಿಡುಗಡೆಗೊಳಿಸುವುದಕ್ಕಾಗಿ ಈ ಬಾರಿ ಮಾತೃರೂಪಿಣಿಯಾದ ಪರಾಶಕ್ತಿಯು ಅವತರಿಸಿ ಬಂದಿದ್ದಾಳೆ. ಮಹಾಮಾಯೆ ಶಾರದಾಮಾತೆ ಈ ಬಾರಿ ಅನೇಕ ಮಂದಿ ಭಕ್ತಜನರ ಮೇಲೆ ಹಲವು ರೂಪಗಳಲ್ಲಿ, ನೂರಾರು ಬಗೆಗಳಲ್ಲಿ ಕೃಪೆಗೈದಿದ್ದಾರೆ. ಶತರೂಪಿಣಿ ಶಾರದಾಮಾತೆ ಶತರೂಪಗಳಿಂದ ಪ್ರಕಾಶಗೊಂಡಿದ್ದಾರೆ — 'ಉಪಾಸಕಾನಾಂ ಕಾರ್ಯಾರ್ಥಂ ಶ್ರೇಯಸೇ ಜಗತಾಮಪಿ'.

ನನ್ನ ಈ ಕ್ಷುಲ್ಲಕ ಜೀವನವು ಜ್ಯೋತಿಃಸ್ವರೂಪಿಣಿಯಾದ ಶಾರದಾಮಾತೆಯವರ ಶತರೂಪಗಳ ಒಂದು ಕಿರಣದಿಂದ ಕೃತಾರ್ಥಗೊಂಡಿದೆ. ಜೀವನ ಸಂಧ್ಯೆಯ ಈ ದಿನಗಳಲ್ಲೂ ಆ ಉಜ್ವಲವಾಗಿ ಬೆಳಗುವ ಚಿನ್ಮಯ ಜ್ಯೋತಿಯು ನಿಚ್ಚಳವಾಗಿ ಕಾಣಿಸುತ್ತಿದೆ. ಯಾರು ಅವ್ಯಕ್ತಳೋ, ಯಾರು ಅಚಿಂತ್ಯಳೋ, ಅವಳನ್ನು ಭಾಷೆಯ ಮೂಲಕ ವ್ಯಕ್ತಗೊಳಿಸುವ ದುರ್ಬಲ ಪ್ರಯತ್ನ ನನ್ನದು.

ಆಗ ನನಗೆ ಸುಮಾರು ಇಪ್ಪತ್ತನಾಲ್ಕು-ಇಪ್ಪತ್ತೈದು ವರ್ಷ ವಯಸ್ಸು. ಆಗ ಕ್ರಿ.ಶ. ೧೯೧೯, ಕಾಟಿಹಾರ್‌ನ ಶಾಲೆಯೊಂದರಲ್ಲಿ ಅಧ್ಯಾಪಕನಾಗಿದ್ದೆ. ಒಂದು ಮೆಸ್‌ನಲ್ಲಿದ್ದುಕೊಂಡು, ಅಲ್ಲಿಂದ ಶಾಲೆಗೆ ಹೋಗಿ ಬರುತ್ತಿದ್ದೆ. ಅಘೋರಬಾಬು ಎಂಬ ಸಜ್ಜನರೊಂದಿಗೆ ಅಲ್ಲಿ ಮಾತುಕತೆ ನಡೆಯುತ್ತಿತ್ತು. ಒಂದು ದಿನ ನಾನು ಗಮನಿಸಿದೆ, ಅವರು ನಿರ್ಮಿಸಿದ್ದ ಒಂದು ಮನೆಯಿಂದ ಕಾವಿ ಬಟ್ಟೆ ಧರಿಸಿದ ಒಬ್ಬ ವ್ಯಕ್ತಿ ನಮ್ಮ ಮೆಸ್ ಕಡೆಗೇ ಬರುತ್ತಿದ್ದರು. ಅನಂತರ ಹಲವು ಬಾರಿ ಅವರು ಮೆಸ್‌ನತ್ತ ಬರುತ್ತಿದ್ದುದನ್ನು ಕಂಡು, ಕುತೂಹಲಗೊಂಡು ವಿಚಾರಿಸಿದಾಗ ತಿಳಿದುಬಂತು — ಅವರು ಬೇಲೂರು ಮಠಕ್ಕೆ ಸೇರಿದ ಸಂನ್ಯಾಸಿ ; ಪ್ರಸ್ತುತ ಆಧ್ಯಾ



ತ್ಮಿಕ ವಿಚಾರಗಳ ಪ್ರಚಾರಕ್ಕಾಗಿ ಕಾಟಿಹಾರ್‌ಗೆ ಬಂದಿದ್ದಾರೆ — ಎಂದು. ಅಘೋರಬಾಬುಗಳ ಮನೆಯಲ್ಲಿ ಅವರ ಕುಟುಂಬದವರು ಬಳಸುವ ಸ್ನಾನದ ಮನೆಯನ್ನೇ ಬಳಸಲು ಈ ಸಾಧುಗಳಿಗೆ ತುಂಬ ಅನಾನುಕೂಲವಾಗುವುದು ಎಂದು, ನಮ್ಮ ಮೆಸ್‌ನಲ್ಲೇ ಅವರ ಸ್ನಾನಾದಿಗಳಿಗೆ ವ್ಯವಸ್ಥೆಮಾಡಿದ್ದರು. ಸಾಧು, ಸಂನ್ಯಾಸಿಗಳ ಕಡೆಗೆ ನನಗೆ ಸಹಜವಾಗಿಯೇ ಆಕರ್ಷಣೆಯಿತ್ತು. ಆದ್ದರಿಂದ ಕೆಲವು ದಿನಗಳಲ್ಲೇ ನಾನು ಅವರೊಂದಿಗೆ ಮಾತುಕತೆ ಆರಂಭಿಸಿದೆ. ಅವರೊಂದಿಗೆ ನಡೆದ ಮಾತುಕತೆಗಳಿಂದ ನನಗೆ ತಿಳಿದು ಬಂತು, ಅವರ ಹೆಸರು ಸ್ವಾಮಿ ಜ್ಞಾನಾನಂದ ಎಂದು; ಜ್ಞಾನ್ ಮಹಾರಾಜ್ ಎಂದೇ ಅವರು ಪರಿಚಿತರು. ಅವರು ಬಹಳ ದಿನ ಜಯರಾಂಬಾಟಿಯಲ್ಲಿರುವ ಶ್ರೀರಾಮಕೃಷ್ಣರ ಸಹಧರ್ಮಿಣಿಯಾದ ಶ್ರೀಶಾರದಾಮಣೀ ದೇವಿಯವರ ಸೇವೆ

ಮಾಡಿದ್ದರು. ಶ್ರೀಮಾತೆಯವರ ಜೀವನದಲ್ಲಿ ಬರುವ ಹಲವು ಆಂತರಿಕ ವಿಚಾರಗಳನ್ನು ನಾನು ಅವರಿಂದಲೇ ಕೇಳಿದೆ. ಶ್ರೀಮಾತೆಯವರ ಸ್ನೇಹ, ಕರುಣೆಗಳು ಎಷ್ಟೊಂದು ಬಗೆಯಲ್ಲಿ ಭಕ್ತಜನರ ಜೀವನವನ್ನು ಪರಿವರ್ತಿಸಿದೆ ಎಂಬುದನ್ನು ಅವರು ತಿಳಿಸಿದರು. ಇಂಥ ಮಾತುಗಳನ್ನು ಕೇಳಿ ನನಗೂ ಶ್ರೀಮಾತೆಯವರನ್ನು ಒಂದು ಸಲ ಭೇಟಿಯಾಗಬೇಕೆಂಬ ಬಯಕೆ ಮೂಡಿತು. ಈ ವಿಷಯವನ್ನು ತಿಳಿಸಿದ ಕೂಡಲೇ ಜ್ಞಾನ್ ಮಹಾರಾಜ್ ಉತ್ಸಾಹಗೊಂಡರು. ಸಮೀಪದಲ್ಲೇ ಬರಲಿರುವ ದುರ್ಗಾಪೂಜೆಯ ರಜೆಯಲ್ಲಿ ಜಯರಾಂಬಾಟಿಗೆ ಹೋಗಿ ಶ್ರೀಮಾತೆಯವರ ದರ್ಶನ ಪಡೆಯಲು ಅವರು ನನಗೆ ಹೇಳಿದರು.

ಕ್ರಿ.ಶ. ೧೯೧೯ ನೇ ಇಸವಿಯ ದುರ್ಗಾಪೂಜೆಯ ರಜೆಯಲ್ಲಿ ಜ್ಞಾನ್ ಮಹಾರಾಜ್ ಜಯರಾಂಬಾಟಿಗೆ ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋದರು. ಆಗ ಶ್ರೀಮಾತೆ ತಮ್ಮ ಹೊಸ ಮನೆಯಲ್ಲಿ ವಾಸವಾಗಿದ್ದರು. ಆ ಮನೆಯಲ್ಲಿದ್ದ ಹೊರಗಿನ ಕೋಣೆಯಲ್ಲೇ ನನಗೆ ವಾಸಮಾಡಲು ವ್ಯವಸ್ಥೆಯಾಗಿತ್ತು. ನಾನು ಮನಸ್ಸಿನಲ್ಲಿ ಹಲವು ಬಗೆಯ ಕಲ್ಪನೆಗಳನ್ನು ಚಿತ್ರಿಸಿಕೊಂಡೇ ಜಯರಾಂಬಾಟಿಗೆ ಹೋಗಿದ್ದೆ. ಜ್ಞಾನ್ ಮಹಾರಾಜ್ ಮನೆಯೊಳಕ್ಕೆ ಹೋಗಿ, ಶ್ರೀಮಾತೆಯವರಿಗೆ ವಿಷಯ ತಿಳಿಸಿ, ಅವರ ಬಳಿಗೆ ನನ್ನನ್ನು ಕರೆದುಕೊಂಡು ಹೋದರು. ಆಗ ರಾಮಮಯ ಮಹಾರಾಜ್ ಶ್ರೀಮಾತೆಯವರ ಸೇವೆಗಾಗಿ ಅಲ್ಲೇ ಇದ್ದರು. ಅವರದು ಸಣ್ಣ ದೇಹ; ನನಗೆ ತುಂಬ ಇಷ್ಟವಾದರು. ಅವರೇ ನನ್ನನ್ನು ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋದರು. ಆಗ ಶ್ರೀಮಾತೆ ತಮ್ಮ ಕೋಣೆಯಲ್ಲಿ ಕುರ್ಚಿಯ ಮೇಲೆ ಕಾಲು ಇಳಿಬಿಟ್ಟು ಕುಳಿತಿದ್ದರು. ನಾನು ಶ್ರೀಮಾತೆಯವರಿಗೆ ನಮಸ್ಕರಿಸಿದೆ. ಶ್ರೀಮಾತೆಯವರ ಕೈ, ಕಾಲುಗಳ ಆಕಾರ ಹಾಗೂ ಮುಖದ ಚಹರೆಯನ್ನು ನೋಡಿದಾಗ ನನಗೆ ನನ್ನ ಅಜ್ಜಿಯವರ ನೆನಪಾಯಿತು. ಅವರಲ್ಲಿ ಯಾವುದೇ ದೈವೀಭಾವ ನನಗೆ ಕಂಡುಬರಲಿಲ್ಲ. ಅವರ ಕೈಕಾಲುಗಳು ತುಂಬ ಕ್ರಿಯಾಶೀಲ ಹಾಗೂ ಒರಟಾಗಿದ್ದಂತೆ ನನಗೆ ಕಂಡುಬಂತು. ಸ್ವತಃ ಅವರೇ ತಮ್ಮ ಸ್ವರೂಪವನ್ನು ತಿಳಿಸಿಕೊಡದಿದ್ದರೆ, ಅರಿವಿಗೆ ತಂದುಕೊಡದಿದ್ದರೆ ಅವರನ್ನು ಯಾರು ಅರಿಯಬಲ್ಲರು? ಅವರು 'ಮಾಯಯಾ ಬಹುರೂಪಿಣಿ'. ತಮ್ಮ ಸ್ವರೂಪವನ್ನು ಅವರು ಮಾಯೆಯಿಂದ ಮುಸುಕಿಬಿಟ್ಟಿದ್ದಾರೆ. ಆಗಿನ್ನೂ ನನಗೆ ತಕ್ಕ ಸಮಯ ಬಂದಿರಲಿಲ್ಲ ಎಂದು ನನಗೆ ಅನ್ನಿಸುತ್ತದೆ!

ಶ್ರೀಮಾತೆಯವರ ದೇಹ ಅನಾರೋಗ್ಯದಿಂದ ಕೂಡಿದೆ ಎಂದು ಕೇಳಿದೆ. ಶ್ರೀಮಾತೆಯವರ ಬಳಿ ಇದ್ದುಕೊಂಡು, ಅವರಿಂದ ನಾನು ದೀಕ್ಷೆ ಪಡೆಯಬಹುದೆಂದು ಜ್ಞಾನ್ ಮಹಾರಾಜ್ ಅಂದುಕೊಂಡಿದ್ದರು. ಆದರೆ ಶ್ರೀಮಾತೆ, ''ಮಗೂ, ಈಗ ನನ್ನ ದೇಹಾರೋಗ್ಯ ಚೆನ್ನಾಗಿಲ್ಲ. ಆಮೇಲೆ ದೀಕ್ಷೆ ನಡೆಯಲಿ'' ಎಂದರು. ನನ್ನ ಮನಸ್ಸು ಆಗ ದೀಕ್ಷೆಯನ್ನು ಪಡೆಯಲು ಸಿದ್ಧವಾಗಿರಲಿಲ್ಲ. ಆದ್ದರಿಂದಲೇ ಸ್ವತಃ ಮಾಯೆಯೇ ಆಗಿರುವ ಶ್ರೀಮಾತೆ , ಅನಾರೋಗ್ಯದ ನೆಪದಿಂದ ನನ್ನನ್ನು ಆಗ ಶಿಷ್ಯನಾಗಿ ಸ್ವೀಕರಿಸಲಿಲ್ಲ. ಆಗ ನಾನು ಅಲ್ಲಿ ಕೆಲವು ದಿನ ತಂಗಿದ್ದೆ. ಶ್ರೀಮಾತೆಯವರ ಕೌಟುಂಬಿಕ ಪರಿಸರ, ಸಾಂಸಾರಿಕವಾದ ಹಲವು ಬಗೆಯ ಜಂಜಾಟಗಳು ಇವುಗಳನ್ನೆಲ್ಲ ದೂರದಿಂದ ನಾನು ನೋಡಿದ್ದೆ. ಆದರೆ ನನಗೆ ಅವರ ವಿಷಯವಾಗಿ ಯಾವುದೇ ಬಗೆಯ ಉನ್ನತ ಭಾವದ ಅನುಭವವಾಗಿರಲಿಲ್ಲ. ಆದರೆ ಅವರು ಸ್ನೇಹಮಯಿಯಾಗಿ, ಕರುಣಾಮಯಿಯಾಗಿ, ಆತ್ಮೀಯರಾಗಿ ನನ್ನವರಂತೆ ನನಗನ್ನಿಸಿತ್ತು. ಅವರಿಗೆ ವಿದಾಯ ಹೇಳಿ ಬರುವಾಗ ಪ್ರಣಾಮ ಮಾಡಿದೆ; ಬಳಿಕ ಹೊರಡುವಾಗ ಶ್ರೀಮಾತೆ ನನ್ನ ಮುಖವನ್ನೇ ದಿಟ್ಟಿಸುತ್ತ ಒಂದು ಮಾತು ಹೇಳಿದರು. ನನಗಿಂತ ಮೊದಲು ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಹೋದವರು ಹೂ, ಬಿಲ್ವಪತ್ರೆ ಮುಂತಾದವುಗಳ ಜೊತೆಗೆ ಒಂದು ಬುಟ್ಟಿಯಲ್ಲಿ ಎಲೆಗಳಿಂದ ಕೂಡಿದ ನೆಲ್ಲಿಕಾಯಿಯನ್ನು ಅವರಿಗೆ ಅರ್ಪಿಸಿದ್ದರು. ಆಗ ಶ್ರೀಮಾತೆ ಪೂಜೆ ಮಾಡುವ ಆಸನದಲ್ಲಿ ಕುಳಿತಿದ್ದರು. ಪ್ರಣಾಮ ಮಾಡಿದನಂತರ ಶ್ರೀಮಾತೆ ಇದ್ದಕ್ಕಿದ್ದಂತೆ ಆ ನೆಲ್ಲಿ ಎಲೆಯನ್ನು ತೆಗೆದುಕೊಂಡು ನನ್ನತ್ತ ತೋರಿಸಿ ಹೇಳಿದರು. ''ಮಗೂ ಜ್ಞಾನ್, ಈ ನೆಲ್ಲಿ ಎಲೆಗಳು ಬಿಲ್ವಪತ್ರೆಯಂತೆಯೇ ಶಿವನಿಗೆ ಅತ್ಯಂತ ಪ್ರಿಯವಾದದ್ದು.'' ಅವರು ಏಕೆ ಹಾಗೆಂದರೋ ತಿಳಿಯೆ; ಆದರೆ ಅದು ಇಂದಿಗೂ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ. ನಾನು ಕೆಲಸ ಮಾಡುತ್ತಿದ್ದಲ್ಲಿಗೆ ಮರಳಿದೆ. ಆದರೆ ಆಗಾಗ ನನ್ನ ಮನಸ್ಸು ಜಯರಾಂಬಾಟಿಯತ್ತ ಸಾಗಿಬಿಡುತ್ತಿತ್ತು.

ಆದರೆ ಜ್ಞಾನ್ ಮಹಾರಾಜ್ ಆಸೆ ಬಿಡಲಿಲ್ಲ. ಅವರ ಉತ್ಸಾಹ, ಪ್ರೇರಣೆಗಳಿಂದಲೇ ನಾನು ಆ ಸಲದ ದೊಡ್ಡ ರಜೆಯಲ್ಲಿ ಮತ್ತೆ ಜಯರಾಮಬಾಟಿಗೆ ಹೋದೆ. ಈ ಬಾರಿ ಕೂಡಾ ಶ್ರೀಮಾತೆಯವರ ಹೊಸ ಮನೆಯಲ್ಲಿ ನನಗೆ ತಂಗಲು ವ್ಯವಸ್ಥೆ ಮಾಡಲಾಗಿತ್ತು. ರಾಮಮಯ ಮಹಾರಾಜರೇ ಮತ್ತೊಮ್ಮೆ ನನ್ನನ್ನು ಶ್ರೀಮಾತೆಯವರ ಬಳಿಗೆ ಕರೆದುಕೊಂಡು ಹೋದರು. ಅವರಿಗೆ ಪ್ರಣಾಮ ಮಾಡಿದ ಮೇಲೆ ಅವರು ಯಾವ ರೀತಿ ತಮ್ಮ ಮನಸ್ಸಿನ ಭಾವನೆಯನ್ನು ಪ್ರಕಟಿಸಿದರೆಂದರೆ, ಕಳೆದ ಬಾರಿ ಅನಾರೋಗ್ಯದಿಂದ ದೀಕ್ಷೆ ನಡೆಯಲಿಲ್ಲ , ಈ ಬಾರಿ ದೀಕ್ಷೆ ನಡೆದರೇನೇ ಒಳ್ಳೆಯದು ಎಂಬಂತೆ. ಶ್ರೀಮಾತೆಯವರ ಈ ಅನಿರೀಕ್ಷಿತ ಇಚ್ಛೆಯು ನನ್ನ ಮನಸ್ಸಿನಲ್ಲಿ ಅಗಾಧ ಕಂಪನವನ್ನುಂಟುಮಾಡಿತು. ಸಂತೋಷದಿಂದ ನಾನು ನನ್ನ ಮನಸ್ಸಿನ ಬಯಕೆಯನ್ನು ಅವರಲ್ಲಿ ನಿವೇದಿಸಿಕೊಂಡೆ. ಆಗ ಅವರು ಮರುದಿನವೇ ದೀಕ್ಷೆಯ ದಿನವೆಂದು ನಿಶ್ಚಯಿಸಿದರು. ಮರುದಿನ ಬೆಳಿಗ್ಗೆ ಪುಣ್ಯಪುಕುರದಲ್ಲಿ ಸ್ನಾನ ಮಾಡಿ, ಹಿಂದೆಂದೂ ಅನುಭವಿಸದ ಒಂದು ವಿಚಿತ್ರ ಅನುಭವವನ್ನು ನನ್ನ ಹೃದಯದಲ್ಲಿ ಧರಿಸಿಕೊಂಡು ನಾನು ಶ್ರೀಮಾತೆಯವರ ಕೋಣೆಯನ್ನು ಪ್ರವೇಶಿಸಿದೆ. ನಾನು ಯಾವ ವಿಧದಲ್ಲೂ ಮಂತ್ರದೀಕ್ಷೆಗೆ ಸಿದ್ಧನಾಗಿರಲಿಲ್ಲ. ಬೇರೇನನ್ನೂ ನನ್ನೊಂದಿಗೆ ಕೊಂಡುಹೋಗಿರಲಿಲ್ಲ. ಅತ್ಯಂತ ದೀನನಾಗಿದ್ದ ನನ್ನನ್ನು ಶ್ರೀಮಾತೆ

ತಮ್ಮ ಕೋಣೆಯಲ್ಲಿ , ತಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ನನಗೆ ಮಹಾಮಂತ್ರವನ್ನು ನೀಡಿದರು. ದೀಕ್ಷೆಯ ನಂತರ ನನ್ನ ಮೂಲಕ ಮೂರು ಬಾರಿ ಜಪ ಮಾಡಿಸಿದರು ಕೂಡ. ಅದೇ ಕ್ಷಣದಲ್ಲಿ ನನ್ನ ಕಣ್ಣಮುಂದೆ ಒಂದು ಅದ್ಭುತ ತೆರೆ ಸರಿದು ಹೋಯಿತು! 'ಮೋಕ್ಷ ದ್ವಾರ–ಕಪಾಟ–ಪಾಟನಕರಿ'ಯೂ, ಕರುಣಾಮಯಿಯೂ ಆದ ಶ್ರೀಮಾತೆ ಅದೇನು ಮಾಡಿದರೋ ಗೊತ್ತಿಲ್ಲ! ಆದರೆ ನಾನು ಅವರ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದಂತೆ, ನನ್ನ ಇಷ್ಟಮಂತ್ರದ ಅಧಿ ದೇವತೆಯನ್ನು ಅವರಲ್ಲಿಯೇ ಕಂಡೆ. ಮೂರು ಬಾರಿ ನೋಡಿದೆ. ನಾನು ಅವಾಕ್ಕಾಗಿ ಅವರನ್ನೇ ನೋಡುತ್ತ ನಿಂತುದನ್ನು ಕಂಡು ಶ್ರೀಮಾತೆ ಕೇಳಿದರು, ''ಏನು ನೋಡುತ್ತಿದ್ದೀಯಾ ಮಗೂ? ಏನನ್ನು ನೋಡಿದೆಯೋ, ಸರಿಯಾಗಿಯೇ ನೋಡಿದ್ದೀಯೆ.'' ಕೃಪಾಪೂರ್ಣವಾದ ಪ್ರಸನ್ನ ಮುಖದಿಂದ ಕೂಡಿದ ಶ್ರೀಮಾತೆ ನನ್ನ ದೃಷ್ಟಿಯ ಆವರಣವನ್ನು ಸರಿಸಿ, ತಮ್ಮ ನಿಜವಾದ ಸ್ವರೂಪ ವನ್ನು ಧರಿಸಿ ನಿಂತರು. ಅನಂತ ರೂಪಿಣಿಯಾದ ಶ್ರೀ ಶಾರದೆಯ ವರಾಭಯ ಮೂರ್ತಿಯು ನನ್ನ ಮುಂದೆ ಪ್ರಕಟಗೊಂಡಿತು. ನನ್ನ ಸರ್ವಾಂಗವೂ ಕಂಪಿಸಿ, ವಿಸ್ಮಯ ಹಾಗೂ ಆನಂದದಿಂದ ಸ್ತಬ್ಧನಾಗಿದ್ದ ನನಗೆ ಶ್ರೀಮಾತೆ ಹೇಳಿದರು: ''ಮಗೂ, ದಕ್ಷಿಣೆ ಕೊಡು.'' ನನ್ನ ಬಳಿ ಏನೂ ಇರಲಿಲ್ಲ. ಕೋಣೆಯ ಒಂದು ಮೂಲೆಯಲ್ಲಿ ಕೆಲವು ಹಣ್ಣನ್ನು ಆರಿಸಿ ತಂದು, ಅವರಿಗೆ ನೀಡಲು ಶ್ರೀಮಾತೆ ಹೇಳಿದರು. ಚಾಲನೆ ಮಾಡಿದ ಯಂತ್ರದಂತೆ, ಅವರು ಹೇಳಿದಂತೆ ಆ ಹಣ್ಣನ್ನು ತಂದು ಅವರಿಗೆ ಸಮರ್ಪಿಸಿದೆ. ಈ ನನ್ನ ಜೀವನ ಕೃತಾರ್ಥವಾಯಿತು. ಈ ಮನುಷ್ಯ ಜೀವನ ಸಾರ್ಥಕ ವಾಯಿತು. ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಹೊರಗೆ ಬಂದೆ; ಮತ್ತೆ ದಿಗ್ಭ್ರಾಂತನಾಗಿ ಆಲೋಚಿಸತೊಡಗಿದೆ — ಇದೇನು ನಡೆದು ಹೋಯಿತು?

ಅಂದು ಮಧ್ಯಾಹ್ನ ಉಳಿದ ಭಕ್ತರೊಂದಿಗೆ ಶ್ರೀಮಾತೆಯವರ ಕೋಣೆಯ ಮುಂದಿನ ಜಗಲಿಯಲ್ಲಿ ಪ್ರಸಾದಕ್ಕಾಗಿ (ಊಟ ಮಾಡಲು) ಕುಳಿತಿದ್ದೆ. ನಾನು ಹೊಸಬ; ನಾಚುಗೆಯ ಸ್ವಭಾವ ದವನು. ಆದ್ದರಿಂದ ಪಂಕ್ತಿಯ ಕೊನೆಯಲ್ಲಿ ಊಟಕ್ಕೆ ಕುಳಿತಿದ್ದೆ. ಬಡಿಸಲು ಆರಂಭಿಸಿದಾಗ ಶ್ರೀಮಾತೆ ಅಲ್ಲಿಗೆ ಬಂದು ತಮ್ಮ ಕೋಣೆಯ ಬಾಗಿಲಲ್ಲಿ ನಿಂತರು. ಬಾಗಿಲಲ್ಲಿ ಒಂದು ಕೈಯನ್ನು ಇಟ್ಟುಕೊಂಡು ಅವರು ನಿಂತಿದ್ದರು. ಅವರು ಎಷ್ಟೊಂದು ಪ್ರೀತಿ ಯಿಂದ ಎಲ್ಲರನ್ನು ನೋಡುತ್ತಾ ನಿಂತಿದ್ದರು, ಹಾಗೂ ಎಲ್ಲರಿಗೂ ಊಟ ಮಾಡಿಸುತ್ತಿದ್ದರು! ದೀಕ್ಷೆ ನೀಡುವಾಗ ಹೇಗೋ ಅದೇ ರೀತಿ ಈಗಲೂ ಅವರನ್ನು ಅದೇ ವರಾಭಯ ಮೂರ್ತಿಯಾಗಿ ಮತ್ತೆ ಕಂಡೆ. ನಾನು ತಲೆ ತಗ್ಗಿಸಿಕೊಂಡೇ ಊಟ ಮಾಡುತ್ತಿದ್ದೆ. ಇದ್ದಕ್ಕಿದ್ದಂತೆ ಒಬ್ಬರು ನನ್ನ ಬಳಿಗೆ ಬಂದು, ನನಗೆ ಒಂದು ತಟ್ಟೆ ಯಲ್ಲಿ ಪಾಯಸವನ್ನು ನೀಡಿ ಹೇಳಿದರು: ''ಶ್ರೀಮಾತೆ ನಿನಗೆ ಕಳುಹಿಸಿಕೊಟ್ಟಿದ್ದಾರೆ.'' ತಲೆಯೆತ್ತಿ ನೋಡಿದೆ, ಶ್ರೀಮಾತೆ ಮೃದು ಸ್ವರದಿಂದ ಹೇಳುತ್ತಿದ್ದರು, ''ತೆಗೆದುಕೋ ಮಗೂ, ಎಲ್ಲವನ್ನೂ ತೆಗೆದುಕೋ.'' ಆದರೆ ಆಗ ನನಗೆ ಊಟಮಾಡುವ ಮನಃಸ್ಥಿತಿ ಯಿರಲಿಲ್ಲ. ಶ್ರೀಮಾತೆಯವರ ಈ ಜಗತ್ತನ್ನು ಮೀರಿದ ಪ್ರೀತಿ, ಬೇಡದೆಯೆ ನೀಡಿದ ಕರುಣೆ ಇವನ್ನು ಕಂಡು ನನ್ನ ಕಣ್ತುಂಬಿ ಬಂತು. ಆವೇಗ, ನಿಟ್ಟುಸಿರುಗಳೊಂದಿಗೆ ನನ್ನ ಕಂಠ ಬಿಗಿದು ಕೊಂಡಿತು. ಎಲ್ಲರ ನಡುವೆ ನನಗೆ ಈ ವಿಶೇಷ ಆದರ ನೀಡಿದ್ದ ರಿಂದ ನಾನು ಕುಗ್ಗಿಹೋದೆ. ನಿಧಾನವಾಗಿ ನಾನು ಆ ಪ್ರಸಾದ ವನ್ನೆಲ್ಲ ಸೇವಿಸಿ ಮುಗಿಸಿದೆ. ನನ್ನ ಜೀವನದಲ್ಲಿ ನಡೆದ ಆ ಸ್ಮರ ಣಾರ್ಹವಾದ ದಿನದ ಅವಿಸ್ಮರಣೀಯ ಘಟನೆಯು ನನ್ನ ನೆನಪಿನ ರತ್ನಾಗಾರದಲ್ಲಿ ಇಂದಿಗೂ ಉಜ್ವಲವಾಗಿ ಬೆಳಗುತ್ತಿದೆ.

ಈ ಬಾರಿ ಜಯರಾಮಬಾಟಿಯಲ್ಲಿ ಇನ್ನೂ ಕೆಲವು ದಿನ ನಾನು ತಂಗಿದ್ದೆ. ಶ್ರೀಮಾತೆಯವರ ಗೃಹೀಭಕ್ತರಾದ ವಿಭೂತಿ ಬಾಬು ಹಾಗೂ ರಾಮಮಯ ಮಹಾರಾಜರ ಬಳಿ ಜಪ–ಧ್ಯಾನಕ್ಕೆ ಸಂಬಂಧಿಸಿದ ಹಲವು ಸಂಗತಿಗಳನ್ನು ಕೇಳಿ ತಿಳಿದುಕೊಂಡಿದ್ದೆ. ಈ ಕಾರಣದಿಂದ ಶ್ರೀಮಾತೆಯವರ ಕೋಣೆಯಲ್ಲೋ, ಅಥವಾ ವರಾಂಡದಲ್ಲೋ ಅವರಿಗೆ ಪ್ರಣಾಮ ಮಾಡಲು ಹೋಗುತ್ತಿದ್ದೆ. ಜಯರಾಮಬಾಟಿಯಲ್ಲಿ ವಾಸ ಮಾಡುತ್ತಿದ್ದಾಗ ಶ್ರೀಮಾತೆ ಅತ್ಯಂತ ಸಹಜ, ಸ್ವಚ್ಛಂದ ಹಾಗೂ ಸ್ವಾಭಾವಿಕವಾದ ಮನಃಸ್ಥಿತಿ ಯಿಂದ ಇರುತ್ತಿದ್ದುದನ್ನು ನಾನು ಗಮನಿಸಿದೆ. ಅಲ್ಲಿ ಹೆಚ್ಚಾಗಿ ಅವರ ಮಾನವ ಸ್ವಭಾವವನ್ನೇ ನಾನು ಕಂಡಿದ್ದೆ. ಜಯರಾಮ ಬಾಟಿಯಲ್ಲಿ ಅವರ ಕರುಣಾಮಯಿ ಮಾತೃಭಾವವೇ ಹೆಚ್ಚಾಗಿ ಪ್ರಕಟವಾಗುತ್ತಿತ್ತು. ಇದಕ್ಕೆ ಅವರ ಬಂಧು ಬಳಗದ ಸನ್ನಿವೇಶವೇ ಬಹುಶಃ ಕಾರಣವಾಗಿರಬೇಕು. ಅಲ್ಲಿಂದ ನಾನು ಹೊರಟು ಬರುವ ದಿನ ಅವರಿಗೆ ಪ್ರಣಾಮ ಮಾಡಿದಾಗ, ಅವರು ನನ್ನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿ, ''ಚೆನ್ನಾಗಿರು, ಮಗೂ'' ಎಂದರು. ಈಗಲೂ ಆ ಧ್ವನಿ ನನ್ನ ಕಿವಿಯಲ್ಲಿ ಮೊಳಗುತ್ತಿದೆ.

೧೯೨೦ ನೇ ಇಸವಿಯ ಆರಂಭದಿಂದಲೇ ಶ್ರೀಮಾತೆಯವರ ಶರೀರ ಕ್ರಮೇಣ ಶಿಥಿಲವಾಗುತ್ತ ಬಂತು. ಮಾರ್ಚ್ ತಿಂಗಳಲ್ಲಿ ಅವರನ್ನು ಚಿಕಿತ್ಸೆಗಾಗಿ 'ಉದ್ಬೋಧನ'ಕ್ಕೆ ಕರೆತರಲಾಯಿತು. ಆಗ ನಾನು ಕಲ್ಕತ್ತೆಯಿಂದ ಜ್ಞಾನ್ ಮಹಾರಾಜ್ ಬರೆದ ಪತ್ರವೊಂದನ್ನು ಪಡೆದೆ. ಶ್ರೀಮಾತೆಯವರ ದೇಹಾರೋಗ್ಯ ತೀರ ಹದಗೆಟ್ಟಿದೆ ಯೆಂದು ಅದರಿಂದ ನನಗೆ ತಿಳಿಯಿತು. ಅವರ ದರ್ಶನ ಪಡೆ ಯುವುದಿದ್ದರೆ ಇನ್ನು ತಡಮಾಡಬಾರದು; ಆ ಪತ್ರವನ್ನು ಪಡೆದ ನಂತರ, ಅಂದರೆ ಜುಲೈ ತಿಂಗಳ ಮೊದಲ ಭಾಗದಲ್ಲಿ ನಾನು ಕಲ್ಕತ್ತೆಗೆ ಬಂದು, ಶ್ಯಾಮ್‌ಬಜಾರ್‌ನಲ್ಲಿ ಒಂದು ಮನೆಯಲ್ಲಿ ತಂಗಿದೆ, ಹಾಗೂ ದರ್ಶನ ಮಾಡಲು ತಕ್ಕ ಸಮಯದಲ್ಲಿ ಶ್ರೀಮಾತೆಯವರ ದರ್ಶನ ಪಡೆಯಲು 'ಉದ್ಬೋಧನ'ಕ್ಕೆ ಹೋದೆ. ಆಗ ಶ್ರೀಮಾತೆಯವರು ತೀವ್ರ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು. ಆಗ ಅವರ ದರ್ಶನ ಮತ್ತು ಪ್ರಣಾಮ ಮಾಡಲಷ್ಟೇ ಸಾಧ್ಯವಾಯಿತು. 'ಉದ್ಬೋಧನ'ದಲ್ಲಿ ಶ್ರೀಮಾತೆ ಬೇರೆ ಭಾವದಲ್ಲಿರುತ್ತಿದ್ದರು. ಅವರ ದರ್ಶನ ಮಾಡಲು ಸೂಕ್ತ

ವೇಳೆಯಲ್ಲೇ ಹೋಗಬೇಕಿತ್ತು ಹಾಗೂ ಅನೇಕ ಮಂದಿ ಭಕ್ತರ ಜೊತೆಗೆ ಹೋಗಬೇಕಾಗಿತ್ತು. ಜಯರಾಮಬಾಟಿಯಲ್ಲಿ ಇರುತ್ತಿದ್ದ ಶ್ರೀಮಾತೆಯವರ ಸಹಜ, ಸ್ವಚ್ಛಂದ ರೂಪವು ಇಲ್ಲಿ ಅವರ ದೈವೀ ಭಾವದ ಆವರಣದಲ್ಲಿ ಅಡಗಿರುವಂತೆ ಕಂಡುಬರುತ್ತಿತ್ತು. ಈ ಬಾರಿ ಅವರೊಂದಿಗೆ ಯಾವುದೇ ಮಾತುಕತೆ ನಡೆಸಿದ ಹಾಗೆ ನನಗೊಂದೂ ನೆನಪಿಗೆ ಬರುತ್ತಿಲ್ಲ.

ಶ್ರೀಮಾತೆಯವರ ಕೊನೆಯ ದರ್ಶನವನ್ನು ನಾನು ಪಡೆದುದು ಅವರು ಸ್ಥೂಲ ಶರೀರವನ್ನು ತ್ಯಜಿಸಿದ ನಂತರ. ಅವರು ದೇಹತ್ಯಾಗ ಮಾಡಿದ ಸುದ್ದಿ ಕೇಳಿದ ಮರುದಿನವೇ ನಾನು ಅವರಿಗೆ ಅಂತಿಮ ಪ್ರಣಾಮ ಮಾಡಲು ಧಾವಿಸಿದೆ. ಅಂದು ಇಡೀದಿನ ಬೇಲೂರು ಮಠದಲ್ಲಿ ಶ್ರೀಮಾತೆಯವರ ದಿವ್ಯಶರೀರವನ್ನು ಪವಿತ್ರ ಹೋಮಾಗ್ನಿಯಲ್ಲಿ ಆಹುತಿ ನೀಡುವವರೆಗೂ, ನಾನು ಅವರ ಸಮೀಪದಲ್ಲೇ ಇದ್ದೆ.

ನಾನು ಒಂದು ರೀತಿಯ ಜಡಸ್ವಭಾವದವನು. ಬ್ರಹ್ಮ-ಶಕ್ತಿಯು ಈ ದೇಹವನ್ನು ಅವಲಂಬಿಸಿ ಜಗನ್ಮಾತೆಯ ರೂಪದಿಂದ ಲೀಲಾನಿರತವಾಗಿತ್ತು ಎಂದು ನಾನು ಸಂನ್ಯಾಸಿಗಳ ಹಾಗೂ ಭಕ್ತರ ಬಾಯಿಯಿಂದ ಕೇಳಿದ್ದೆ; ಹಾಗೆ ನಂಬಿದ್ದೆ ಕೂಡ. ಆದರೆ ಅದು ಅನುಭವವಾಗಿ ನನಗೆಂದಿಗೂ ವೇದ್ಯವಾಗಲಿಲ್ಲ. ಆದರೆ ಶ್ರೀಮಾತೆಯವರ ಪ್ರೀತಿ ಹಾಗೂ ಅಲೌಕಿಕ ಭಾವದಿಂದ ಪರಿಪೂರ್ಣವಾಗಿದ್ದ ಅವರ ಮುಖ—ಇವು ನನ್ನ ಮನಸ್ಸಿನ ಮೇಲೆ ಆಳವಾದ ಮುದ್ರೆಯನ್ನೊತ್ತಿದ್ದವು. ಇಂತಹ ಮುಖ ಚರಾಚರಗಳಲ್ಲೆಲ್ಲೂ ಕಾಣಿಸದಂಥ ಅಪೂರ್ವವಾದ ಮುಖ — ಇಷ್ಟು ಮಾತ್ರ ನನಗೆ ಅರ್ಥವಾಗುತ್ತಿತ್ತು. ಶ್ರೀಮಾತೆಯವರ ಜೀವನಚರಿತ್ರೆಯಲ್ಲಿ ಬರೆದಿದೆ: ಕಾಶಿಯಲ್ಲಿ ಒಬ್ಬಾಕೆ ಹೆಂಗಸು ಶ್ರೀಮಾತೆಯವರ ಎದುರಿಗೇ ಗೋಲಾಪ್ ಮಾಳನ್ನು 'ಶ್ರೀಮಾತೆ' ಎಂದೇ ಭಾವಿಸಿದಾಗ, ಆಕೆಯಿಂದಲೇ ಬೈಸಿಕೊಂಡಿದ್ದಳು. ಆಗ ಎದುರಿಗೇ ಇದ್ದ ಶ್ರೀಮಾತೆಯವರನ್ನು ಕುರಿತು ಗೋಲಾಪ್ ಮಾ ಹೇಳಿದ್ದಳು, ''ಸರಿಯಾಗಿ ನೋಡು — ಮನುಷ್ಯಮಾತ್ರರಿಗೆ ಇಂತಹ ಮುಖವಿದ್ದೀತೆ, ಹೇಳು?'' ನನಗೂ ಎಷ್ಟು ಸಲ ಶ್ರೀಮಾತೆಯವರ ಮುಖವನ್ನು ನೋಡುವ ಅವಕಾಶ ಲಭಿಸಿತ್ತೋ, ಅಷ್ಟೊಂದು ಬಾರಿಯೂ ಅನ್ನಿಸಿತ್ತು — 'ಇಂಥ ಮುಖ ಮನುಷ್ಯರಿಗೆ ಇದ್ದೀತೆ?' ಎಂದು!

ಯಾರು ಮಾನವ ಶರೀರವನ್ನು ಧಾರಣೆ ಮಾಡಿಕೊಂಡು, ಮಾನವರಂತೆ ವರ್ತಿಸುತ್ತ ಆವಿರ್ಭಾವ ಹೊಂದಿದ್ದರೋ, ಅಂತಹ ಶ್ರೀಮಾತೆಯವರಲ್ಲಿ ಒಂದೆರಡು ಬಾರಿ ಬಿಟ್ಟರೆ ನಾನೆಂದಿಗೂ ಅಮಾನುಷವಾದ, ಅಲೌಕಿಕವಾದ ಸಂಗತಿಗಳನ್ನೆಂದೂ ಕಾಣಲಿಲ್ಲ, ಅಥವಾ ನನಗೆ ಅದು ಅರ್ಥವಾಗಲಿಲ್ಲ. ಆದರೂ ಅವರ ಮುಖದಲ್ಲಿದ್ದ ಆ ಮೃದು ಗಾಂಭೀರ್ಯ ಅವರ ಆಂತರಿಕ ಸತ್ತ್ವದ ಬಾಹ್ಯ ಪ್ರಕಟಣೆ ಎಂಬುದು ಮಾತ್ರ ನನಗೆ ಅರ್ಥವಾಗಿತ್ತು.

ಈಗ ನನ್ನ ಜೀವನದ ಅಂತಿಮಭಾಗ ಸಮೀಪಿಸಿದೆ. ನನ್ನ ಜೀವನ ನೌಕೆಯು ಶ್ರೀ ರಾಮಕೃಷ್ಣರೆಂಬ ಸಾಗರದತ್ತ ಚಲಿಸುತ್ತಿದೆ. ಈ ನೌಕೆಯ ಹಾಯಿ ಹಿಡಿದಿರುವ ವ್ಯಕ್ತಿಯ ಮುಖವನ್ನಾವರಿಸಿದ ಸೆರಗು ನಡುನಡುವೆ ಸರಿದಾಗ, ಇಂದಿಗೂ ಅದೇ ಮುಖ ಒಮ್ಮೊಮ್ಮೆ ಕಾಣಲು ಸಿಗುತ್ತದೆ. ಅದೇ ಭರವಸೆಯೊಂದಿಗೆ, ಅವರ ಮುಖವನ್ನೇ ನೋಡುತ್ತಾ ನಾನು ನಿಶ್ಚಿಂತೆಯಿಂದ ಇದ್ದೇನೆ. ❋

(ಮೂಲ ಬಂಗಾಳಿಯಲ್ಲಿ ಲೇಖಕರಿಂದ ಕೇಳಿ ಬರಹರೂಪಕ್ಕೆ ಇಳಿಸಿದವರು: ಸ್ವಾಮಿ ಅಚ್ಯುತಾನಂದ)

ಸ್ವಾಮಿ ಪ್ರೇಮಾನಂದರಿಗಾದ ದರ್ಶನ



ಸ್ವಾಮಿ ಪ್ರೇಮಾನಂದರ ಜೀವನವೆಲ್ಲವೂ ಸಂಪೂರ್ಣ ಶರಣಾಗತಿಯದಾಗಿತ್ತು. ಅವರ ಜೀವನದ ಪ್ರತಿ ಯೊಂದು ಕ್ಷಣವೂ, ಪ್ರತಿಯೊಂದು ಕ್ರಿಯೆಯೂ ಶ್ರೀರಾಮಕೃಷ್ಣರ ದಿವ್ಯಸಾನ್ನಿಧ್ಯದಿಂದ ತುಂಬಿಕೊಂಡಿತ್ತು. ಕೆಲವೊಮ್ಮೆ ಈ ಸಾನ್ನಿಧ್ಯವು ನಿಜವಾಗಿಯೂ ಕಣ್ಣಿಗೆ ಕಾಣಿಸುತ್ತಿತ್ತು. ತಮ್ಮ ಪ್ರಿಯ ಗುರುವಿನ ದರ್ಶನದಿಂದ ಅವರು ಪುನೀತರಾಗುತ್ತಿದ್ದರು.

ಒಂದು ಸಲ ಸ್ವಾಮಿ ಬ್ರಹ್ಮಾನಂದರು ಹಾಗೂ ಸ್ವಾಮಿ ಪ್ರೇಮಾನಂದರು ಯಾವುದೋ ಒಂದು ವಿಷಯದ ಬಗ್ಗೆ ತೀವ್ರವಾಗಿ ಭಿನ್ನಾಭಿಪ್ರಾಯವನ್ನು ಹೊಂದಿದರು. ಇದರಿಂದ ಪ್ರೇಮಾನಂದರು ನೊಂದರು. ಅಲ್ಲಿಂದ ಹೊರಟುಹೋಗುವುದೇ ಒಳ್ಳೆಯದು ಎಂದು ಭಾವಿಸಿ ಅವರು ಹೆಗಲಲ್ಲಿ ಒಂದು ಉತ್ತರೀಯವನ್ನು ಹಾಕಿಕೊಂಡು, ಬೇಲೂರು ಮಠದ ಆವರಣದಿಂದ ಹೊರನಡೆದರು. ಆದರೆ ಅವರು ಗೇಟಿನ ಹತ್ತಿರ ಬಂದಾಗ ಅವರ ಉತ್ತರೀಯವನ್ನು ಯಾರೋ ಹಿಂದಿನಿಂದ ಹಿಡಿದೆಳೆದರು; ಅವರ ಕುತ್ತಿಗೆ ಸುತ್ತ ಅದು ಬಿಗಿದುಕೊಂಡಿತು. ಹಿಂದಿರುಗಿ ನೋಡಿದಾಗ ಶ್ರೀರಾಮಕೃಷ್ಣರು ಅವರ ಮುಂದೆ ನಿಂತಿದ್ದರು. ''ಎಲ್ಲಿಗೆ ಹೋಗುತ್ತಿದ್ದೀಯಾ, ಮಗೂ?'' ಎಂದು ಅವರು ಪ್ರೇಮಾನಂದರನ್ನು ಕೇಳಿದರು. ''ನನ್ನನ್ನು ಇಲ್ಲಿಯೇ ಬಿಟ್ಟು ನೀನು ಹೇಗೆ ಹೋಗಬಲ್ಲೆ?'' ಎಂದು ಅವರು ಕೇಳಿದರು. ಈ ದರ್ಶನದಿಂದ ಭಾವೋನ್ಮತ್ತರಾದ ಪ್ರೇಮಾನಂದರು ಓಡಿಹೋಗಿ ಸ್ವಾಮಿ ಬ್ರಹ್ಮಾನಂದರ ಪಾದಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿದರು.

('Sri Ramakrishna Saves' ಗ್ರಂಥದಿಂದ)

ನಮ್ಮ ಸಮಸ್ಯೆಗಳು ಮತ್ತು ವಿವೇಕಾನಂದರ ಮಾನವೀಯ ಪರಿಹಾರ

ಕೆ.ಎಲ್. ಪದ್ಮಿನಿ

ಜಗತ್ತು ಆಧುನಿಕವಾದಂತೆಲ್ಲ ನಮ್ಮ ಬದುಕಿನ ಸಮಸ್ಯೆಗಳೂ ಅಧಿಕವಾಗುತ್ತಿವೆ, ಸಂಕೀರ್ಣವಾಗುತ್ತಿವೆ. ಹಲವು ಸಮಸ್ಯೆಗಳಿಗೆ ಪರಿಹಾರವೇ ಇಲ್ಲವೇನೋ ಅನ್ನಿಸುತ್ತವೆ. ಆದರೆ ಸ್ವಾಮಿ ವಿವೇಕಾನಂದರ ವಿಚಾರಧಾರೆ, ಚಿಂತನೆಗಳ ಅಧ್ಯಯನದಿಂದ ಅನೇಕ ಜಟಿಲ ಸಮಸ್ಯೆಗಳಿಗೆ ಅತ್ಯಂತ ಉತ್ತಮ ಪರಿಹಾರ ದೊರೆಯಬಹುದು - ಇದನ್ನು ಇಂದು ನಮ್ಮ ಸಮಾಜ ಅರಿತುಕೊಳ್ಳುತ್ತಿದೆ. ಈ ಕುರಿತು ಇಲ್ಲಿ ವಿಶ್ಲೇಷಿಸಿರುವ ಲೇಖಕಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕಿಯಾಗಿದ್ದರು, ಹಾಗೂ ಹೊಳಲ್ಕೆರೆಯ ಕಾಲೇಜೊಂದರಲ್ಲಿ ಪ್ರಾಚಾರ್ಯರಾಗಿ ನಿವೃತ್ತರಾದವರು. ಉತ್ತಮ ವಾಗ್ಮಿ, ಚಿಂತಕಿ ಹಾಗೂ ಲೇಖಕಿಯಾಗಿರುವ ಅವರು ಪ್ರಸ್ತುತ ಮೈಸೂರು ನಿವಾಸಿಗಳಾಗಿದ್ದಾರೆ.

ಪ್ರಸ್ತುತ ಪರಿಸ್ಥಿತಿ: ನಾವು ಈಗಲೂ ಸಾವು ಬದುಕಿನ ಸಮಸ್ಯೆಯಿಂದ ಒದ್ದಾಡುತ್ತಿದ್ದೇವೆ. ಅದಕ್ಕೆ ಮುಖ್ಯ ಕಾರಣ ನಾವು ಸಂಗತಿಗಳನ್ನು ಬಿಡಿಬಿಡಿಯಾಗಿ ಗಮನಿಸುತ್ತಿರುವುದು. ಒಂದು ಅರ್ಥದಲ್ಲಿ ನಾವು ಪ್ರತ್ಯೇಕತಾವಾದಿಗಳು. ಭೂತಕಾಲದ ಸಂಗತಿಗಳು ಭೂತಕಾಲದ್ದು, ಅವು ಘಟಿಸಿ ಮುಗಿದಿವೆ, ಅದಕ್ಕಾಗಿ ನಾವು ತಲೆ ಕೆಡಿಸಿಕೊಳ್ಳಬೇಕಾಗಿಲ್ಲ ಎಂದು ಕೊಡವಿಕೊಳ್ಳುತ್ತೇವೆ. ಭವಿಷ್ಯತ್ಕಾಲದವುಗಳು ಇನ್ನೂ ಸಂಭವಿಸಬೇಕಾಗಿವೆ, ಅವುಗಳಿಗಾಗಿ ತಲೆಕೆಡಿಸಿಕೊಳ್ಳಬೇಕಾಗಿಲ್ಲ ಎಂದು ಪಕ್ಕಕ್ಕೆ ಸರಿಸುತ್ತೇವೆ. ವರ್ತಮಾನ ಮಾತ್ರ ಸಂಪೂರ್ಣವಾಗಿ ನಿಶ್ಚಿತ ಎಂದು ಅದನ್ನು ಉಲ್ಲಾಸ ಸಂಭ್ರಮಗಳಿಂದ ಅನುಭವಿಸುತ್ತೇವೆ.

ನಾವೆಲ್ಲಾ ವೈಯಕ್ತಿಕ ವಿಶಿಷ್ಟತೆಯುಳ್ಳವರು, ನಾವೆಲ್ಲಾ ಪರಸ್ಪರ ಸ್ವತಂತ್ರರು ಮತ್ತು ಸಮರ್ಥರು, ನಮ್ಮ ನಮ್ಮ ಆಸೆ ಆಕಾಂಕ್ಷೆಗಳೆಲ್ಲಾ ನಮ್ಮ ನಮ್ಮವೇ, ಯಾರೊಬ್ಬರೂ ಯಾರೊಬ್ಬರಿಗಾಗಿಯೂ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ, ಯಾರಿಗೂ ಯಾರೊಬ್ಬರ ಸ್ವಂತಿಕೆಯ ಮಧ್ಯೆ ಮೂಗು ತೂರಿಸುವ ಹಕ್ಕಾಗಲೀ ಅಧಿಕಾರವಾಗಲೀ ಇಲ್ಲ, ಯಾರೂ ಯಾರಿಗಾಗಿಯೂ ಮಾದರಿಗಳನ್ನಾಗಲೀ, ಸಂಪನ್ಮೂಲಗಳನ್ನಾಗಲೀ, ಸಾಧನ ಸಲಕರಣೆಗಳನ್ನಾಗಲೀ ಒದಗಿಸುವ ಗೋಜಿಗೆ ಹೋಗಬೇಕಾಗಿಲ್ಲ, ಅವರವರದು ಅವರವರಿಗೆ. ಯಾರಿಗೆ ಯಾವುದು ಬೇಕೋ ಅದನ್ನು ಅವರೇ ಶ್ರಮವಹಿಸಿ ಪಡೆದುಕೊಳ್ಳುತ್ತಾರೆ. ಇದು ಸ್ಪರ್ಧಾಯುಗ. ನಮ್ಮ ನಮ್ಮ ಉಳಿವಿಗಾಗಿ ನಾವೇ ವೈಯಕ್ತಿಕವಾಗಿ ಹೋರಾಡಬೇಕು. ನಮ್ಮದು ಪ್ರಜಾಸತ್ತಾತ್ಮಕತೆ, ಪ್ರತಿಯೊಬ್ಬರೂ ಏಕಮೇವಾದ್ವಿತೀಯರು. ಯಾರೂ ಯಾರೊಬ್ಬರ ಜೀವನರೀತಿಯಲ್ಲಿ ಮಧ್ಯೆ ಪ್ರವೇಶ ಮಾಡುವಂತಿಲ್ಲ, ಹಾಗೆ ಮಾಡುವ ಅಗತ್ಯ ಕೂಡ ಇಲ್ಲ ಎಂದೇನೋ ದೃಢವಾಗಿ ಹೇಳುತ್ತೇವೆ.

ಆದರೂ ನಮ್ಮ ಸಮಾಜ, ನಮ್ಮ ದೇಶದ ಆಡಳಿತಾತ್ಮಕ ವ್ಯವಸ್ಥೆ ಯಾರೊಬ್ಬರನ್ನೂ ಬಿಡದೆ ಪ್ರತಿಯೊಬ್ಬ ಪ್ರಜೆಯ ಕಲ್ಯಾಣಕ್ಕಾಗಿ, ಸರ್ವತೋಮುಖ ಅಭಿವೃದ್ಧಿಗಾಗಿ ತಪ್ಪದೇ ಜವಾಬ್ದಾರಿಯುತ ಯೋಜನೆಗಳನ್ನು ರೂಪಿಸಬೇಕು, ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವುಗಳನ್ನು ಯಶಸ್ವಿಯಾಗಿ ಮತ್ತು ಪಾರದರ್ಶಕವಾಗಿ ಜಾರಿಗೆ ತರಬೇಕು ಎಂದು ನಿರೀಕ್ಷಿಸುತ್ತೇವೆ ಮತ್ತು ಅದಕ್ಕಾಗಿ ಹಕ್ಕೊತ್ತಾಯ ಮಾಡುತ್ತೇವೆ. ಬದುಕನ್ನು ಕುರಿತ ನಿಲುವುಗಳಲ್ಲಿನ ಈ ರೀತಿಯ ವೈರುಧ್ಯ, ಬದುಕಿನ ಎಲ್ಲಾ ಮುಖಗಳಲ್ಲಿಯ ವೈರುದ್ಧ್ಯಗಳಿಗೆ ಕಾರಣೀಭೂತವಾಗಿದೆ.



ಕೆಲವು ಪ್ರಮುಖ ದ್ವಂದ್ವಗಳು: ಮೊಟ್ಟಮೊದಲಿಗೆ ವ್ಯಕ್ತಿ ಸಮಾಜಕ್ಕಿಂತ ಸಂಪೂರ್ಣವಾಗಿ ಭಿನ್ನ ಎಂದು ತಿಳಿಯುತ್ತೇವೆ. ವ್ಯಕ್ತಿಯನ್ನು ಸಮಾಜಕ್ಕೆ ಎದುರಾಗಿ ಒಂದರ್ಥದಲ್ಲಿ ವಿರೋಧಿ ನೆಲೆಯಲ್ಲಿ ಇರಿಸುತ್ತೇವೆ. ಸಮಾಜ ಕೇವಲ ತನ್ನ ಸದಸ್ಯರ ಹಿತಾಸಕ್ತಿಗೆ ಸಂಬಂಧಿಸಿದಂತೆ ಕರ್ತವ್ಯ ಜವಾಬ್ದಾರಿಗಳನ್ನು ಮಾತ್ರ ಹೊಂದಿರುವ ಸಂಸ್ಥೆ, ಅಷ್ಟೇ. ಸಮಾಜದ ಪ್ರತಿಯೊಬ್ಬ ಸದಸ್ಯನ ಹಿತವನ್ನು ಕಾಯುವ ಯೋಜನೆಗಳನ್ನು ಜಾರಿಗೆ ತರುವ ಜವಾಬ್ದಾರಿಯುತ ಸಾಮಾಜಿಕ-ಸ್ಥಾನದಲ್ಲಿರುವವರು ವ್ಯಕ್ತಿಯ ಜನ್ಮಸಿದ್ಧ ಹಕ್ಕುಗಳಂತಿರುವ ಬೇಡಿಕೆಗಳನ್ನು ಈಡೇರಿಸುವ ಸಾಧನ ಸಲಕರಣೆಗಳು ಮಾತ್ರ. ವ್ಯಕ್ತಿಯ ಜೀವನಗತಿ ಹೀಗೇ ಇರಬೇಕು, ಹಾಗೆ ಇರಲೇಬಾರದು ಎನ್ನುವ ಶರತ್ತುಗಳನ್ನು ವ್ಯಕ್ತಿಗೆ ವಿಧಿಸಲು ಅವರಿಗೆಯಾವ ಅಧಿಕಾರವೂ ಇಲ್ಲ ಎನ್ನುತ್ತೇವೆ. ಈ ರೀತಿಯ ದ್ವಂದ್ವರೂಪಿ ನಿಲುವು ವ್ಯಕ್ತಿಯ ಬೇಜವಾಬ್ದಾರಿ

ವರ್ತನೆಗೆ, ಜೊತೆಯವರಿಗೆ ತೋರುವ ಕ್ರೌರ್ಯಕ್ಕೆ ಜವಾಬ್ದಾರ ಆಗಿದೆ. ಇದು ಅಂತಿಮವಾಗಿ ಎಲ್ಲಾ ರೀತಿಯ ಭಯೋತ್ಪಾದಕತೆಗೆ, ನಿರಂಕುಶಾಧಿಕಾರಿತ್ವಕ್ಕೆ ಎಡೆಮಾಡಿಕೊಟ್ಟಿದೆ ಎಂಬುದು ಗಮನಾರ್ಹ.

ಎರಡನೆಯದಾಗಿ ಮತಧರ್ಮಕ್ಕಿಂತ ವಿಜ್ಞಾನ ಸಂಪೂರ್ಣವಾಗಿ ಭಿನ್ನ. ಮತಧರ್ಮದ ಕ್ಷೇತ್ರವೇ ಬೇರೆ, ವಿಜ್ಞಾನದ ಕ್ಷೇತ್ರವೇ ಬೇರೆ, ಅವು ಒಂದಕ್ಕೊಂದು ಪರಸ್ಪರ ಧ್ರುವವಿರೋಧಿ. ಮತ-ಧರ್ಮೀಯ ಆಚರಣೆಗಳನ್ನು ಇಟ್ಟುಕೊಂಡಿದ್ದರೂ ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿ ಉನ್ನತಿ ಸಾಧ್ಯವಾಗಬೇಕಾದರೆ ಸಾರ್ವಜನಿಕವಾಗಿ ಮತ, ಧರ್ಮವನ್ನು ಅತ್ಯಾವಶ್ಯಕವಾಗಿ ದೂರವಿರಿಸಲೇಬೇಕು. ಮತ, ಧರ್ಮವು ಜನಸಾಮಾನ್ಯರ ಭೌತಿಕ, ಆರ್ಥಿಕ ಸೌಖ್ಯವನ್ನು ಸಾಧಿಸುವ ವೈಜ್ಞಾನಿಕ ಚಿಂತನೆಗೆ, ತಾಂತ್ರಿಕ ಪರಿಣತಿಗೆ ಬಹು ದೊಡ್ಡ ಅಡೆತಡೆ; ಅದು ಭೌತಿಕ ದೈಹಿಕ ಮನರಂಜನೆಗಳನ್ನು ವಿರೋಧಿಸುತ್ತದೆ, ನಿಷೇಧಿಸುತ್ತದೆ; ಮರಣದ ನಂತರ ಸ್ವರ್ಗದಲ್ಲಿಯೇ ಸ್ಥಾನ ದೊರೆಯಬೇಕು ಎಂದಾದರೆ ಭೌತಿಕ ಸುಖ ಸಮೃದ್ಧಿಗಳಿಗೆ, ಭೌತಿಕ ಭೋಗ ಸಾಧನಗಳಿಗೆ ವಿದಾಯ ಹೇಳಲೇಬೇಕು ಎಂದು ನಿರ್ಬಂಧಿಸುತ್ತದೆ; ಇಂಥ ಮತಧರ್ಮವನ್ನು ನಮ್ಮ ವೈಯಕ್ತಿಕ ಬದುಕಿನ ಎಲ್ಲಾ ಕ್ಷೇತ್ರಗಳಿಂದ ಗಡೀಪಾರು ಮಾಡಲೇಬೇಕು; ಇದೇ ಧರ್ಮನಿರಪೇಕ್ಷತಾ ಸಿದ್ಧಾಂತದ ತಿರುಳು. ಸ್ವರ್ಗಲೋಕಕ್ಕಾಗಿ ಕೆಲವೊಂದು ನಿರ್ದಿಷ್ಟ ಆಚಾರಗಳನ್ನು ಅನುಸರಿಸಿದರೆ ಸಾಕು ಎನ್ನುತ್ತೇವೆ. ಇಂತಹ ತೀರ್ಮಾನ ಇಂದ್ರಿಯ ಸುಖಭೋಗಗಳಿಗೆ ಪ್ರಾಶಸ್ತ್ಯ ನೀಡುವಂತೆ ಮಾಡಿದೆ, ವೈಯಕ್ತಿಕ ಜೀವನದಲ್ಲಿ ಅನೈತಿಕ ನಡಾವಳಿಗೆ ಮತ್ತು ಸಾರ್ವಜನಿಕ ಬದುಕಿನಲ್ಲಿ ಎಲ್ಲಾ ರೀತಿಯ ಭ್ರಷ್ಟತೆಗೆ ಎಡೆಮಾಡಿಕೊಟ್ಟಿದೆ. ಸುಸಂಬದ್ಧ ಹಾರ್ದಿಕ ಸಾಮಾಜಿಕ ಜೀವನವನ್ನು ನಡೆಸುವ ಸಾಧ್ಯತೆಗೆ ಗಂಭೀರವಾದ ಆಘಾತವನ್ನುಂಟುಮಾಡಿದೆ.

ಮೂರನೆಯದಾಗಿ ಭೌತಿಕ ಆವಶ್ಯಕತೆಗಳೇ ಬೇರೆ, ಆಧ್ಯಾತ್ಮಿಕ ತುರ್ತುಗಳೇ ಬೇರೆ, ಅವು ಒಂದಕ್ಕೊಂದು ಧ್ರುವವಿರೋಧಿ. ನಮ್ಮ ಜೀವನ ರೀತಿಯಲ್ಲಿ ವೈಚಾರಿಕತೆ ಇರುವುದು ಅತ್ಯಾವಶ್ಯಕ. ನಮ್ಮ ಸುತ್ತಲಿನ ಸಂಗತಿಗಳನ್ನು ಸುಖ ಸೌಕರ್ಯಗಳ ಸಮೃದ್ಧಿಗೆ ಕಾರಕವಾಗುವ ವೈಜ್ಞಾನಿಕ ದೃಷ್ಟಿಕೋನದಿಂದ ಪರಿಶೀಲಿಸಬೇಕು. ಅಂಧವಿಶ್ವಾಸ, ಮೌಢ್ಯ, ಅತಾರ್ಕಿಕತೆ, ಜಡ ಸಾಂಪ್ರದಾಯಿಕತೆ, ನಿಷ್ಕ್ರಿಯತೆ, ಬಡತನಗಳನ್ನು ಪೋಷಿಸುವ ತಾತ್ತ್ವಿಕತೆ, ಆಧ್ಯಾತ್ಮಿಕತೆ, ಸಂಪ್ರದಾಯ ಇವುಗಳ ಹಿಡಿತದಿಂದ ಪಾರಾಗಬೇಕು. ನಮ್ಮ ಶಿಕ್ಷಣದಲ್ಲಿ ಆಧ್ಯಾತ್ಮಿಕ, ತಾತ್ತ್ವಿಕ, ಸಾಂಪ್ರದಾಯಿಕ ದೃಷ್ಟಿಕೋನಗಳಿಗೆ ಸ್ಥಳಾವಕಾಶ ಇರಬಾರದು ಎಂದುಕೊಳ್ಳುತ್ತೇವೆ. ಸಂಪ್ರದಾಯ, ತಾತ್ತ್ವಿಕತೆ, ತಾರ್ಕಿಕತೆಗಳ ಅರ್ಥ ಮತ್ತು ಮಹತ್ವವನ್ನು ಅರ್ಥಮಾಡಿಕೊಳ್ಳಲು ನಿರಾಕರಿಸುವ ಈ ಮನಸ್ಥಿತಿ ಎಲ್ಲಾ ರೀತಿಯ ಮಾನಸಿಕ ಕುಸಿತಕ್ಕೆ, ಬದುಕನ್ನು ಕುರಿತ ನೇತ್ಯರ್ಥಕ ಧೋರಣೆಗಳಿಗೆ, ಆತ್ಮಹತ್ಯೆ, ಆತ್ಮಾಹುತಿ ದಾಳಿಯಂತಹ ಉನ್ಮಾದಗಳಿಗೆ, ರಕ್ತಪಾತಕ್ಕೆ ರಾಜಮಾರ್ಗವಾಗಿದೆ.

ರೂಕ್ಷ ವ್ಯಕ್ತಿನಿಷ್ಠವಾದ: ನಮ್ಮ ವೈಯಕ್ತಿಕ ವಿಶಿಷ್ಟತೆಯನ್ನು ನಾವು ನಮ್ಮ ಶ್ರೇಷ್ಠತೆಯ ಗರಿಮೆಯ ಅಹಂಭಾವವನ್ನಾಗಿಸಿಕೊಂಡಿದ್ದೇವೆ. ನಮ್ಮ ಹಿರಿಮೆ ಗರಿಮೆಯ ಭಾವನೆಗೆ ಆಧಾರವಿದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸುವ ಗೋಜಿಗೇ ಹೋಗುವುದಿಲ್ಲ. ಬದಲಿಗೆ ನಮ್ಮ ಅಹಂಕಾರದ ಪ್ರದರ್ಶನವನ್ನು ವ್ಯಕ್ತಿಗತ ನೆಲೆಯಿಂದ ಸಾರ್ವಜನಿಕ ನೆಲೆಗೆ ವಿಸ್ತರಿಸುತ್ತೇವೆ, ಅದೇ ಪರಮ ಸತ್ಯ ಎಂದು ಬಿಂಬಿಸುತ್ತೇವೆ. ಅದರ ಆಗುಹೋಗುಗಳನ್ನು ಗಮನಕ್ಕೆ ತಂದುಕೊಳ್ಳದೆಯೇ ನಮ್ಮ ಸತ್ಯಗ್ರಹಿಕೆಗೆ ಅನುಗುಣವಾಗಿ ನಮಗೆ ಇಷ್ಟ ಬಂದಂತೆ ವರ್ತಿಸುತ್ತೇವೆ. ಇಂಥ ಸತ್ಯ-ಗ್ರಹಿಕೆ-ನಿಲುವಿನಿಂದಾಗಿ ವ್ಯಕ್ತಿಗೆ ವಿರುದ್ಧವಾಗಿ ರಾಜಕೀಯ ವ್ಯವಸ್ಥೆ, ಸಾಮಾಜಿಕ ವ್ಯವಸ್ಥೆ ಇದೆ ಎಂದು ತಿಳಿಯುವುದರ ಜೊತೆಗೆ ವ್ಯಕ್ತಿಗೆ ವಿರುದ್ಧವಾಗಿ ವ್ಯಕ್ತಿ ಇದ್ದಾನೆ ಎಂದೂ ತಿಳಿಯುತ್ತೇವೆ. ಇದರ ಮುಖ್ಯ ಪರಿಣಾಮ ವ್ಯಕ್ತಿ-ಪ್ರತ್ಯೇಕತಾವಾದ, ಜಾತೀಯತಾವಾದ, ವರ್ಗ-ಪ್ರತ್ಯೇಕತಾವಾದ, ಧಾರ್ಮಿಕ-ಪ್ರತ್ಯೇಕತಾವಾದಗಳೇ ಮೊದಲಾದ ಮೂಲಭೂತವಾದಗಳ ವಿಜೃಂಭಣೆ, ಬಹುಮುಖಿಯಾದ ದ್ವೇಷದ ವಾತಾವರಣ. ಇದು ಬದುಕಿಗೆ ಸ್ವಾಭಾವಿಕವಾಗಿ ಇರುವ ಸೌಂದರ್ಯವನ್ನು ಹಾಳು ಮಾಡುತ್ತಿದೆ; ಸರಳ ಬದುಕಿನ ಸಾಧ್ಯತೆಯನ್ನು ಮುರುಟಿಹಾಕುತ್ತಿದೆ; ಉದಾತ್ತವಾದ ಆಶಯದ ಬದುಕು ಸಾಧ್ಯವಾಗಿಸುವ ಸಾಮರಸ್ಯ, ಸೌಹಾರ್ದಭಾವಕ್ಕೆ, ಪರಸ್ಪರ ಕೈ ಕೈ ಕೂಡಿಸಿ ಉನ್ನತ ಮಟ್ಟವನ್ನು ತಲುಪುವ ಮನಸ್ಥಿತಿಗೆ ವಿಷವನ್ನು ಸೇರಿಸುತ್ತಿದೆ.

ಪರಿಸರಾತ್ಮಕ ವಿಪತ್ತು: ಪ್ರತಿಯೊಂದನ್ನೂ ಅದರದರ ದೃಷ್ಟಿಕೋನದಿಂದಲೇ ಗಮನಿಸುವ ಆತ್ಯಂತಿಕ ಪ್ರತ್ಯೇಕತಾ-ಗ್ರಹಿಕೆಯಿಂದಾಗಿ ಜೀವಿಗಳ ನಡುವೆ, ಅಜೀವಿಗಳ ನಡುವೆ, ಜೀವಿ ಅಜೀವಿಗಳ ನಡುವೆ, ವ್ಯಕ್ತಿ ವ್ಯಕ್ತಿಗಳ ನಡುವೆ ಇರುವ ಕೂಡು-ಸಂಬಂಧ, ಕೊಳು-ಕೊಡುಗೆಯ ಸಂಬಂಧವನ್ನು ಗ್ರಹಿಸಲಾರದೆ ಹೋಗಿದ್ದೇವೆ. ಇದರ ಮುಖ್ಯ ಪರಿಣಾಮ ಅತಿಯಾದ ಸ್ವಾರ್ಥ, ಸ್ವಕೇಂದ್ರಿತ ಲಾಭಾಕಾಂಕ್ಷೆ. ಇದರಿಂದಾಗಿ ನಾವು ಎದುರಿಸಬೇಕಾಗಿ ಬಂದಿರುವ ಅತ್ಯಂತ ಘೋರವಾದ ಪ್ರಾಕೃತಿಕ ವಿಪತ್ತಿಗೆ ನಿಚ್ಚಳ ಉದಾಹರಣೆ ಉತ್ತರಭಾರತದ ಕೇದಾರನಾಥದಲ್ಲಿ, ದಕ್ಷಿಣ ಭಾರತದ ಕೊಡಗಿನಲ್ಲಿ ನಮಗೆ ಒದಗಿ ಬಂದ ಘೋರ ದುರ್ದೆಶೆ. ಪ್ರಾಕೃತಿಕ ಮತ್ತು ಜೀವಸಹಜ ಸ್ವಭಾವ ಸ್ವರೂಪಾತ್ಮಕ ನಿಯಮಾತ್ಮಕತೆಯನ್ನು, ಬದ್ಧತೆಯನ್ನು, ಪಾರಸ್ಪರಿಕ ಸಾಮರಸ್ಯತೆ, ಹೊಂದಾಣಿಕೆಯನ್ನು ಕಂಡುಕೊಳ್ಳಲು ವಿಫಲರಾಗಿರುವುದೇ ನಮ್ಮೆಲ್ಲ ಪ್ರಾಕೃತಿಕ ದುರಂತಗಳಿಗೆ ಕಾರಣ.

ಲೋಕಸಂಗ್ರಹ ಪರಿಕಲ್ಪನೆ: ಸಾಧ್ಯವಾಗಬಹುದಾದ ಗರಿಷ್ಠ ಒಳಿತು ಮತ್ತು ಸುಖೀ ಬದುಕು ನಮ್ಮದಾಗಬೇಕು, ನಮ್ಮ ಪರಿಸರ ಮಾನವೀಯ ಆಗಬೇಕು, ನಮ್ಮದು ರಾಮರಾಜ್ಯವಾಗಬೇಕು ಎನ್ನುವುದು ನಮ್ಮ ಕನಸು, ನಮ್ಮ ನಿರೀಕ್ಷೆ, ನಮ್ಮ ಆದರ್ಶ. ನಮ್ಮ ಪ್ರಾಚೀನ ಚಿಂತಕರ ಲೋಕಸಂಗ್ರಹದ ಪರಿಕಲ್ಪನೆಯ ನೆಲೆಯಲ್ಲಿ ನಮ್ಮೆಲ್ಲ ಸಂಗತಿಗಳನ್ನು ಅರ್ಥಮಾಡಿಕೊಂಡಾಗ ನಮ್ಮ ಕನಸು ನನಸಾದೀತು, ನಮ್ಮ ನಿರೀಕ್ಷೆ ವಾಸ್ತವವಾದೀತು, ನಮ್ಮ ಆದರ್ಶ ಕೈಗೂಡೀತು. ಇದಕ್ಕೆ ವೇದ, ಭಗವದ್ಗೀತೆಗಳಲ್ಲಿಯ ಲೋಕ ಸಂಗ್ರಹ ಪರಿಕಲ್ಪನೆ ಸೂಕ್ತ ಪಥ, ಮಾರ್ಗದರ್ಶನ, ದಿಕ್ಸೂಚಿ. ಇದನ್ನು ಆಧರಿಸಿಯೇ ವಿವೇಕಾನಂದರ ಮನುಷ್ಯಕೇಂದ್ರಿತ ಆನ್ವಯಿಕ ತಾತ್ತ್ವಿಕತೆ ರೂಪುಗೊಂಡಿದೆ. (ಪ್ರಾಕ್ಟಿಕಲ್ ವೇದಾಂತ) ವೇದ ಎಲ್ಲೆಡೆಯಲ್ಲೂ

ಬೆಸೆಯುವ ವಿಶ್ವಾತ್ಮಕವಾದ ಸಾಮಾಜಿಕ ಕಲ್ಯಾಣಕಾರಕ ಹಿತಾಕಾಂಕ್ಷಿ ಮಾನವೀಯ ಮಧುರ ಬಾಂಧವ್ಯವನ್ನು (ಹೊನಲನ್ನು) ಲೋಕ ಸಂಗ್ರಹ ಎಂದು ಪರಿಕಲ್ಪಿಸುತ್ತದೆ. ಇದು ಮನುಷ್ಯ ಮತ್ತು ಇಡೀ ವಾಸ್ತವಿಕತೆಯ ನಡುವೆ ಇರುವ ಚೇತೋಹಾರಿ ಭಾವಬಂಧುರತೆಯನ್ನು ಎತ್ತಿಹಿಡಿಯುತ್ತದೆ. ಭಗವದ್ಗೀತೆಯ ಕೃಷ್ಣ ಈ ಪರಿಕಲ್ಪನೆಯನ್ನು ತನ್ನ ಅವತಾರದ ವಿಶಿಷ್ಟತೆಯನ್ನು ಅರ್ಜುನನಿಗೆ ವಿವರಿಸುವ ಸಂದರ್ಭದಲ್ಲಿ ತನ್ನದೇ ಆದ ರೀತಿಯಲ್ಲಿ ಇದನ್ನು ಗಮನಕ್ಕೆ ತರುತ್ತಾನೆ. ವೈಯಕ್ತಿಕ ಆತ್ಮವು ಇರುವುದೆಲ್ಲದರ ಅವಿಭಾಜ್ಯ ಅಂಗ ಎಂಬ ನೆಲೆಯಲ್ಲಿ ಸ್ವಕೇಂದ್ರಿತ ಆಶೋತ್ತರಗಳನ್ನು ಇಡೀ ವಾಸ್ತವಿಕತೆಯ ಕೇಂದ್ರದ ನೆಲೆಗೆ ವಿಸ್ತರಿಸುವುದೇ ಲೋಕಸಂಗ್ರಹ ಎಂಬುದರ ಅರ್ಥ.

ವಿವೇಕಾನಂದರ ಮನುಷ್ಯಕೇಂದ್ರಿತ ಲೋಕಸಂಗ್ರಹ ಪರಿಕಲ್ಪನೆ ಮತ್ತು ಆನ್ವಯಿಕ ತಾತ್ತ್ವಿಕತೆ: ವಿವೇಕಾನಂದರು ೧೯–೨೦ನೇ ಶತಮಾನದ ಶ್ರೇಷ್ಠ ತತ್ತ್ವಶಾಸ್ತ್ರಜ್ಞರಲ್ಲಿ ಪ್ರಮುಖರು. ಅವರ ಜೀವನದ ಮತ್ತು ಬೋಧನೆಯ ಕೇಂದ್ರಬಿಂದು ಮನುಷ್ಯನೇ. ಅವರ ಮನುಷ್ಯ, ಮನುಷ್ಯತ್ವ, ಮಾನವನಾಗಿ ರೂಪುಗೊಳ್ಳುವಿಕೆಯ ಪರಿಕಲ್ಪನೆಗಳು ಪ್ರಾಚ್ಯ-ಪಾಶ್ಚಾತ್ಯ ಎಂಬ ಭೇದವಿಲ್ಲದೆ ಎಲ್ಲೆಡೆ ಮಾನವ ಕಲ್ಯಾಣವನ್ನು ಸಾಧಿಸುವ ಆಶಯವುಳ್ಳದ್ದು. ಮನುಷ್ಯನಿಗೆ ತನ್ನ ಮಹತ್ವವನ್ನು, ಘನತೆಯನ್ನು ದೈವಿಕತೆಯ ಮಟ್ಟಕ್ಕೆ ಮೇಲಕ್ಕೆತ್ತುವ ಸಾಮರ್ಥ್ಯ ಇದೆ ಎನ್ನುವ ವಿಷಯದಲ್ಲಿ ಅವರಿಗೆ ನಂಬಿಕೆಯಿತ್ತು. ಎಲ್ಲರೂ ದೈವಾಂಶ ಸಂಭೂತರಾಗಿರುವುದರಿಂದಾಗಿ ಎಲ್ಲರೂ ಒಂದೇ, ಎಲ್ಲರೂ ಸಮಾನರು; ನಮ್ಮ ಗಮನಕ್ಕೆ ಬರುವ ಭಿನ್ನತೆಗಳು ಸಾಪೇಕ್ಷ ವಾಸ್ತವತೆ ಅಥವಾ ಭ್ರಮಾತ್ಮಕ ಗ್ರಹಿಕೆ ಎಂಬುದನ್ನು ವಿವೇಕಾನಂದರು ಮನಗಂಡಿದ್ದರು. ಅವರು ಆತ್ಯಂತಿಕ ಸತ್ಯದ ಏಕತ್ವವನ್ನು ಎತ್ತಿಹಿಡಿಯುವ, ಬದುಕಿನ ನೈಜ ಸಂತೋಷವನ್ನು ಹಾಳುಮಾಡುವ ಎಲ್ಲಾ ವಿಧದ ಪ್ರತ್ಯೇಕತೆಗಳನ್ನು ಸ್ಥಿರೀಕರಿಸುವ ದ್ವೈತತೆ ಮತ್ತು ಬಹುತ್ವದ ಸತ್ಯತೆಯನ್ನು ನಿರಾಕರಿಸುವ ಅದ್ವೈತದ ನಿಷ್ಠಾವಂತ ಅನುಯಾಯಿ ಆಗಿದ್ದರು. ಅವರ ತಾತ್ತ್ವಿಕತೆಯ ಆಧಾರಸೂತ್ರ ಅದ್ವೈತಾಗ್ರಣಿ ಶಂಕರಾಚಾರ್ಯರ '**ಅಹಂ ಬ್ರಹ್ಮಾಸ್ಮಿ**' ಎನ್ನುವ ನಿಲುವು. ಸುಂದರ ಬದುಕಿನ ಸಾಧ್ಯತೆಯನ್ನು ನಾಶಮಾಡುವ ಪ್ರತ್ಯೇಕತಾ ನಿಲುವಿನ ಮೌಲ್ಯವನ್ನು ನಿರಾಕರಿಸಬಯಸುವವರಿಗೆ, ಅಸ್ಪೃಶ್ಯತೆ, ಗುಲಾಮ ಪದ್ಧತಿಯೇ ಮುಂತಾದ ನೇತ್ಯರ್ಥಕ ಮನಸ್ಥಿತಿ ಮತ್ತು ನೇತ್ಯರ್ಥಕ ನಡಾವಳಿಗಳನ್ನು ಮೂಲೋತ್ಪಾಟನ ಮಾಡಲು ಆಶಿಸುವವರಿಗೆ ಇದೇ ಸೂಕ್ತ ಆರಂಭಬಿಂದು, ಮಾರ್ಗದರ್ಶಿಸೂತ್ರ, ಅತ್ಯಗತ್ಯವಾದ ಮಾನದಂಡ.

ವಿವೇಕಾನಂದರ ಮಾನವತಾವಾದ: ಮನುಷ್ಯಜೀವಿಯಾಗಿ ಮಾನವಮೌಲ್ಯಗಳನ್ನು ಒಳಗೊಳ್ಳುವ ಘನತೆಯ ಬದುಕನ್ನು ನಡೆಸಬಲ್ಲ ಸಾಮರ್ಥ್ಯ ವ್ಯಕ್ತಿಗೆ ಇರುವುದನ್ನು ವಿವೇಕಾನಂದರು ಅತಿಶಯವಾಗಿ ಎತ್ತಿಹಿಡಿಯುತ್ತಿದ್ದರು. ಮನುಷ್ಯತ್ವ ಎಂದರೆ ಅವನ ಸ್ವರೂಪಾತ್ಮಕ ದೈವಿಕತೆ; ಅರ್ಥಪೂರ್ಣ ಬದುಕು ಎಂದರೆ ಅವನ ಕ್ರಿಯಾ ಮತ್ತು ಆಲೋಚನಾ ಸ್ವಾತಂತ್ರ್ಯ ಹಾಗೂ ಬೌದ್ಧಿಕ ವಿಕಸನವುಳ್ಳ ಜೀವನಕ್ರಮ ಎನ್ನುತ್ತಿದ್ದರು. ಅವೇ ವಾಸ್ತವಿಕವಾಗಿ ಒಬ್ಬನ ವೈಯಕ್ತಿಕ ವಿಶಿಷ್ಟತೆ ಎಂದು ಗುರುತಿಸಿದ್ದರು. ನಮ್ಮ ವೈಚಾರಿಕ ಸಾಮರ್ಥ್ಯ ದೇವರು ನಮಗಾಗಿ ಕೊಟ್ಟ ಅಮೂಲ್ಯವಾದ ಕೊಡುಗೆ, ಅದನ್ನು ಬಳಸಿ ಮೌಢ್ಯದ ಅಂಧಕಾರದಿಂದಾಚೆಗೆ ಬರುವುದು ನಮ್ಮ ಜವಾಬ್ದಾರಿ; ಅದನ್ನು ಮರ್ಯಾದಿಸದಿದ್ದರೆ ದೇವರು ನಮ್ಮನ್ನು ಖಂಡಿತವಾಗಿ ಕ್ಷಮಿಸುವುದಿಲ್ಲ ; ವಾಸ್ತವವಾಗಿ ಈ ದೈವೀ ಕೊಡುಗೆಯನ್ನು ಬಳಸಲು ನಿರಾಕರಿಸುವ ಹಕ್ಕು ನಮಗಿಲ್ಲ ; ಹಾಗೂ ಉನ್ಮಾದಿತರಂತೆ ಮನುಷ್ಯತ್ವರಹಿತ ಜಿಗುಟುತನದ ಬದುಕನ್ನು ನಡೆಸುವ ಅಧಿಕಾರವೂ ನಮಗಿಲ್ಲ ಎಂದು ಖಡಾಖಂಡಿತವಾಗಿ ಹೇಳುತ್ತಿದ್ದರು.

ವ್ಯಕ್ತಿ ತನ್ನನ್ನು ಕುರಿತು ಏನು ಭಾವಿಸಿಕೊಳ್ಳುತ್ತಾನೆಯೋ ಹಾಗೆ ಅವನು ತನ್ನನ್ನು ರೂಪಿಸಿಕೊಳ್ಳುತ್ತಾನೆ, ಅದೇ ರೀತಿ ತನ್ನ ನಡೆ ನುಡಿಗಳನ್ನು ಹೊಂದಿರುತ್ತಾನೆ. ದಯೆ, ಕರುಣೆ, ಅನುಕಂಪೆ, ಪ್ರೀತಿ, ವೈಚಾರಿಕತೆ, ಸಹಭಾಗಿತ್ವದ ಪ್ರಜ್ಞೆಯೇ ಮೊದಲಾದ ದೈವಿಕ ಲಕ್ಷಣಗಳುಳ್ಳವನು ತಾನು ಎಂದು ಅವನು ತನ್ನನ್ನು ಅರ್ಥ ಮಾಡಿಕೊಂಡರೆ, ಖಂಡಿತವಾಗಿ ಅವನು ಸಕಲ ಜೀವ ಅಜೀವಗಳ ಹಿತಾಸಕ್ತಿಯನ್ನು ಭಾವಿಸುತ್ತಾನೆ, ಚಿಂತಿಸುತ್ತಾನೆ ಮತ್ತು ಅದರಂತೆ ಕಾರ್ಯೋನ್ಮುಖನಾಗುತ್ತಾನೆ ಎಂಬುದನ್ನು ಅವರು ಮನವರಿಕೆ ಮಾಡಿಕೊಂಡಿದ್ದರು. ಹೀಗೆ ಜಾಗೃತನಾದವನು ನಿಶ್ಚಯವಾಗಿ ಪ್ರತಿಯೊಬ್ಬ ವ್ಯಕ್ತಿಯೂ, ಪ್ರತಿಯೊಂದು ಜೀವಿಯೂ, ಹಾಗೆಯೇ ಪ್ರತಿಯೊಂದು ಜೀವವೂ ತಮ್ಮ ತಮ್ಮದೇ ಆದ ರೀತಿಯಲ್ಲಿ ಗೌರವಾರ್ಹ ಎಂಬುದನ್ನು ಮನಗಂಡಿರುತ್ತಾನೆ; ಯಾವುದೇ ಕಾರಣಕ್ಕೂ ಯಾವುದೇ ರೀತಿಯ ದ್ವೇಷ, ಅನ್ಯಾಯ, ಭ್ರಷ್ಟತೆ, ಅಪಮೌಲ್ಯೀಕರಣ, ಶೋಷಣೆಯೇ ಮೊದಲಾದ ನೇತ್ಯರ್ಥಕ ನಡಾವಳಿಗೆ ಅವಕಾಶ ಕೊಡುವುದಿಲ್ಲ ಎಂಬುದನ್ನು ಎಲ್ಲರಿಗೂ ಎಲ್ಲೆಡೆ ಸಾರಿ ಹೇಳಿದರು.

ಅವಕಾಶವುಳ್ಳವರು ಮತ್ತು ಅವಕಾಶವಂಚಿತರು, ಶ್ರೀಮಂತರು ಮತ್ತು ಬಡವರು, ಧಾರ್ಮಿಕತೆ ಮತ್ತು ಧರ್ಮನಿರಪೇಕ್ಷತೆ, ಆಧ್ಯಾತ್ಮಿಕತೆ ಮತ್ತು ಪ್ರಾಪಂಚಿಕತೆ, ವಿಚಾರ ಮತ್ತು ನಂಬಿಕೆಗಳ ನಡುವಿನ ಅಂತರವನ್ನು ನಿವಾರಿಸುವ ಉದ್ದೇಶ ವಿವೇಕಾನಂದರಿಗಿತ್ತು. ಆತ್ಯಂತಿಕ ಇರುವಿಕೆಯಲ್ಲಿ ಇಂತಹ ಅಂತರಗಳಿಗೆ ವಾಸ್ತವಿಕವಾಗಿ ಅವಕಾಶವಿಲ್ಲ, ಇರುವವರೆಲ್ಲರೂ ಮತ್ತು ಇರುವವುಗಳೆಲ್ಲವೂ ಅಮೃತತತ್ತ್ವದ ಬಹುರೂಪಿಗಳು (**ಅಮೃತಸ್ಯ ಪುತ್ರಾಃ**) ಆಗಿರುವುದರಿಂದ ಎಲ್ಲರ ಮತ್ತು ಎಲ್ಲವುಗಳ ನಡುವೆ ಸೋದರತ್ವ ಸಮಾನತೆಯ ಬಾಂಧವ್ಯವನ್ನು ಸ್ಥಾಪಿಸಿಕೊಳ್ಳುವುದು ಎಲ್ಲರ ಕರ್ತವ್ಯ, ಜವಾಬ್ದಾರಿ ಎಂದು ಅವರು ತಿಳಿದಿದ್ದರು. ಅಂಥ ಜಾಗೃತಿಯನ್ನು ಎಲ್ಲರಲ್ಲಿಯೂ ಮೂಡಿಸ ಬಯಸಿದರು. ನಾವು ಪ್ರಜಾಸತ್ತಾತ್ಮಕತೆಯನ್ನು ಆಯ್ಕೆ ಮಾಡಿಕೊಂಡಿರುವುದರಿಂದ ವಿವೇಕಾನಂದರ ಈ ಉದ್ದೇಶ ಮತ್ತು ಗ್ರಹಿಕೆ ನಮ್ಮೆಲ್ಲರ ಉದ್ದೇಶ ಮತ್ತು ಗುರಿಯಾಗುವುದು ಸಹಜವೇ ಆಗುತ್ತದೆ.

ವಿವೇಕಾನಂದರ ಸಮಗ್ರತಾ ಆಧ್ಯಾತ್ಮಿಕ ಸಿದ್ಧಾಂತ: ವಿವೇಕಾನಂದರದು ವ್ಯಕ್ತಿಯ ಆತ್ಮತತ್ತ್ವವನ್ನು ಇಡೀ ವಿಶ್ವವನ್ನು ಒಳಗೊಳ್ಳುವಂತೆ ವಿಸ್ತರಿಸಿಕೊಳ್ಳುವ ಸಮಗ್ರತಾ ಆಧ್ಯಾತ್ಮಿಕತೆ. ಪ್ರತಿಯೊಬ್ಬನೂ ಶರತ್ತುರಹಿತವಾಗಿ ಎಲ್ಲ ಚರಾಚರಗಳ ಅರ್ಥಪೂರ್ಣ ಇರುವಿಕೆಯನ್ನು ಮರ್ಯಾದಿಸುವ ಸೃಜನಶೀಲ ಶಕ್ತಿಕೇಂದ್ರ ಆಗಬೇಕು ಎಂಬುದು

ಅವರ ಆಶಯ. ಅವರ ಆಧ್ಯಾತ್ಮಿಕತೆಯ ಸಾರಭೂತ ತತ್ತ್ವ – **ತತ್ ತ್ವಂ ಅಸಿ,** ಅದು ನೀನೇ ಆಗಿದ್ದೀಯೆ; ಸ್ವಹಿತಾಸಕ್ತಿಯನ್ನು ಇಡೀ ವಾಸ್ತವತೆಯ ಹಿತಾಸಕ್ತಿಯಾಗಿ ರೂಪಾಂತರಿಸಿಕೊಂಡರೆ ನಮ್ಮದು ಸಮಗ್ರತಾ ಆಧ್ಯಾತ್ಮಿಕತೆಯೇ; ಇದಕ್ಕೆ ಅತ್ಯಗತ್ಯವಾದ ಸಾಧನಾ ತಂತ್ರ ಮಾನವಸೇವೆ. ದುರ್ಬಲರಿಗೆ ಮಾಡುವ ಸೇವೆಯೇ ನಿಜವಾದ ದೇವರ ಸೇವೆ – ಎನ್ನುವುದಾಗಿತ್ತು.

ವಿವೇಕಾನಂದರ ಸಮಗ್ರತಾ ಆಧ್ಯಾತ್ಮಿಕತಾ ಸಿದ್ಧಾಂತವು ಮನುಷ್ಯನ ಅರಿವು ಪರಿಶುದ್ಧ ಪ್ರೀತಿ, ಶಾಂತಿ, ನಿರ್ಭಯತೆಗಳ ಸ್ವಾಭಾವಿಕ ಉದ್ಭೂತ ಚಿಲುಮೆಯಾಗುವ ದೈವಿಕ ಆಯಾಮವನ್ನು ಪಡೆಯುವುದಕ್ಕೆ ಹಾಗೂ ಶೋಷಿತರ, ತುಳಿತಕ್ಕೆ ಒಳಗಾದವರ ಮತ್ತು ದುಃಖಿತರ ಸ್ವಾತಂತ್ರ್ಯ ಸಮಾನತೆಗಾಗಿ ಕಾರ್ಯನಿರತ ಆಗುವುದಕ್ಕೆ ಸಂಬಂಧಿಸಿದುದು. ಅದು ಮನುಷ್ಯನನ್ನು ಅವನ ವಿಸ್ತೃತ ಸಮಾಜದೊಂದಿಗೆ ಸಮೀಕರಿಸುತ್ತದೆ; ಸಶಕ್ತ ದೇಶವನ್ನು ಕಟ್ಟಬಯಸುತ್ತದೆ, ಸಶಕ್ತ ಪ್ರಜೆಯನ್ನು ರೂಪಿಸಬಯಸುತ್ತದೆ. ಇದನ್ನು ವಿವೇಕಾನಂದರು ಮನುಷ್ಯನಾಗಿ ರೂಪುಗೊಳ್ಳುವಿಕೆ ಎಂದು ಅರ್ಥೈಸುತ್ತಾರೆ.

ಮನುಷ್ಯನಾಗಿ ರೂಪುಗೊಳ್ಳುವಿಕೆ: ವಿವೇಕಾನಂದರಿಗೆ ವ್ಯಕ್ತಿಯೊಬ್ಬ ತಾನೊಂದು ದೇಶದ, ಸಮಾಜದ ಜವಾಬ್ದಾರಿಯುತ ಪ್ರಜೆ, ಸದಸ್ಯ ಎಂದು ಪರಿಗಣಿಸಿಕೊಳ್ಳುವುದು ಅತ್ಯಾವಶ್ಯಕ. ವ್ಯಕ್ತಿಯೊಬ್ಬ ತನ್ನನ್ನು ಯಾವುದಾದರೊಂದು ದೇಶದ ಪ್ರಜೆಯಾಗಿ ಸಮಾಜದ ಸದಸ್ಯನಾಗಿ ಅಧಿಕೃತವಾಗಿ ಗುರುತಿಸಿಕೊಂಡ ಹೊರತೂ ಅವನ ಸರ್ವತೋಮುಖ ಕಲ್ಯಾಣಕ್ಕಾಗಿ ಯಾವುದೇ ಕಾರ್ಯಯೋಜನೆಯ ಫಲವನ್ನು ಅವನಿಗೆ ತಲುಪಿಸುವ ಜವಾಬ್ದಾರಿ ದೇಶದ್ದಾಗಲೀ ಸಮಾಜದ್ದಾಗಲೀ ಆಗುವುದಿಲ್ಲ. ವ್ಯಕ್ತಿ ಮತ್ತು ದೇಶ, ವ್ಯಕ್ತಿ ಮತ್ತು ಸಮಾಜ ಪರಸ್ಪರ ಪೂರಕ; ತನ್ನ ಪ್ರಜೆಗಳಿಗೆ ಸಂಬಂಧಿಸಿದಂತೆ ದೇಶಕ್ಕೆ, ತನ್ನ ಸದಸ್ಯರಿಗೆ ಸಂಬಂಧಿಸಿದಂತೆ ಸಮಾಜಕ್ಕೆ ಕರ್ತವ್ಯ ಹೊಣೆಗಾರಿಕೆಗಳು ಇದ್ದ ಹಾಗೆ ವ್ಯಕ್ತಿಗೂ ಅವನ ದೇಶಕ್ಕೆ, ಸಮಾಜಕ್ಕೆ ಸಂಬಂಧಿಸಿದಂತೆ ಇವೆ ಎಂಬುದನ್ನು ಗಮನಿಸಲೇಬೇಕು. ಆ ನೆಲೆಯಲ್ಲಿಯೇ ವ್ಯಕ್ತಿ ಮತ್ತು ದೇಶ, ವ್ಯಕ್ತಿ ಮತ್ತು ಸಮಾಜ, ವ್ಯಕ್ತಿ ಮತ್ತು ವಿಶ್ವಗಳ ನಡುವಿನ ಜವಾಬ್ದಾರಿಯುತ ಸಂಬಂಧವನ್ನು ವ್ಯಕ್ತಿ ವಿಸ್ತರಿಸಬೇಕು. ಯಾವುದೇ ಚೌಕಟ್ಟಿನ, ಯಾವುದೇ ರೂಪದ ಕರ್ತವ್ಯ, ಜವಾಬ್ದಾರಿ, ಹೊಣೆಗಾರಿಕೆಗಳು ಸ್ವರೂಪಾತ್ಮಕವಾಗಿ ದೈವಿಕತೆಯ ಮೂಲವುಳ್ಳದ್ದು. ಅವು ಅತ್ಯಾವಶ್ಯಕವಾಗಿ ಪ್ರೀತಿ ಸ್ನೇಹಯುತ ಬಾಂಧವ್ಯವನ್ನು ಬೆಸೆಯುತ್ತವೆ. ಮೂಢನಂಬಿಕೆಗಳ ಜಾಗದಲ್ಲಿ ವೈಚಾರಿಕ ಬದ್ಧತೆಯನ್ನೇ ಪ್ರತಿಷ್ಠಾಪಿಸುತ್ತವೆ. ಧಾರ್ಮಿಕ ಸಜ್ಜನಿಕೆಯ ಪರಿಸರವನ್ನೇ ಅಂತರಂಗ ಬಹಿರಂಗಗಳಲ್ಲಿ ಕಟ್ಟಿಕೊಡುತ್ತವೆ. ಸೇವಾ ಮನೋಭಾವ, ಪಾರಸ್ಪರಿಕ ಸಹಕಾರ, ಸಹೃದಯ ಕಾಳಜಿಗಳೊಂದಿಗೆ ವೈಯಕ್ತಿಕ ಹಿತಾಸಕ್ತಿಯನ್ನು ಸಾಮುದಾಯಿಕ ಹಿತಾಸಕ್ತಿಯನ್ನಾಗಿಸುವ ಮೌಲ್ಯವುಳ್ಳದ್ದು. ಬದುಕು ಬಿಡಿ ಬಿಡಿಯಾಗಿರುವ ಸಂಗತಿಗಳನ್ನಾಗಲೀ ಚರಾಚರಗಳನ್ನಾಗಲೀ ಒಳಗೊಂಡದ್ದು ಅಲ್ಲ, ವ್ಯಕ್ತಿ ಏಕಕಾಲದಲ್ಲಿ ಸಾಧ್ಯವೂ ಹೌದು, ಸಾಧನವೂ ಹೌದು ಎಂಬ ಅರಿವನ್ನು ಆಧರಿಸಿದೆ ಎನ್ನುತ್ತಾರೆ ವಿವೇಕಾನಂದರು. ಇದು ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸಾರ್ವಕಾಲಿಕ ಸತ್ಯವೂ ಹೌದು.

ಸಮಾಜಸೇವೆ: ವ್ಯಕ್ತಿ ವ್ಯಕ್ತಿಗಳ ನಡುವಿನ ಸಂಬಂಧ, ವ್ಯಕ್ತಿ ಮತ್ತು ಸಮಾಜ, ವ್ಯಕ್ತಿ ಮತ್ತು ದೇಶ (ರಾಜಕೀಯ ವ್ಯವಸ್ಥೆ), ವ್ಯಕ್ತಿ ಮತ್ತು ವಿಶ್ವ, ವ್ಯಕ್ತಿ ಮತ್ತು ಪರಿಸರಗಳ ನಡುವಿನ ಸಂಬಂಧ ಮೂಲಭೂತವಾಗಿ ಸೇವೆಯೇ ಆಗಿದೆ. ವ್ಯಕ್ತಿತ್ವದ ಹಿರಿಮೆಯನ್ನು ಉನ್ನತೀಕರಿಸುವ ಸಾಮಾಜಿಕ ಪ್ರಜ್ಞೆ ಮತ್ತು ಆಧ್ಯಾತ್ಮಿಕ ತಿಳುವಳಿಕೆಗಳ ನೆಲೆಯಲ್ಲಿ ಸೇವೆ ಮಾಡುವವರ ಮತ್ತು ಸೇವೆಯನ್ನು ಪಡೆಯುವವರ – ಇಬ್ಬರ ಘನತೆಗೆ ಮರ್ಯಾದೆಗೆ ಕುಂದನ್ನುಂಟು ಮಾಡದಂತೆ ಮಾಡುವ ಸೇವೆಯೇ ನಿಜವಾದ ಸಮಾಜಸೇವೆ ಎನ್ನುತ್ತಾರೆ ವಿವೇಕಾನಂದರು. ವಸ್ತುಗಳ ಮೂಲಕ ಒದಗಿಸುವ ಸೇವೆ ಭೌತಿಕ ಸುಖ ಸೌಕರ್ಯಗಳನ್ನು ಒದಗಿಸುತ್ತದೆ ಎಂಬುದು ನಿಜವಾದರೂ ಅಂತಹ ಸೇವೆ ಮಾನಸಿಕ ನೆಮ್ಮದಿಯನ್ನು ಕೆಡಿಸುವ ಪ್ರತ್ಯೇಕೀಕರಣ, ದೂರಸರಿಸುವಿಕೆ, ಭೇದಭಾವ, ಪಕ್ಷಪಾತ, ಜುಗುಪ್ಸೆಗಳಂತಹ ರೋಗಗಳಿಗೆ ಪರಿಹಾರವಾಗಲಾರದು; ಮಾನಸಿಕ ದುಗುಡ ದುಮ್ಮಾನಗಳಂತಹ ಒತ್ತಡ, ನೋವುಗಳನ್ನು ನಿವಾರಿಸಲಾರದು. ಮನುಷ್ಯರ ದುಃಖವನ್ನು ಅದು ಹಾಗೆಯೇ ಉಳಿಸಿಬಿಡುತ್ತದೆ. ಬದಲಿಗೆ ಎಲ್ಲರಲ್ಲೂ ಎಲ್ಲದರಲ್ಲೂ ದೈವಿಕತೆಯನ್ನು ಗುರುತಿಸಿ ಪ್ರೀತಿ, ಸ್ನೇಹ, ಸಹಕಾರ, ಸೌಹಾರ್ದತೆಗಳ ಸಹಾಯ ಹಸ್ತ ಚಾಚಿದರೆ ನಲಿವಿನ ಪರಿಸರ ಸಹಜವಾಗಿ ನಿರ್ಮಾಣವಾಗುತ್ತದೆ, ದುಃಖದ ಭಾವ ಇಲ್ಲವಾಗುತ್ತದೆ. ಅಹಂಕಾರ ದುರಾಸೆಗಳ ಜಾಗದಲ್ಲಿ ಇರುವುದೆಲ್ಲವನ್ನೂ ಆತ್ಯಂತಿಕ ಇರುವಿಕೆಯ ಪ್ರಸಾದ ಎಂದು ಅನುಭವಿಸುವ **(ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯ ಸ್ವಿದ್ಧನಂ)** ವಿನಯ ಕೃತಜ್ಞತೆ ನಮ್ಮದಾಗುತ್ತದೆ. ಸೇವಾ ಮನೋಭಾವನೆ ಉಂಟುಮಾಡಬೇಕಾದ ಆಧ್ಯಾತ್ಮಿಕತೆ ಇದೇ; ಇದನ್ನು ಸಾಧ್ಯಗೊಳಿಸುವ ಶಿಕ್ಷಣ ಎಲ್ಲರಿಗೂ ದೊರೆಯಬೇಕು ಎನ್ನುತ್ತಾರೆ ವಿವೇಕಾನಂದರು.

ಶಿಕ್ಷಣ: ವಿವೇಕಾನಂದರ ಪ್ರಕಾರ ವ್ಯಕ್ತಿಯನ್ನು ಮನುಷ್ಯನನ್ನಾಗಿಸುವ ಶಿಕ್ಷಣವು ವೃದ್ಧಿಶೀಲ ಮನೋದಾರ್ಢ್ಯ, ತೀಕ್ಷ್ಣವಾಗಿ ಚುರುಕುಗೊಳ್ಳುತ್ತ ಹೋಗುವ ಜಾಣ್ಮೆ ಬುದ್ಧಿವಂತಿಕೆ, ಎಲ್ಲವನ್ನೂ ಎಲ್ಲರನ್ನೂ ಒಳಗೊಳ್ಳುವ ಸ್ವತಂತ್ರ ಆರೋಗ್ಯವಂತ ಮನಸ್ಥಿತಿಗಳನ್ನು ಒಳಗೊಳ್ಳುವ ಉತ್ತಮ ಚಾರಿತ್ರ್ಯ–ನಿರ್ಮಾಣ–ಪ್ರಕ್ರಿಯೆ ಆಗಿದೆ. ಅಂಥ ಶಿಕ್ಷಣ ಎಲ್ಲದರಲ್ಲೂ ಎಲ್ಲರಲ್ಲೂ ವ್ಯಾಪ್ತವಾಗಿರುವ ಸತ್ ಚಿತ್ ಆನಂದ ಸ್ವರೂಪಿ ಆತ್ಯಂತಿಕ ಪರಿಪೂರ್ಣತೆಯನ್ನು ಕಂಡುಕೊಳ್ಳಲು ಅತಿ ಹೆಚ್ಚು ಸಹಕಾರಿ. ಅಹಂಕಾರ ಮತ್ತು ಅದರಿಂದ ಒದಗಿ ಬರುವ ಮಿಥ್ಯಾಜ್ಞಾನ ಹಾಗೂ ಅಜ್ಞಾನಗಳನ್ನು ಅದು ಮಾತ್ರ ತೊಡೆದುಹಾಕುತ್ತದೆ; ದೈವಿಕತೆಯ ಹೊರತಾಗಿ ಉದಾತ್ತವಲ್ಲದ ಯಾವುದರೊಂದಿಗೂ ನಮ್ಮನ್ನು ಗಂಟುಹಾಕಿಕೊಳ್ಳದಂತೆ ನಮ್ಮನ್ನು ತಡೆಯುತ್ತದೆ. ಪೌರುಷವನ್ನು ಸಜ್ಜನಿಕೆಯೊಂದಿಗೆ, ವಿಜ್ಞಾನ ತಂತ್ರಜ್ಞಾನಗಳನ್ನು ಧಾರ್ಮಿಕತೆಯೊಂದಿಗೆ ಸಮನ್ವಯಿಸುತ್ತದೆ. ಅರ್ಥರಹಿತ ಆಚಾರ ಸಂಹಿತೆ, ಮಾಯಾಮಂತ್ರಗಳಲ್ಲಿಯ ನಂಬಿಕೆ, ಭ್ರಮಾತ್ಮಕತೆಗಳ ಹಿಡಿತಗಳಿಂದ ಪಾರುಮಾಡುತ್ತದೆ. ದೈಹಿಕ, ಮಾನಸಿಕ, ಆಧ್ಯಾತ್ಮಿಕ ಶಕ್ತಿ, ಸಾಮರ್ಥ್ಯಗಳನ್ನು ವೃದ್ಧಿಸುತ್ತದೆ. ಹಾಗೂ ಅರ್ಥಪೂರ್ಣ ಬದುಕುವಿಕೆಗಾಗಿ ಮತ್ತು ಎಲ್ಲರ ಹಿತಕ್ಕಾಗಿ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಬಳಸುವಂತೆ ಪ್ರೇರೇಪಿಸುತ್ತದೆ.

ವಿವೇಕಾನಂದರು ಪರಿಕಲ್ಪಿಸುವ ಶಿಕ್ಷಣಕ್ರಮದ ಉದ್ದೇಶ ಸಹಜವಾಗಿ ವಿಷಯ ಸಂಗ್ರಹಣೆ ಅಲ್ಲ; ಬದಲಿಗೆ ಪರಮ ಸತ್ಯ ಅದ್ವೈತ ಎಂಬುದನ್ನು ಮನಗಾಣುವುದು, ನಿಷ್ಕಲ್ಮಷ ಪ್ರೀತಿ ಸ್ನೇಹಗಳ ಮೇಲೆ ವಿಶ್ವಾಸವಿಟ್ಟು ಸೇವಾಮನೋಭಾವದ ಬದುಕನ್ನು ನಡೆಸುವ ತರಬೇತಿ ಪಡೆಯುವುದು. ಇದಕ್ಕೆ ಪೂರಕವಾದದ್ದು ಬ್ರಹ್ಮಚರ್ಯೆ. ನೈಜ ಶಿಕ್ಷಣದ ಆಧಾರಸ್ತಂಭ ಬ್ರಹ್ಮಚರ್ಯೆಯೇ. ಬ್ರಹ್ಮಚರ್ಯೆಯು ಮನುಷ್ಯನ ಪ್ರವೃತ್ತಿಗಳನ್ನು ಸಮರಸಗೊಳಿಸುವ ಆತ್ಮಸಂಯಮವನ್ನು ಸಾಧಿಸುವ ಅಭ್ಯಾಸಕ್ಕೆ ಸಂಬಂಧಿಸಿದುದು. ನಿಜ-ಶಿಕ್ಷಣವನ್ನು ಪಡೆಯಲು ಸಮರ್ಥ ಸಾಧನ ಎಂದು ಧ್ಯಾನಕ್ಕೆ ವಿವೇಕಾನಂದರು ಶಿಕ್ಷಣಕ್ರಮದಲ್ಲಿ ವಿಶೇಷ ಸ್ಥಾನವನ್ನು ಕೊಡುತ್ತಾರೆ. ಚರಾಚರ ಜೀವಿಗಳೆಲ್ಲವೂ ಒಂದು ಸೂತ್ರಕ್ಕೆ ಒಳಪಟ್ಟಿದೆ ಎಂಬ ಸತ್ಯದರ್ಶನಕ್ಕಾಗಿ ತೀವ್ರವಾಗಿ ಹಂಬಲಿಸುವ ಮನಸ್ಥಿತಿಯೇ ಧ್ಯಾನ.


ದೃಢಕಾಯದಲ್ಲಿ ದೃಢಮನಸ್ಸು ಇರುತ್ತದೆ ಎನ್ನುವುದನ್ನು ವಿವೇಕಾನಂದರು ಒಪ್ಪಿಕೊಳ್ಳುತ್ತಾರೆ. ಸ್ವಾರ್ಥ, ಸಂಕುಚಿತ ಮನೋಭಾವ, ದ್ವೇಷ ಮತ್ತಿತರ ಸಣ್ಣತನಗಳಿಗೆ, ಬಗೆ ಬಗೆಯ ದುಃಖಗಳಿಗೆ ಮೂಲ ಆಗರ ದುರ್ಬಲ ಶರೀರ; ಆದ್ದರಿಂದ ನೈಜ ಶಿಕ್ಷಣಕ್ರಮದಲ್ಲಿ ದೈಹಿಕ ಸಶಕ್ತತೆಗೂ ಪ್ರಾಮುಖ್ಯತೆ ಇರಲೇಬೇಕು ಎನ್ನುತ್ತಾರೆ ವಿವೇಕಾನಂದರು. ವ್ಯಕ್ತಿಯ ದೈಹಿಕ ಪಟುತ್ವ ಮತ್ತು ದೇಶದ ಬಾಹುಬಲಗಳು ವ್ಯಕ್ತಿಯ ಮತ್ತು ದೇಶಗಳೆರಡರ ಸಶಕ್ತ ನಿರ್ಭಯ ವ್ಯಕ್ತಿತ್ವದ ಮುಖ್ಯಲಕ್ಷಣ. ಶರತ್ತುರಹಿತ ನಿರ್ವ್ಯಾಜ ಪ್ರೀತಿ, ಸ್ನೇಹ, ಸಾಮರಸ್ಯತೆ ಆತ್ಮೀಯ ಅನುಕಂಪೆ, ಸಹಾನುಭೂತಿಗಳನ್ನು ತೋರುವ ವ್ಯಕ್ತಿತ್ವವೇ ನಿರ್ಭಯತೆಯ ಪ್ರತೀಕ. ಇಂತಹ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾ ಅಂತಿಮವಾಗಿ ನಿರ್ಭಯ ಮನುಷ್ಯನಾಗಿ ಶಿಕ್ಷಣ ಸಂಸ್ಥೆಯಿಂದ ಶಿಕ್ಷಣದ ಅಂತ್ಯದಲ್ಲಿ ಹೊರಬರುವುದು ನೈಜ ಶಿಕ್ಷಣದ ಅಂತಿಮ ಗುರಿ, ಧ್ಯೇಯ ಎನ್ನುತ್ತಾರೆ ವಿವೇಕಾನಂದರು.

ವಿವೇಕಾನಂದರ ಚಿಂತನೆಯ ಮೌಲ್ಯ: ವಿವೇಕಾನಂದರ ಚಿಂತನೆ ರಾಷ್ಟ್ರೀಯವೂ ಹೌದು ರಾಷ್ಟ್ರಾತೀತವೂ ಹೌದು. ಭಾರತದಲ್ಲಿ ಅದ್ವೈತ ಸಿದ್ಧಾಂತದ ನೆಲೆಯಲ್ಲಿ ಏಕರಾಷ್ಟ್ರೀಯರು ನಾವು ಎಂಬುದನ್ನು ಎತ್ತಿಹಿಡಿದು ಬ್ರಿಟಿಷರ ಆಡಳಿತದಲ್ಲಿ ನಲುಗಿ ಹೋಗಿದ್ದ ಭಾರತೀಯರಲ್ಲಿ ಭಾರತೀಯತೆಯ ಸಮರ್ಥನೆಗಾಗಿ ಹೋರಾಡುವ ಕೆಚ್ಚನ್ನು ಮೂಡಿಸಿದ ರಾಷ್ಟ್ರವಾದಿಗಳು, ರಾಷ್ಟ್ರಾಭಿಮಾನಿಗಳು ವಿವೇಕಾನಂದರು. ಭೂಲೋಕದ ಬದುಕನ್ನು ಸ್ವರ್ಗೀಯವಾಗಿಸಲು ವಿಶ್ವದಲ್ಲಿರುವವರೆಲ್ಲರೂ ಆಧ್ಯಾತ್ಮಿಕವಾಗಿ ಒಂದೇ, ಎಲ್ಲರೂ ಸೋದರ ಸೋದರಿಯರು ಎಂದು ತಿಳಿದು ಯಾವ ಭೇದಭಾವವನ್ನೂ ಭಾವಿಸದೆ ಎಲ್ಲರೂ ಎಲ್ಲರ ಒಳಿತಿಗಾಗಿ ಶ್ರಮಿಸುವ ಅಗತ್ಯವಿದೆ ಎನ್ನುವ ಸಮಗ್ರತಾ ಮಾನವತಾವಾದವನ್ನು ಸಮರ್ಥಿಸಿದ ರಾಷ್ಟ್ರಾತೀತವಾದಿ, ಮಾನವತಾವಾದಿ ಸ್ವಾಮಿ ವಿವೇಕಾನಂದರು.

ಅವರು ಮಾನಸಿಕವಾಗಿ ನಾವೆಲ್ಲಾ ಒಂದು ಎಂದು ತಿಳಿಯಲು ಭಾರತೀಯ ತಾತ್ತ್ವಿಕ ನಿಲುವಾದ '**ಅಹಂ ಬ್ರಹ್ಮಾಸ್ಮಿ**', '**ತತ್ ತ್ವಂ ಅಸಿ**' ಎನ್ನುವುದೇ ಆಧಾರ ಸೂತ್ರ ಎಂದರು. ಅದನ್ನು ಮನಗಾಣಲು ಅಗತ್ಯವಾದ ತಿಳುವಳಿಕೆಯನ್ನು ಸರಳವಾದ ಉಪನ್ಯಾಸಗಳಿಂದ ವಿಶ್ವದಾದ್ಯಂತ ತಲುಪಿಸಿದರು. ಆ ತಿಳುವಳಿಕೆಯನ್ನು ಸ್ವಾನುಭವವಾಗಿಸಿಕೊಳ್ಳಲು ಅತ್ಯಗತ್ಯವಾದ ರಾಜಯೋಗವನ್ನು ಪರಿಚಯಿಸಿದರು. ದುರ್ಬಲರ, ತುಳಿತಕ್ಕೆ ಒಳಗಾದವರ, ಅಸಹಾಯಕರ, ದುಃಖ ನೋವುಗಳಿಂದ ಪೀಡಿತರಾದವರ ದುಸ್ಥಿತಿಯ ಬಗೆಗಿನ ಅರಿವನ್ನು ಮೂಡಿಸಿ ಅವರ ಮರ್ಯಾದೆಗೆ ಕುಂದು ಬಾರದಂತೆ ಸೇವೆಯನ್ನು ಒದಗಿಸಬೇಕಾದ ಅಗತ್ಯ ಇರುವುದನ್ನು ಮನಗಾಣಿಸಿಕೊಟ್ಟರು. ಸೇವಾಕಾರ್ಯದಲ್ಲಿ ಅಹಂಕಾರಕ್ಕೆ ಸ್ಥಳಾವಕಾಶ ಇಲ್ಲ ಎಂಬುದನ್ನು ಎಲ್ಲರೂ ದೈವಿಕತೆಯ ಬಗೆ ಬಗೆ ರೂಪಗಳು, '**ಅಮೃತಸ್ಯ ಪುತ್ರಾಃ**' ಎಂಬ ನೆಲೆಯಲ್ಲಿ ಅರ್ಥಮಾಡಿಸಿದರು. ಧಾರ್ಮಿಕ ಆದರ್ಶವಾದ ಸಜ್ಜನಿಕೆ, ತ್ಯಾಗ, ವೈರಾಗ್ಯ, ಔದಾರ್ಯ, ದಾನ ಮೊದಲಾದವುಗಳಿಗೆ ಅರ್ಥಬರುವುದು ವಿಜ್ಞಾನ ತಂತ್ರಜ್ಞಾನಗಳ ಸೂಕ್ತ ತಿಳುವಳಿಕೆಯನ್ನು ಬಳಸಿಕೊಂಡು ಭೌತಿಕ ಸುಖ ಸೌಕರ್ಯಗಳ ಸಮೃದ್ಧಿಯನ್ನು ಸಾಧಿಸಲು ಪ್ರಯತ್ನಿಸಿದಾಗ ಮಾತ್ರ ಎಂದು ವೈಜ್ಞಾನಿಕ ಅರಿವಿನ ಮಹತ್ವವನ್ನು ಎತ್ತಿಹಿಡಿದರು. ಮಾನಸಿಕ ದೃಢತೆ ಮತ್ತು ದೈಹಿಕ ದೃಢತೆಗಳು ಪರಸ್ಪರ ಪೂರಕವಾದದ್ದು, ಒಂದನ್ನು ಬಿಟ್ಟು ಇನ್ನೊಂದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ದೇಹಬಲ, ಭೌತಿಕ ಬಲಗಳು ಮನೋಬಲದಷ್ಟೇ ಮುಖ್ಯವಾದದ್ದು ಎಂದರು; ವೈಯಕ್ತಿಕವಾಗಿ, ರಾಷ್ಟ್ರೀಯವಾಗಿ, ಸಾಮುದಾಯಿಕವಾಗಿ ಸುರಕ್ಷಿತ ಬದುಕು ಎಲ್ಲರದು ಆಗಬೇಕಾಗಿರುವುದನ್ನು ಸಮರ್ಥಿಸಿದರು. ಸುಂದರವಾದ ಸುಸಜ್ಜಿತವಾದ ಶಾಂತಿ ಸೌಹಾರ್ದಯುತವಾದ ಸಶಕ್ತ ಬದುಕಿನ ಮೂಲಭೂತ ಸೂತ್ರ ನಿಷ್ಕಲ್ಮಶವಾದ ಮಾನವೀಯವಾದ ನಿಸ್ವಾರ್ಥ ಸೇವಾಮನೋಭಾವನೆ ಎಂಬುದು ಸ್ವಾಮಿ ವಿವೇಕಾನಂದರ ಒಟ್ಟಾರೆ ಜೀವನ ಸಂದೇಶ.

ನಾವು ಈಗ ವಿವೇಕಾನಂದರು ಈ ಹಿಂದೆ ಶಿಕಾಗೋ ನಗರದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಪ್ರಾಚ್ಯ ಮತ್ತು ಪಾಶ್ಚಾತ್ಯರ ನಡುವೆ ಮಧುರ ಬಾಂಧವ್ಯದ ಬೆಸುಗೆಯನ್ನು ಬೆಸೆದ ಉಪನ್ಯಾಸದ ೧೨೫ನೇ ವರ್ಷಾಚರಣೆಯ ಸಂಭ್ರಮದಲ್ಲಿದ್ದೇವೆ. ಅದೇ ವೇಳೆಗೆ ಭಯೋತ್ಪಾದಕತೆಯ ಮತ್ತು ಸಣ್ಣತನದ ಅಸಂಖ್ಯಾತ ರೂಪಗಳು ವಿಜೃಂಭಿಸುತ್ತಿರುವುದನ್ನು ಕಂಡು ಕಂಗಾಲಾಗಿದ್ದೇವೆ. ಅತ್ಯಾವಶ್ಯಕವಾಗಿ ಆಗಬೇಕಾದದ್ದು, ನಾವೆಲ್ಲರೂ ದೈವಾಂಶಸಂಭೂತರು ಎಂಬುದನ್ನು ಎತ್ತಿಹಿಡಿದು ಭೌತಿಕ ಮತ್ತು ಮಾನಸಿಕವಾದ ಸಮೃದ್ಧ, ಗೌರವಯುತ, ಸ್ವತಂತ್ರ ಸುಖೀ ಬದುಕಿಗಾಗಿ ಪರಸ್ಪರ ಸಹಕಾರ ಭಾವನೆಯಿಂದ ಕೈ ಕೈ ಕೂಡಿಸಿ ದುಡಿಯೋಣ ಎನ್ನುವ ವಿವೇಕಾನಂದರ ವಾಣಿಯಿಂದ ಇನ್ನಾದರೂ ಜಾಗೃತರಾಗುವುದು.

*(೨೦೧೮ರ ಸೆಪ್ಟೆಂಬರ್ ೧೭, ೧೮ರಂದು ಮೈಸೂರು ವಿಶ್ವವಿದ್ಯಾನಿಲಯದ ತತ್ತ್ವಶಾಸ್ತ್ರ ವಿಭಾಗ ಮತ್ತು ವಿವೇಕಾನಂದ ಅಧ್ಯಯನ ಪೀಠದ ಸಂಯುಕ್ತ ಆಶ್ರಯದಲ್ಲಿ ನಡೆದ '**ವಿವೇಕಾನಂದರ ಮಾನವತಾವಾದ - ಒಂದು ಲೋಕಸಂಗ್ರಹ ದೃಷ್ಟಿ**' ಎಂಬ ರಾಷ್ಟ್ರೀಯ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧವಿದು.)*



ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

ಭಾಗ ೨೪

ಮಠಾಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರೊಂದಿಗೆ ಎಲ್ಲರೂ ಮಿಸೆಸ್ ಸೇವಿಯರ್ ಅವರನ್ನು ಆದರದಿಂದ ಸ್ವಾಗತಿಸಿದರು. ವಿರಜಾನಂದರಿಗೂ ಅತಿಥಿಗೃಹದಲ್ಲೇ ಇಳಿದುಕೊಳ್ಳುವ ಏರ್ಪಾಡಾಗಿತ್ತು, ಮದರ್ ಸೇವಿಯರ್ ಅವರನ್ನು ನೋಡಿಕೊಳ್ಳಲೆಂದು. ಇವರನ್ನು ಭೇಟಿಯಾಗಲು ಸ್ವಾಮಿ ಶಾರದಾನಂದರು ಕೊಲ್ಕತ್ತದ ಉದ್ಬೋಧನದಿಂದ ಬಂದು ಹೋದರು. ವಿರಜಾನಂದರು ಪೂಜ್ಯ ಬ್ರಹ್ಮಾನಂದರಿಗೆಂದು ಶ್ಯಾಮಲಾತಾಲ್‌ನಿಂದ ಒಂದು ಕೃಷ್ಣಾಜಿನವನ್ನು ತಂದಿದ್ದರು. ಅದನ್ನು ಬ್ರಹ್ಮಾನಂದರು ಸಂತೋಷದಿಂದ ಸ್ವೀಕರಿಸಿದರು. ಒಂದು ದಿನ ಮಾಯಾವತಿಯ ಅದ್ವೈತ ಆಶ್ರಮದ ವಿಶ್ವಸ್ತರ ಸಭೆ ಜರುಗಿತು. ಅದರಲ್ಲಿ ಪಾಲ್ಗೊಂಡವರು ಶರತ್ ಮಹಾರಾಜರು, ಸ್ವಾಮಿ ಶುದ್ಧಾನಂದರು, ಮಿಸೆಸ್ ಸೇವಿಯರ್ ಹಾಗೂ ಸ್ವಾಮಿ ವಿರಜಾನಂದರು. ಶರತ್ ಮಹಾರಾಜರು ವಿರಜಾನಂದರಿಗೆ ಮಾಯಾವತಿಯ ಜವಾಬ್ದಾರಿಯನ್ನು ಮತ್ತೆ ವಹಿಸಿಕೊಳ್ಳುವಂತೆ ಕೇಳಿಕೊಂಡರು. ಆದರೆ ಅವರು ಅದಕ್ಕೆ ಸಮ್ಮತಿಸಲಿಲ್ಲ.

ಮದರ್ ಸೇವಿಯರ್ ಅವರಿಗೆ ಮಠದ ಸಂಧ್ಯಾರತಿಯನ್ನು ವೀಕ್ಷಿಸಿ ತುಂಬ ಸಂತೋಷವಾಯಿತು. ಒಂದು ದಿನ ವಿರಜಾನಂದರು ಮದರ್ ಅವರನ್ನು ಕರೆದೊಯ್ದು ದಕ್ಷಿಣೇಶ್ವರದ ಭವತಾರಿಣಿಯ ಆರತಿಯನ್ನು ಹಾಗೂ ಶ್ರೀಮಾತೆಯವರು ಕೊಲ್ಕತ್ತೆಗೆ ಬಂದಾಗ ಇಳಿದುಕೊಳ್ಳುತ್ತಿದ್ದ 'ಉದ್ಬೋಧನ್' ಮನೆಯನ್ನು ತೋರಿಸಿಕೊಂಡು ಬಂದರು. ಆಗ ಶ್ರೀಮಾತೆಯವರು ಜಯರಾಂಬಾಟಿಯಲ್ಲಿದ್ದರು. ದೇಶ್‌ಬಂಧು ಚಿತ್ತರಂಜನ್ ದಾಸ್ ಒಂದು ದಿನ ತಮ್ಮ ಪತ್ನಿ ಹಾಗೂ ಮಗಳೊಂದಿಗೆ ಮಿಸೆಸ್ ಸೇವಿಯರ್ ಅವರನ್ನು ಭೇಟಿಯಾಗಲು ಬಂದಿದ್ದರು.[೧] ಮದರ್ ಬೋಲ್‌ಪುರದ ಶಾಂತಿನಿಕೇತನವನ್ನು ನೋಡುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರಿಂದ ವಿರಜಾನಂದರು ಒಂದು ದಿನ ಅವರನ್ನು ಕರೆದುಕೊಂಡು ಬೋಲ್‌ಪುರಕ್ಕೆ ಹೋದರು. ಅಲ್ಲಿಯ ದೀನಬಂಧು (ಆನ್‌ಡ್ರೂಸ್) ಮತ್ತು ಕವಿ ಗುರು ರವೀಂದ್ರನಾಥರು ಬಹಳ ಸೌಹಾರ್ದದಿಂದ ಇವರಿಬ್ಬರನ್ನೂ ಸ್ವಾಗತಿಸಿದರು; ಶಾಲೆ ಮುಂತಾದವುಗಳನ್ನು ಬಹಳ ಉತ್ಸುಕತೆಯಿಂದ ತೋರಿಸಿದರು. ವಿರಜಾನಂದರು ರವೀಂದ್ರರ ಸಂಜೆಯ ಉಪಾಸನೆಯಲ್ಲಿ ಉಪಸ್ಥಿತರಿದ್ದರು.

ಸ್ವಾಮೀಜಿಯವರ ತಮ್ಮನಾದ ಮಹೇಂದ್ರನಾಥ ದತ್ತರೊಂದಿಗೆ ವಿರಜಾನಂದರಿಗೆ ಬಹಳ ಆತ್ಮೀಯ ಸಂಬಂಧವಿತ್ತು. ಅವರನ್ನು ವಿರಜಾನಂದರು 'ಬಡೋ ಚಾಚಾಜೀ' (ಹಿರಿಯ ಚಿಕ್ಕಪ್ಪ) ಎಂದು ಕರೆಯುತ್ತಿದ್ದರು. ಅವರೂ ಸಹ ವಿರಜಾನಂದರನ್ನು ಬಹು ಆದರದಿಂದ 'ಕಾಲೀಕಿಷನ್' ಎಂದು ಕರೆಯುತ್ತಿದ್ದರು. ಏಪ್ರಿಲ್ ೧ರಂದು ಒಂದು ತಮಾಷೆಯ ಘಟನೆ ನಡೆಯಿತು. ಅಂದು ವಿರಜಾನಂದರ ಹೆಸರಿನಲ್ಲಿ ಒಂದು ಪಾರ್ಸೆಲ್ ಬಂದಿತ್ತು. ಏಪ್ರಿಲ್ ೧ All Fools Day ಆದ್ದರಿಂದ ವಿರಜಾನಂದರು ತಕ್ಷಣ ಎಚ್ಚೆತ್ತುಕೊಂಡರು; ಪಾರ್ಸೆಲ್ಲನ್ನು ರಾತ್ರಿ ೧೨ರ ನಂತರ ಮೆಲ್ಲಗೆ ಬಿಚ್ಚಿ ನೋಡಿದರು. ಅದರಲ್ಲಿದ್ದುದು ಕೆಲವು ಜಿರಳೆಗಳು! ಪಾರ್ಸೆಲ್ ಕಳುಹಿಸಿದವರು ಮಹೇಂದ್ರನಾಥರು. ಆದರೆ ಮಹೇಂದ್ರರಿಗೇ ಪರಾಜಯವೆನ್ನಿ. ಏಕೆಂದರೆ ರಾತ್ರಿ ೧೨ ಗಂಟೆಯ ನಂತರ ಏಪ್ರಿಲ್ ೧ ಎಲ್ಲಿಂದ?! ಈ ಘಟನೆಯಿಂದ ನಗೆಯ ಹೊನಲೇ ಹರಿಯಿತು.

ಮದರ್ ಸೇವಿಯರ್ ಇಂಗ್ಲೆಂಡಿಗೆ ಹೋಗುವ 'ಮಾಲ್ವ' ಎಂಬ ಹೆಸರಿನ ಜಹಜನ್ನು ಮುಂಬೈಯಲ್ಲಿ ಏರುವವರಿದ್ದರು. ಅಷ್ಟರಲ್ಲಿ ಮಿಸ್ ಮ್ಯಾಕ್ಲಿಯಾಡ್ ಲಕ್ನೌನಿಂದ ಮಠಕ್ಕೆ ಬಂದಿದ್ದರು. ಅವರು ಮದರ್ ಸೇವಿಯರನ್ನು ಬೀಳ್ಕೊಡಲು ಮುಂಬೈವರೆಗೆ ಹೋಗುವವರಿದ್ದರು. ಏಪ್ರಿಲ್ ೪ರಂದು ಇವರಿಬ್ಬರನ್ನೂ ಮುಂಬೈ ರೈಲಿನಲ್ಲಿ ಕೂರಿಸಿ ಬರಲು ವಿರಜಾನಂದರು ಹೌರಾ ಸ್ಟೇಷನ್ನಿಗೆ ಹೋಗಿದ್ದರು. ಅವರನ್ನು ಬೀಳ್ಕೊಂಡು ಭಾರವಾದ ಹೃದಯದಿಂದ ಮಠಕ್ಕೆ ಹಿಂತಿರುಗಿದರು. ಆ ವಿದೇಶೀ ವೃದ್ಧೆಯಿಂದ ಅದೆಂತಹ ನಿರ್ಮಲ ಪ್ರೀತಿಯನ್ನು ಪಡೆದಿದ್ದರೋ, ಅಂತೆಯೇ ಅವರ ಪಥದಲ್ಲಿ ಉಪಕಾರವನ್ನೂ ಪಡೆದಿದ್ದರು. ಅವರನ್ನು ನೋಡುವ ಅವಕಾಶ ಮತ್ತಿನ್ನು ಯಾವಾಗ ಸಿಗುವುದೋ ಯಾರಿಗೆ ಗೊತ್ತು?[೨]

---

೧ ಚಿತ್ತರಂಜನರು ಕೆಲವು ಕಾಲದ ಹಿಂದೆ ಮಾಯಾವತಿಗೆ ಹೋಗಿ ಸ್ವಲ್ಪ ದಿನ ಇದ್ದು ಬಂದಿದ್ದರು.


೨ ವಿರಜಾನಂದರು ಮತ್ತೆ ಅವರನ್ನು ಭೇಟಿಯಾಗಲೇ ಇಲ್ಲ. ಮದರ್ ಸೇವಿಯರ್ ಮತ್ತೆ ಭಾರತಕ್ಕೆ ಹಿಂತಿರುಗಲಿಲ್ಲ. ವಿರಜಾನಂದರು ಅವರೊಂದಿಗೆ ಪತ್ರ ಸಂಪರ್ಕ ಇಟ್ಟುಕೊಂಡಿದ್ದರು. ಬೇಸಿಗೆಯಲ್ಲಿ ಹಾಗೂ ಮಿಸೆಸ್ ಸೇವಿಯರ್ ಜನ್ಮದಿನಗಳಲ್ಲಿ ಅವರಿಗೆ ಏನಾದರೊಂದು ಉಡುಗೊರೆಯನ್ನು ತಪ್ಪದೆ ಕಳುಹಿಸುತ್ತಿದ್ದರು. ೧೯೩೦ರಲ್ಲಿ ತಮ್ಮ ೮೩ನೇ ವಯಸ್ಸಿನಲ್ಲಿ ಮಿಸೆಸ್‌ಸೇವಿಯರ್ ತಮ್ಮ ದೇಹವನ್ನು ತ್ಯಜಿಸಿದರು. ಮುಂದೊಮ್ಮೆ ಶ್ಯಾಮಲಾತಾಲ್‌ನಲ್ಲಿ ಅವರ ಜನ್ಮದಿನವನ್ನು ಆಚರಿಸುತ್ತಿದ್ದಾಗ ವಿರಜಾನಂದರು ತುಂಬ ಭಾವಪರವಶರಾಗಿ ಹೀಗೆ ಹೇಳಿದ್ದರು: ''ನನಗೆ ಮೂರು ತಾಯಂದಿರಿದ್ದರು. ಮೊದಲನೆಯದಾಗಿ ಹೆತ್ತ ತಾಯಿ, ನಂತರ ಶ್ರೀಮಾತೆಯವರು, ತದನಂತರ

ಈ ಬಾರಿ ಕೊಲ್ಕತ್ತೆಯಿಂದ ಶ್ಯಾಮಲಾತಾಲ್‌ಗೆ ಹಿಂತಿರುಗುವ ಮೊದಲು ವಿರಜಾನಂದರು ಕೆಲವು ವಿಶಿಷ್ಟರಾದ ಹಳೆಯ ಗೆಳೆಯರನ್ನು ಭೇಟಿಯಾದರು. ಅವರಲ್ಲಿಬ್ಬರು ಡಾ. ಕಾರ್ತಿಕ ಚಂದ್ರ ಬಸು. ಅವರ ಲ್ಯಾಬೋರೇಟರಿ ಹಾಗೂ ಔಷಧಿ ಕಾರ್ಖಾನೆಯನ್ನು ನೋಡಿ ವಿರಜಾನಂದರು ತುಂಬ ಸಂತೋಷಪಟ್ಟರು. ಮತ್ತೊಬ್ಬ ಸ್ನೇಹಿತರು ಅವರ ಗುರುಭಾಯಿಯೂ ಆದ ಯದುಪತಿ ಚಟ್ಟೋಪಾಧ್ಯಾಯರು. ತಮ್ಮ ವ್ಯಾಪಾರ-ವಹಿವಾಟಿನಿಂದಾಗಿ ಅವರು ಬಹಳಷ್ಟು ಹಣವನ್ನು ಸಂಪಾದಿಸಿದ್ದರು. ಶ್ಯಾಮಲಾತಾಲಿನಲ್ಲಿ ಬಡ ಪಹಾಡಿಗಳಿಗೋಸ್ಕರ ಒಂದು ಚಿಕ್ಕ ಡಿಸ್ಪೆನ್ಸರಿ ತೆರೆಯುವವರಿದ್ದಾರೆಂಬ ಸುದ್ದಿಯನ್ನು ಕೇಳಿ, ಅದಕ್ಕಾಗಿ ತಾವು ಧನಸಹಾಯ ಮಾಡುವುದಾಗಿ ಅವರು ಮಾತುಕೊಟ್ಟರು.

ಇತ್ತ ಶ್ಯಾಮಲಾತಾಲ್‌ನಲ್ಲಿ, ವಿರಜಾನಂದರು ಹಿಂತಿರುಗಿದ ಒಂದು ವಾರದ ನಂತರ ಅಲ್ಲೇ ಇದ್ದ ರಾಘವಾನಂದರು (ಸೀತಾಪತಿ ಮಹಾರಾಜ್) ಕೇದಾರ-ಬದರಿಗೆ ಹೊರಟರು. 'ಮಾಲ್ವಾ' ಜಹಜು ನಿರ್ವಿಘ್ನವಾಗಿ ಇಂಗ್ಲೆಂಡ್ ತಲುಪಿದ ಸುದ್ದಿಯನ್ನು ಒಂದು ದಿನ ವೃತ್ತಪತ್ರಿಕೆಯಲ್ಲಿ ಓದಿದ ವಿರಜಾನಂದರಿಗೆ ನೆಮ್ಮದಿಯಾಯಿತು. ಒಂದು ತಿಂಗಳ ನಂತರ ಮಿಸೆಸ್ ಸೇವಿಯರ್‌ನಿಂದ ಪತ್ರವೂ ಬಂದಿತು. ಈಗ ಸ್ವಾಮೀಜಿಯವರ ಜೀವನ ಚರಿತ್ರೆಯ ನಾಲ್ಕನೇ ಭಾಗದ ಕೆಲಸವು ತೀವ್ರಗತಿಯಿಂದ ನಡೆಯತೊಡಗಿತು. ವಿರಜಾನಂದರ ದಿನಚರಿಯಿಂದ ತಿಳಿದುಬಂದಿರುವುದೇನೆಂದರೆ ಅವರು ದಿನವೂ ಬೆಳಗ್ಗೆ ಮೂರು ಗಂಟೆಗಳ ಕಾಲ ಹಾಗೂ ಸಂಜೆ ಎರಡು ಗಂಟೆಗಳ ಕಾಲ, ಒಟ್ಟು ಐದು ಗಂಟೆಗಳನ್ನು ಈ ಪುಸ್ತಕದ ಬರಹಕ್ಕಾಗಿ ವಿನಿಯೋಗಿಸುತ್ತಿದ್ದರು. ಎರಡು ಗಂಟೆಗಳಷ್ಟು ಕಾಲ ತೋಟದ ಕೆಲಸವನ್ನು ಮಾಡುತ್ತಿದ್ದರು.

ಶಿವಪುರದ ನರೇನ್ ಎಂಬ ಯುವಕನೊಬ್ಬ ೧೯೧೭ರ ಪೂರ್ವಾರ್ಧದಲ್ಲಿ ಶ್ಯಾಮಲಾತಾಲ್ ಆಶ್ರಮಕ್ಕೆ ಸೇರಿ, ಆಶ್ರಮದ ಕೆಲಸಕಾರ್ಯಗಳಲ್ಲಿ ವಿರಜಾನಂದರಿಗೆ ಬಹಳ ಸಹಾಯ ಮಾಡುತ್ತಿದ್ದ. ನಂತರದಲ್ಲಿ ಶ್ರೀಮಾತೆಯವರ ಕೃಪೆಗೆ ಪಾತ್ರರಾಗಿ ಮಂತ್ರದೀಕ್ಷೆಯನ್ನು ಪಡೆದ. ಸಂನ್ಯಾಸದ ನಂತರ ಇವರಿಗೆ 'ಮಹಾನಂದ' ಎಂದು ಹೆಸರಾಯಿತು. ೧೯೩೧ರಲ್ಲಿ ಶ್ಯಾಮಲಾತಾಲ್‌ನಲ್ಲಿಯೇ ಇವರ ದೇಹತ್ಯಾಗವಾಯಿತು. ಇವರು ಶ್ಯಾಮಲಾತಾಲ್‌ನಲ್ಲಿ ೧೪ ವರ್ಷಗಳ ದೀರ್ಘಕಾಲ ದಣಿವರಿಯದ ಸೇವೆಯನ್ನು ಸಲ್ಲಿಸಿದ್ದರು. ವಿರಜಾನಂದರು ಇವರ ಕಾರ್ಯದಕ್ಷತೆಯನ್ನು ಬಹಳವಾಗಿ ಪ್ರಶಂಸಿಸುತ್ತಿದ್ದರು.

ಮಾಯಾವತಿಗೆ ಹೋಗಿ ಬರುವಾಗಲೆಲ್ಲ ಸಾಧು-ಬ್ರಹ್ಮಚಾರಿಗಳು ಕೆಲದಿನಗಳ ಮಟ್ಟಿಗೆ ಶ್ಯಾಮಲಾತಾಲ್‌ನಲ್ಲಿ ತಂಗಿ ವಿಶ್ರಮಿಸುತ್ತಿದ್ದರು. ವಿರಜಾನಂದರ ಆತಿಥ್ಯವು ಎಲ್ಲರ ಮೆಚ್ಚುಗೆಯನ್ನು ಗಳಿಸಿತ್ತು. ಅವರು ತಾವೇ ಸ್ವತಃ ವಿವಿಧ ಭಕ್ಷ್ಯಗಳನ್ನು ಮಾಡಿ ಎಲ್ಲರಿಗೂ ಬಡಿಸುತ್ತಿದ್ದರು. ಶ್ಯಾಮಲಾತಾಲಿನ ಅಚ್ಚುಕಟ್ಟಾದ ನಿರ್ಜನ ಆಶ್ರಮವು ಎಲ್ಲರಿಗೂ ಒಂದು 'ಶಾಂತಿನಿಲಯ'ವಾಗಿತ್ತು. ಸ್ವಾಮಿ ವಿಶುದ್ಧಾನಂದರು (ಮುಂದೆ ಸಂಘದ ೮ನೇ ಮಠಾಧ್ಯಕ್ಷರು) ೧೯೧೭ರ ಮೇಯಲ್ಲಿ ಮಾಯಾವತಿಗೆ ಹೋಗುವಾಗ ಶ್ಯಾಮಲಾತಾಲ್ ಆಶ್ರಮವನ್ನು ಕಂಡು ಆನಂದಪರವಶರಾದರು. ಕೆಲವೊಮ್ಮೆ ಹೊರಗಿನ ಸಂನ್ಯಾಸಿಗಳೂ ಸಹ ಅಲ್ಲಿಗೆ ಬಂದುಬಿಡುತ್ತಿದ್ದರು. ವಿರಜಾನಂದರು ಅವರನ್ನೂ ಯಥೋಚಿತವಾಗಿ ಸತ್ಕರಿಸುತ್ತಿದ್ದರು. ಜುಲೈ ನಾಲ್ಕು ಸ್ವಾಮೀಜಿಯವರ ಮಹಾಸಮಾಧಿಯ ದಿನ; ಅಂದು ಅಲ್ಲಿ ಒಂದು ಚಿಕ್ಕ ಉತ್ಸವವನ್ನು ಏರ್ಪಡಿಸಿದ್ದರು. ಜುಲೈ ಎಂಟು ಸ್ವಾಮಿ ಸ್ವರೂಪಾನಂದರ ಜನ್ಮದಿನ. ಅಂದೂ ಸಹ ಸಣ್ಣ ಉತ್ಸವ ನಡೆಯಿತು. ಮುಂದೆಯೂ ಸಹ ವಿರಜಾನಂದರು ಈ ಎರಡು ದಿನಗಳಲ್ಲಿ ಉತ್ಸವವನ್ನು ತಪ್ಪದೆ ಆಚರಿಸುತ್ತಿದ್ದರು.


ಸ್ವಾಮಿ ಅಖಂಡಾನಂದರೊಂದಿಗೆ ವಿರಜಾನಂದರು

ಯೂರೋಪಿನಲ್ಲಿ ಮೊದಲನೆ ಮಹಾಯುದ್ಧ ನಡೆಯುತ್ತಿತ್ತು. ಮಿಸೆಸ್ ಸೇವಿಯರ್ ವಿದೇಶದ ನಾನಾ ಪತ್ರಿಕೆಗಳನ್ನು ಕಾಳೀಕೃಷ್ಣರಿಗೆ ಕಳುಹಿಸುತ್ತಿದ್ದರು. ಅದನ್ನೆಲ್ಲ ಅವರು ತುಂಬ ಉತ್ಸುಕತೆಯಿಂದ ಓದುತ್ತಿದ್ದರು. ಮದರ್ ಸೇವಿಯರ್ ಅವರ ಪತ್ರದಿಂದಲೂ ಯುದ್ಧದ ಬಗ್ಗೆ ಅನೇಕ ವಿಷಯಗಳನ್ನು ತಿಳಿಯುತ್ತಿದ್ದರು. ೧೯೧೭ರ ಕೊನೆಗೆ ಒಮ್ಮೆ ವಿರಜಾನಂದರು ಮಾಯಾವತಿಗೆ ಹೋಗಿ ಸುತ್ತಾಡಿ ಬಂದರು. ಮದರ್ ಸೇವಿಯರ್ ಅವರ ನೆನಪು ಬಹಳವಾಗಿ ಮನಸ್ಸಿಗೆ ಬರುತ್ತಿತ್ತು. ೩೦ ಮೈಲಿಯ ಈ ದೂರವನ್ನು ಅವರು ನಡೆದುಕೊಂಡೇ ಬಂದಿದ್ದರು.

೧೯೧೯ನೇ ವರ್ಷ ನಡೆಯುತ್ತಿತ್ತು. ಸ್ವಾಮೀಜಿಯವರ ಜೀವನ ಚರಿತ್ರೆಯ ನಾಲ್ಕನೇ ಭಾಗವು ಇನ್ನೂ ಮುಗಿದಿರಲಿಲ್ಲ. ಆ ವರ್ಷದೊಳಗೇ ಈ ಕೆಲಸವನ್ನು ಮುಗಿಸಬೇಕೆಂದು ವಿರಜಾನಂದರು ದೃಢಸಂಕಲ್ಪ ಮಾಡಿದರು. ಏನು ವಿಚಿತ್ರ! ಮಾಯಾವತಿಯಿಂದ ತಮ್ಮನ್ನು ತಾವು ಬಿಡಿಸಿಕೊಂಡು ಬಂದು ನಾಲ್ಕು ವರ್ಷಗಳು ಉರುಳಿದ್ದರೂ ಸಹ ಇನ್ನೂ ಪೂರ್ತಿಯಾಗಿ ರಜೆ ಸಿಕ್ಕಿರಲಿಲ್ಲ.

ಸ್ವಾಮಿ ಪ್ರಜ್ಞಾನಂದರು ಹೃದ್ರೋಗದಿಂದ ಪೀಡಿತರಾಗಿ ಕೊಲ್ಕತ್ತೆಗೆ ಹೋಗಿದ್ದರು. ಅಲ್ಲಿ 'ಉದ್ಬೋಧನ' ಕಟ್ಟಡದಲ್ಲಿ ಇರುತ್ತಿದ್ದರು. ಚಿಕಿತ್ಸೆ ನಡೆಯುತ್ತಿದ್ದರೂ ಸಹ ಕಾಯಿಲೆ ಉಲ್ಬಣಗೊಳ್ಳುತ್ತಲೇ ಇತ್ತು. ೧೯೧೮ರ ಏಪ್ರಿಲ್ ೧೯ರಂದು ಅವರು ತಮ್ಮ

ಮದರ್ ಸೇವಿಯರ್. ಮೂವರೂ ಹೊರಟುಹೋದರು. ಈಗ ನೋಡಿದರೆ ಲೆಕ್ಕವಿಲ್ಲದಷ್ಟು ತಾಯಂದಿರು.'' (ಅವರಿಂದ ದೀಕ್ಷೆ ಪಡೆದ ಪುತ್ರಿಸದೃಶರಾದ ಶಿಷ್ಯೆಯರನ್ನು ಕುರಿತು)

ಶರೀರವನ್ನು ತ್ಯಜಿಸಿದರು. ಇದನ್ನು ಕೇಳಿದ ವಿರಜಾನಂದರು ಮಹಾಘಾತ ಹೊಂದಿದರು. ಪ್ರಜ್ಞಾನಂದರಂತಹ ಬಹು ಗುಣ ಸಂಪನ್ನ, ಜ್ಞಾನಿ, ತ್ಯಾಗಿ ಹಾಗೂ ಪ್ರೇಮಮಯಿ ಸಂನ್ಯಾಸಿಯ ಮೃತ್ಯುವು ಸಂಘಕ್ಕೆ ತುಂಬಲಾಗದ ನಷ್ಟವೇ ಸರಿ. ಇದರಲ್ಲಿ ಸಂದೇಹವಿಲ್ಲ. ಪ್ರಜ್ಞಾನಂದರು ಬರೆದ 'ಭಾರತದ ಸಾಧನೆ' ಎಂಬ ಪುಸ್ತಕದ ಭೂಮಿಕೆಯಲ್ಲಿ ಸ್ವಾಮಿ ಶಾರದಾನಂದರು, ಹೀಗೆ ಬರೆದಿದ್ದಾರೆ:

''ತಮ್ಮ ಕಿಶೋರಾವಸ್ಥೆಯಲ್ಲಿ ಸಂಯಮಶೀಲ ಹಾಗೂ ಸತ್ಯ - ಸಾಧಕ ಎಂದೂ, ಹದಿಹರೆಯದಲ್ಲಿ ನಿಃಸ್ವಾರ್ಥ ಸೇವಾವ್ರತ ಧಾರಿ ಹಾಗೂ ದಣಿವರಿಯದ ದೇಶಸೇವಕ ಎಂದೂ, ತುಂಬು ಯೌವನದಲ್ಲಿ ಪರಮಾರ್ಥ ಪ್ರೇಮಿ, ಸರ್ವಸಂಗ ಪರಿತ್ಯಾಗಿ ಸಂನ್ಯಾಸಿ ಎಂದೂ ಅವರ ಪರಿಚಯ ನಮ್ಮೆಲ್ಲರ ಚಿತ್ತವನ್ನು ಆಕರ್ಷಿಸಿತ್ತು. ಅಂತಹ ಅವರ ಮಧುಮಯ ವ್ಯಕ್ತಿತ್ವವು ಎಂತಹ ಅತ್ಯುನ್ನತ ಮಟ್ಟವನ್ನು ಮುಟ್ಟುವುದೋ ಎಂಬುದನ್ನು ಈಕ್ಷಿಸಲು ಕಾತರರಾಗಿದ್ದ, ಅವರ ಮಾರ್ಗದರ್ಶನದಲ್ಲಿ ನಡೆದು ಪರಮ ಸತ್ಯವನ್ನು ಪಡೆಯಲು ಉತ್ಸುಕರಾಗಿದ್ದ ಸಾಧಕರಿಗೆಲ್ಲ ಸತ್ಯಪಥದ ದಾರಿಯನ್ನು ಇಂಗಿತ ಮಾತ್ರದಿಂದ ತೋರಿ, ಶ್ರೀರಾಮಕೃಷ್ಣರಲ್ಲಿ ಹಾಗೂ ತಮ್ಮ ತಮ್ಮ ಆತ್ಮದಲ್ಲಿ ದೃಢವಾದ ಶ್ರದ್ಧೆಯನ್ನಿಟ್ಟು ನಿಲ್ಲ ಬೇಕೆಂದು ಹೇಳಿ, ದೇವವ್ರತ ಪ್ರಜ್ಞಾನಂದರು ನಶ್ವರ ಸಂಸಾರವನ್ನು ತ್ಯಜಿಸಿದ್ದಾರೆ.''

ಕೆಲವು ದಿನಗಳ ನಂತರ ವಿರಜಾನಂದರಿಗೆ ಸ್ವಾಮಿ ಶಾರದಾ ನಂದರಿಂದ ಒಂದು ಪತ್ರ ಬಂತು. ಅದರಲ್ಲಿ 'ವಿರಜಾನಂದರೇ ಪುನಃ ಮಾಯಾವತಿ ಆಶ್ರಮದ ಜವಾಬ್ದಾರಿಯನ್ನು ವಹಿಸಿಕೊಳ್ಳ ಬೇಕೆಂಬುದು ಸ್ವಾಮಿ ಬ್ರಹ್ಮಾನಂದರ ಇಚ್ಛೆ' ಎಂದು ತಿಳಿಸಿದ್ದರು. ವಿರಜಾನಂದರು ಕೆಲವು ವೈಯಕ್ತಿಕ ಕಾರಣಗಳನ್ನು ನೀಡಿ, ಹಿರಿಯರ ಆದೇಶದಿಂದ ವಿನಾಯತಿಯನ್ನು ಯಾಚಿಸಿದರು. ಶಾರದಾ ನಂದ ಮಹಾರಾಜರೂ ಸಹ ಇವರನ್ನು ಹೆಚ್ಚು ಬಲವಂತಪಡಿಸ ಲಿಲ್ಲ. ಸ್ವಾಮಿ ಮಾಧವಾನಂದರು ಮಾಯಾವತಿ ಅದ್ವೈತ ಆಶ್ರ ಮದ ಹೊಸ ಅಧ್ಯಕ್ಷರಾಗಿಯೂ, ಸ್ವಾಮಿ ರಾಘವಾನಂದರು 'ಪ್ರಬುದ್ಧ ಭಾರತ' ಪತ್ರಿಕೆಯ ಸಂಪಾದಕರಾಗಿಯೂ ನೇಮಿಸ ಲ್ಪಟ್ಟರು.

ಸ್ವಾಮಿ ಪ್ರಜ್ಞಾನಂದರ ದೇಹತ್ಯಾಗವಾದ ಸರಿಯಾಗಿ ಮೂರು ತಿಂಗಳ ನಂತರ, ಜುಲೈ ೧೯ರಂದು (೧೯೧೮) ಅವರ ಪರಮ ಸ್ನೇಹಿತರೂ, ಸ್ವದೇಶಿ ಚಳುವಳಿಯ ಸಹಭಾಗಿಯೂ, ಪರಮ ಅನುಯಾಯಿಯೂ, ಸಹೋದರ ಸಮಾನರೂ ಆದ ಶಚೀನ್ (ಸ್ವಾಮಿ ಚಿನ್ಮಯಾನಂದ) ಕೊಲ್ಕತ್ತೆಯಲ್ಲಿ ತಮ್ಮ ದೇಹತ್ಯಾಗ ಮಾಡಿದರು, ಅದೇ ಉದ್ಬೋಧನದಲ್ಲಿ. ಇದಾದ ೧೧ ದಿನಗಳ ನಂತರ, ೧೯೧೮ರ ಜುಲೈ ೩೦ರಂದು ಬಾಬೂರಾಮ್ ಮಹಾ ರಾಜರು (ಸ್ವಾಮಿ ಪ್ರೇಮಾನಂದರು) ಬಲರಾಮ ಮಂದಿರದಲ್ಲಿ ಮಹಾಸಮಾಧಿ ಹೊಂದಿದರು. ಕ್ರಮವಾಗಿ ಬಂದ ಈ ದುಃಖ ವಾರ್ತೆಗಳನ್ನು ಕೇಳಿ ವಿರಜಾನಂದರು ವಿಷಣ್ಣರಾದರು. ನಾಲ್ಕು ತಿಂಗಳೊಳಗೆ ಇಬ್ಬರು ಮಹಾನ್ ಸಂನ್ಯಾಸಿಗಳು, ಮತ್ತು ಶ್ರೀರಾಮ ಕೃಷ್ಣರ ಅಂತರಂಗ ಪಾರ್ಷದರಲ್ಲೊಬ್ಬರು ಧರೆಯಿಂದ ಕಣ್ಮರೆ ಯಾಗಿದ್ದರು! ಬಾಬುರಾಮ್ ಮಹಾರಾಜರ ಗಾಢಸ್ನೇಹದ ನೆನಪು ವಿರಜಾನಂದರಿಗೆ ಮರುಕಳಿಸುತ್ತಲೇ ಇತ್ತು. ೨೩ ವರ್ಷ ಗಳ ಹಿಂದೆ ಬೃಂದಾವನದಲ್ಲಿ ಅವರ ಪುಣ್ಯ ಸಂಸರ್ಗದಲ್ಲಿ ಕಳೆದ ಆ ಸಾಧನೆಯ ದಿನಗಳು ಅದೆಂತಹ ಆನಂದದಾಯಕವಾದ ದಿನ ಗಳು! ಮಾಯಾವತಿಯ ಅಧ್ಯಕ್ಷ ಸ್ಥಾನದಿಂದ ನಿವೃತ್ತಿ ಪಡೆದ ನಂತರ ಬಾಬುರಾಮ್ ಮಹಾರಾಜರಿಂದ ಅವರ ಸ್ನೇಹ ಹಾಗೂ ಉಪದೇಶಗಳನ್ನು ಹೊತ್ತ ದೀರ್ಘ ಪತ್ರವೊಂದು ವಿರಜಾನಂದರಿಗೆ ಬಂದಿತ್ತು. ಅದರಲ್ಲಿ ಅವರು ಹೀಗೆ ಬರೆದಿದ್ದರು:

೨೩.೬.೧೯೧೪
ಬೇಲೂರು ಮಠ

ಪರಮ ಪ್ರೀತಿಪಾತ್ರ ಕಾಳೀಕೃಷ್ಣ,

ನಿನಗೆ ಪತ್ರವನ್ನು ಬರೆದು ಬಹಳ ಕಾಲವಾಯಿತು. ಅಂದು —ನಿಂದ ನಿನ್ನ ಕ್ಷೇಮ ಸಮಾಚಾರ ತಿಳಿದು ಸಂತೋಷವಾಯಿತು. ನಾವು ಹಿಂದೊಮ್ಮೆ ಐಶ್ವರ್ಯರಹಿತ ಶ್ರೀಕೃಷ್ಣನ ಮಧುರ ಲೀಲಾ ಭೂಮಿಯಾದ ವ್ರಜಧಾಮದಲ್ಲಿ ಅಪೂರ್ವ ಆನಂದದಿಂದ ದಿನ ಗಳನ್ನು ಕಳೆದದ್ದು ನೆನಪಿದೆಯೇನು? ಐಶ್ವರ್ಯರಾಹಿತ್ಯವೇ ಪೂರ್ಣಸುಖ, ಶಾಂತಿ ಹಾಗೂ ಆನಂದ. ನಮ್ಮ ಪ್ರಭು ಶ್ರೀರಾಮ ಕೃಷ್ಣರು ಮೊದಲಿಂದ ಕೊನೆಯವರೆಗೆ ಪೂರ್ತಿ ಅನೈಶ್ವರ್ಯ ಭಾವದಲ್ಲೇ ಲೀಲೆಯಾಡಿ ಹೋಗಿದ್ದಾರೆ. 'ಷಡೈಶ್ವರ್ಯವನ್ನು ತ್ಯಜಿಸಿ ಇದೆಂತಹ ಭಾವ ನಿನ್ನದು ಕೃಷ್ಣಯ್ಯ!' ಪೂರ್ಣ ಮತ್ತು ಇನ್ನಿತರ ತರುಣ ಭಕ್ತರನ್ನು ನೋಡಲೆಂದು ಬಾಗ್‌ಬಜಾರಿನ ಗಲ್ಲಿ ಗಲ್ಲಿಗಳಲ್ಲಿ ಅವರು ತಿರುಗಾಡುತ್ತಿದ್ದರು. ಆ ರೀತಿಯ ನಿರಾಡಂಬ ರತೆಯನ್ನು ಜಗತ್ತು ಇನ್ನು ಕಾಣುವುದೆ? ನಾವೆಲ್ಲರೂ ಅವರಲ್ಲಿಗೆ ಹೋದಾಗ ಗುರುದೇವರು ಹೀಗೆಂದಿದ್ದರು: ''ಅಯ್ಯೋ! ನನಗಿ ದೇನಾಯಿತು ಹೇಳು ನೋಡೋಣ! ನಿಮ್ಮನ್ನು ನೋಡದೆ ಇರ ಲಾಗುತ್ತಿಲ್ಲ. ನಿಮಗಾದರೋ ನನ್ನನ್ನು ಕುಳ್ಳಿರಿಸಲು ಒಂದು ಹರಿದ ಚಾಪೆಯಾದರೂ ಇಲ್ಲ. ನೀರಿನೊಂದಿಗೆ ಒಂದು ಪೈಸೆಯ ಬತ್ತಾಸ ನ್ನಾದರೂ ಕೊಡುವ ಶಕ್ತಿಯಿಲ್ಲ. ಆದರೂ ನಿಮ್ಮನ್ನು ಕಾಣದೆ ಇರಲಾಗುತ್ತಿಲ್ಲ. ಇದೇನು ವಿಚಿತ್ರ ಹೇಳು ನೋಡೋಣ! ಅಲ್ಲದೆ ನೀವು ನನ್ನನ್ನು ಗೌರವಿಸಿದರೆ ಹತ್ತು ಜನರು ಗೌರವಿಸುತ್ತಾರೆ ಎನ್ನುವಂತಹ ದೊಡ್ಡ ಮನುಷ್ಯರ ಮಕ್ಕಳೂ ನೀವಲ್ಲ. ಆದರೂ ನಿಮ್ಮನ್ನು ನೋಡದಿದ್ದರೆ ಮನಸ್ಸು ತಡೆಯುವುದಿಲ್ಲ. ಇದೆಂತಹ ಭಾವ ನನ್ನದು?'' ಶ್ರೀರಾಮಕೃಷ್ಣರ ಲೀಲೆಯು ಮೊದಲಿನಿಂದ ಕೊನೆಯವರೆಗೂ ಮಧುರವೇ ಮಧುರ! ಒಮ್ಮೆಯೂ ಪವಾಡ ವನ್ನು ತೋರಲಿಲ್ಲ , ಷಡ್ಭುಜವನ್ನೂ ತೋರಲಿಲ್ಲ! ಸದ್ಯ! ಮಹಾ ವಿದ್ವಾಂಸರಾಗಿ ಬರಲಿಲ್ಲ. ಹಾಗಿದ್ದರೆ ನಮಗೆಲ್ಲಿ ಸ್ಥಾನವಿರುತ್ತಿತ್ತು? ಕೇವಲ ಕೃಪೆ, ಕೃಪೆ. ಅಹೇತುಕ ಕೃಪೆ. ಪ್ರಪಂಚದಲ್ಲಿ ಇಂತಹುದು ಇನ್ನೊಂದು ನಡೆದಿದೆಯೇನು?

''ಸ್ವಾಮೀಜಿಯವರು ಪ್ರಚಾರ ಕಾರ್ಯಕ್ಕಾಗಿ ತಮ್ಮ ವಿಭೂತಿಯನ್ನು ಪ್ರಕಟಪಡಿಸಿದ್ದರೂ ಕೂಡ ನಮ್ಮೊಡನೆ ಮಧುರ ಸ್ನೇಹವನ್ನೇ ತೋರುತ್ತಿದ್ದರು. ಆಹಾ! ಅದೆಷ್ಟು ಚೆನ್ನ! ಈಗ ಅದೆಲ್ಲವೂ ನೆನಪುಗಳು ಮಾತ್ರ. ನೀವೆಲ್ಲ ಈ ಲೀಲೆಯಲ್ಲಿ ಸಹಾಯಕರು. ಕಾಳೀಕೃಷ್ಣ ನಡೆ, ನಡೆ, ಮುನ್ನಡೆ. ನಾವೆಲ್ಲ ಸೇರಬೇಕಾಗಿರುವುದು ಪ್ರಭುವಿನ ಸನಿಹಕ್ಕೆ. ಠಾಕೂರರು ಕಣ್ಮರೆಯಾದ ಮೇಲೆ ವರಾಹನಗರಕ್ಕೆ ಬಂದ ಮೊದಲ ತ್ಯಾಗೀ ಭಕ್ತ ನೀನೇ ಅಲ್ಲವೆ? ನೋಡ ನೋಡುತ್ತ ಅದೆಷ್ಟು ದಿನಗಳು ಕಳೆದುಹೋದವು! ...ನಮ್ಮ Mother ಅದೇ Mrs. Savier ಅವರು ಅಪೂರ್ವ ತ್ಯಾಗದ ನಿದರ್ಶನ. ಭಕ್ತರಾದ ಅವರ ಪತಿಯೂ ಸಹ ಅವರಂತೆಯೇ ಮತ್ತೆ. ನಮ್ಮ ವ್ಯಾಸದೇವನ ಗಣೇಶ ಗುಡ್‌ವಿನ್ ಹಾಗೂ ನಿವೇದಿತಾ, ಇವರೆಲ್ಲರೂ ತೋರಿದ್ದು ಅದೆಂತಹ ಅಪರಿಮಿತ ತ್ಯಾಗದ ಆದರ್ಶ! ಹೆಚ್ಚೇನು ಹೇಳಲಿ ಕಾಳೀಕೃಷ್ಣ? ನಾನು ಪೂಜೆ ಮಾಡಿದಾಗಲೆಲ್ಲ ಅವರಿಗೂ ಹೂವನ್ನರ್ಪಿಸುವೆ. ನಾನು ಸ್ವಾಮೀಜಿಯ ಈ ಭಕ್ತರೆಲ್ಲರ ದಾಸಾನುದಾಸ, ಗುಲಾಮರ ಗುಲಾಮ.

''....ನನ್ನ ಅನುಭವದಿಂದ ವೇದ್ಯವಾಗಿರುವುದೇನೆಂದರೆ ನಾನು, ನನ್ನದು ಎಂಬ ಭಾವವು ಎಲ್ಲ ದುಃಖ ಮತ್ತು ಅಶಾಂತಿಯ ಆಗರ... ರಾಮಕೃಷ್ಣರ ಹಾಗೂ ಶ್ರೀಮಾತೆಯವರ ಭಕ್ತರು, ಆದರ್ಶ ತ್ಯಾಗಿಗಳೂ, ಆದರ್ಶ ಭಕ್ತರೂ ಆಗಬೇಕಾಗಿದೆ. ನಾವೇನು ಭೋಗಿಸಲು ಜನ್ಮವೆತ್ತಿರುವೆವೆ? ನಾವೇನು ದೇಹಸುಖವನ್ನು ಬಯಸುವೆವೆ? ನಮ್ಮ ಸ್ವಂತದವರು ಎಂದು ಹೇಳಿಕೊಳ್ಳಲು ಯಾರಾದರೂ ಈ ಜಗತ್ತಿನಲ್ಲಿದ್ದಾರೆಯೆ? ನಮ್ಮ ಪ್ರಭುವು ಬಂದದ್ದು ಪೂರ್ಣ ಜ್ಞಾನ, ಪೂರ್ಣ ಭಕ್ತಿ ಮತ್ತು ತ್ಯಾಗದ ಆದರ್ಶವನ್ನು ತೋರಲು. ನಾವು ಈ ಪರಿಯ ಐಶ್ವರ್ಯದ ಅಧಿಕಾರಿಗಳಾಗಬೇಕಾಗಿದೆ. ಇಡೀ ಜಗತ್ತೇ ನಿನ್ನ ಆಶ್ರಮವಾಗಲಿ. ಪ್ರಭುವಿನ ಆಶ್ರಮವು ಕೇವಲ ಐದಾರು ಎಕರೆ ಜಮೀನಿಗೆ ಸೀಮಿತವಾಗಿರಲು ಸಾಧ್ಯವೆ? ಕೇವಲ ಒಂದು ಜಾತಿ ಅಥವಾ ಒಂದು ದೇಶದೊಳಗೆ ಸೀಮಿತವಾಗಿರಲು ಸಾಧ್ಯವೆ? ಖಂಡಿತ ಸಾಧ್ಯವಿಲ್ಲ. ಸಣ್ಣ-ಪುಟ್ಟ ಜಾಗವು ನಮ್ಮ ಠಾಕೂರರ ಕ್ಷೇತ್ರವಾಗಲು ಸಾಧ್ಯವಿಲ್ಲ. ನಮ್ಮ ಪ್ರಭುವು ಮಹಾ ಉದಾರಿ, ಸೀಮಾರಹಿತ. ಸಂಕೀರ್ಣ ಸ್ಥಾನದಲ್ಲಿ , ಒಂದು ಎಲ್ಲೆಯೊಳಗೆ ಅವರು ಹೇಗೆ ತಾನೇ ಇರಬಲ್ಲರು? ನಮ್ಮದು 'ವಸುಧೈವ ಕುಟುಂಬಕಮ್' ಆಗಬೇಕಾಗಿದೆ. ಸ್ವಾಮೀಜಿಯವರ ಲೀಲೆಯನ್ನು ನೋಡುತ್ತಿಲ್ಲವೇನು? 'ನಾಲ್ಪೇ ಸುಖಮಸ್ತಿ' ಹೃದಯವನ್ನು ವಿಶಾಲತೆಯಿಂದ ಅತಿ ವಿಶಾಲತೆಗೆ ಹಿಗ್ಗಿಸಬೇಕಾಗಿದೆ. ಆಗ ಅಲ್ಲಿ ನಮ್ಮ ಪ್ರಭುವಿನ ಆವಿರ್ಭಾವವಾಗುವುದು....

''ಏಕಾಂತದಲ್ಲಿ ಕುಳಿತು ಠಾಕೂರರನ್ನು, ಸ್ವಾಮೀಜಿಯವರನ್ನು ಮನಸಾರೆ ಕರೆ. ತನ್ನನ್ನಾಶ್ರಯಿಸಿದ ಮಗುವನ್ನು ಅವರೇ ಸರಿ ಮಾರ್ಗದಲ್ಲಿ ಕರೆದೊಯ್ಯುವರು. ನಮ್ಮ ಪ್ರಭುವು ಅನಂತ ಕೃಪೆಯ ಆಗರ....''

ಸ್ವಾಮೀಜಿಯವರ ಜೀವನ ಚರಿತ್ರೆಯ ನಾಲ್ಕನೇ ಭಾಗವು ಪ್ರಕಟವಾಯಿತು. ಈ ಕೆಲಸ ಪ್ರಾರಂಭವಾದಾಗ ಶ್ರೀಮಾತೆಯವರು ವಿರಜಾನಂದರನ್ನು ತುಂಬು ಹೃದಯದಿಂದ ಆಶೀರ್ವದಿಸಿದ್ದರು. ಅವರು ೨೯.೮.೧೯೧೨ರಲ್ಲಿ ಬರೆದ ಪತ್ರದಲ್ಲಿ ''ಸ್ವಾಮೀಜಿಯ ಜೀವನ ಚರಿತ್ರೆಯು ಪ್ರಕಟವಾಗುತ್ತಿದೆ ಎಂಬುದನ್ನು ಕೇಳಿ ಸಂತೋಷವಾಯಿತು. ಆ ಕೆಲಸವು ನಿರ್ವಿಘ್ನವಾಗಿ ನೆರವೇರಲೆಂದು ಆಶೀರ್ವದಿಸುವೆ'' ಎಂದು ಬರೆದಿದ್ದರು. ಪೂಜ್ಯರಾದ ರಾಜಾ ಮಹಾರಾಜ್, ಶರತ್ ಮಹಾರಾಜ್, ಹರಿ ಮಹಾರಾಜ್, ಗಂಗಾಧರ್ ಮಹಾರಾಜರೂ ಸಹ ಈ ಬೃಹತ್ ಕಾರ್ಯಕ್ಕೆ ತುಂಬ ಪ್ರೋತ್ಸಾಹ ನೀಡಿದ್ದರು. ಅವರೆಲ್ಲರ ಆಶೀರ್ವಾದ ಹಾಗೂ ಸದಿಚ್ಛೆಯು ಇಂದಿಗೆ ಸಾರ್ಥಕವಾಗಿತ್ತು. ವಿರಜಾನಂದರು ಈಗ ನಿರಾಳವಾಗಿ ಉಸಿರುಬಿಟ್ಟರು. ಮದರ್ ಸೇವಿಯರ್, ''ಪುಸ್ತಕದ ಕೆಲಸವು ಮುಗಿದ ತಕ್ಷಣವೇ ಕೆಲವು ದಿನ ಬೇರೆಡೆ ಎಲ್ಲಾದರೂ ಹೋಗಿ, ಸ್ವಲ್ಪ ಸುತ್ತಾಡಿ ಬರುವುದು ಒಳ್ಳೆಯದು'' ಎಂದು ಮತ್ತೆ ಮತ್ತೆ ಪತ್ರ ಬರೆಯುತ್ತಿದ್ದರು; 'ಸತತ ಪರಿಶ್ರಮದ ನಂತರ ಸ್ವಲ್ಪ ಹೊರಗೆ ತಿರುಗಾಡಿ ಬಂದರೆ ಶರೀರ-ಮನಸ್ಸಿನ ಆಯಾಸ ದೂರವಾಗುತ್ತದೆ' ಎಂದು. ಅದಕ್ಕೆ ಬೇಕಾದ ಧನಸಹಾಯವನ್ನು ತಾನು ಮಾಡುವುದಾಗಿಯೂ ಸಹ ತಿಳಿಸಿದ್ದರು. ವಿರಜಾನಂದರಿಗೆ ಈ ಪ್ರಸ್ತಾಪ ಹಿಡಿಸಿತು. ಅವರು ದಕ್ಷಿಣ ಭಾರತದ ತೀರ್ಥಕ್ಷೇತ್ರಗಳನ್ನು ನೋಡಿರಲಿಲ್ಲ. ಆದ್ದರಿಂದ ದಕ್ಷಿಣ ಭಾರತಕ್ಕೆ ಹೋಗಿ ಬರಲು ನಿಶ್ಚಯಿಸಿದರು. ಅವರ ಅನುಪಸ್ಥಿತಿಯಲ್ಲಿ ಶ್ಯಾಮಲಾತಾಲ್ ನೋಡಿಕೊಳ್ಳಲು ನರೇನ್ ಇದ್ದುದರಿಂದ ಚಿಂತೆಯಿರಲಿಲ್ಲ.

೧೯೧೮ರ ಅಕ್ಟೋಬರ್ ೨೭ರಂದು ವಿರಜಾನಂದರು ಶ್ಯಾಮಲಾತಾಲ್‌ನಿಂದ ಹೊರಟು ಹೆತ್ತ ತಾಯಿಯನ್ನು ನೋಡಲು ಮೊದಲು ಬೃಂದಾವನಕ್ಕೆ ಹೋದರು. ಅಲ್ಲಿದ್ದ ಮೂರು ದಿನವೂ ತಾಯಿ ವಿಧವಿಧದ ಅಡಿಗೆ ಮಾಡಿ ಅವರಿಗೆ ಬಡಿಸುತ್ತಿದ್ದರು. ಆಕೆಯ ಸ್ನೇಹಿತೆಯರು ಸಹ ವಿರಜಾನಂದರನ್ನು ನೋಡಲು ಬರುತ್ತಿದ್ದರು, ಹಾಗೂ ಅನೇಕ ಸಿಹಿ ತಿಂಡಿಗಳನ್ನು ತರುತ್ತಿದ್ದರು. ಬೃಂದಾವನದಲ್ಲಾಗ ಮಿಷನ್ನಿನ ಸೇವಾಶ್ರಮವು ಸ್ಥಾಪಿತವಾಗಿತ್ತು. ನಾದು ಅದರ ಅಧ್ಯಕ್ಷ (ನಾದು ಸ್ವಾಮೀಜಿಯವರ ತಂಗಿಯ ಮಗ, ಇವರೇ ೧೮೯೮ರಲ್ಲಿ ಕಾಳೀಕೃಷ್ಣರೊಂದಿಗೆ ಮಾಯಾವತಿಗೆ ಹೋಗಿದ್ದವರು). ವಿರಜಾನಂದರು ಸೇವಾಶ್ರಮಕ್ಕೆ ಹೋಗಿ ಎಲ್ಲರನ್ನೂ ಭೇಟಿಯಾಗಿ ಬಂದರು. ನಂತರ ಬೃಂದಾವನದಿಂದ ಅಲಹಾಬಾದಿಗೆ ಹೋಗಿ, ಅಲ್ಲಿ ಮುಂಡನ ಮಾಡಿಸಿಕೊಂಡು ತ್ರಿವೇಣೀ ಸಂಗಮದಲ್ಲಿ ಸ್ನಾನ ಮಾಡಿದರು. ಕಾಶಿಗೂ ಹೋಗಿ ಬಂದರು. ಅಲ್ಲಿ ಸ್ವಾಮಿ ವಿಜ್ಞಾನಾನಂದಜೀ, ಬೂಡೋ ಬಾಬಾ (ಸಚ್ಚಿದಾನಂದಜೀ), ಖೋಕಾ ಮಹಾರಾಜ್ ಹಾಗೂ ಗುರುಭ್ರಾತರಾದ ಕೃಷ್ಣಲಾಲ್ (ಸ್ವಾಮಿ ಧೀರಾನಂದ) ಇವರನ್ನೆಲ್ಲ ಭೇಟಿಯಾಗಿ ಬಂದರು. ಪೂಜ್ಯರಾದ ಲಾಟು ಮಹಾರಾಜರ ದರ್ಶನವನ್ನೂ ಪಡೆದರು.


(ಮುಂದುವರಿಯುವುದು)

ಶ್ರೀ ಶ್ರೀರಾಮಕೃಷ್ಣ ಭಾಗವತಮ್

ಆನೆಯನ್ನು ಕಾಣಲು ಹೋದ ಕುರುಡುರು ಅದರ ಒಂದೊಂದು ಅವಯವವನ್ನು ಮುಟ್ಟಿ, ಅದು ಗೋಡೆಯಂತೆ ಇದೆ, ಮೊರದಂತೆ ಇದೆ... ಎಂದು ವಿವರಿಸಿದ ಕಥೆಯನ್ನು ಶ್ರೀರಾಮಕೃಷ್ಣರು ಹೇಳುತ್ತಾರೆ. ಅದರಲ್ಲಿ ಪ್ರತಿಯೊಂದೂ ಆನೆಯ ಸ್ವರೂಪವೇ ಆದರೂ ಆಂಶಿಕ ಮಾತ್ರ, ಪೂರ್ಣಸ್ವರೂಪವಲ್ಲ. ಒಂದು ಲೌಕಿಕವಾದ ಆನೆಯನ್ನೇ ಪರಿಪೂರ್ಣವಾಗಿ ಅರಿತುಕೊಳ್ಳಲಾಗದಷ್ಟು ಪರಿಮಿತ ಬುದ್ಧಿ ಮಾನವನದು. ಅಂತಹ ಮತಿಯ ಸಹಾಯದಿಂದ ಪರಿಪೂರ್ಣ ಪರಬ್ರಹ್ಮವನ್ನು ಅರಿಯುವುದು! ಅದನ್ನು ಮಾತಿಗೆ ಸಿಲುಕಿಸುವುದು ಸಾಧ್ಯವೆ? ಆದುದರಿಂದಲೇ ಪ್ರಪಂಚದಲ್ಲಿರುವ ಎಲ್ಲಾ ಚರಾಚರಗಳನ್ನು ಪರಬ್ರಹ್ಮವಾಗಿಯೇ ಕಾಣುತ್ತಿದ್ದ ಶುಕರನ್ನೂ, ವ್ಯಾಸರನ್ನೂ ಸಕ್ಕರೆ ಬೆಟ್ಟಕ್ಕೆ ಹೋಗಿ ಕಣಗಳನ್ನು ಹೊತ್ತ ಇರುವೆಗಳೆಂದು ಶ್ರೀರಾಮಕೃಷ್ಣರು ಹೇಳಿದ್ದಾರೆ. ಅಂದರೆ, ಪರಿಪೂರ್ಣ ಬ್ರಹ್ಮವನ್ನು ಯಾರು ಯಾರು ಎಷ್ಟು ಎಷ್ಟು ಬಣ್ಣಿಸಿದರೂ ಅದನ್ನು ಕುರಿತು ಹೇಳಬೇಕಾದುದು ಇನ್ನೂ ಉಳಿದೇ ಇರುತ್ತದೆ. ಈ ಮಾತು ಶ್ರೀರಾಮಕೃಷ್ಣರ ದಿವ್ಯ ಲೀಲಾವಿನೋದಗಳಿಗೂ ಅನ್ವಯಿಸುತ್ತದೆ. ಶ್ರೀರಾಮಕೃಷ್ಣರ ಪರಮಪಾವನವಾದ ಮಂಗಳ ಚರಿತೆಯನ್ನು ತಿಳಿಸುವ 'ಲೀಲಾ ಪ್ರಸಂಗ', 'ಯುಗಾವತಾರ ಶ್ರೀರಾಮಕೃಷ್ಣ' ಮೊದಲಾದ ಅನೇಕ ಕೃತಿಗಳಿದ್ದರೂ, ಅವರನ್ನು ತಾವು ಕಂಡು ಅನುಭವಿಸಿದ ನೆಲೆಯಿಂದ ವಿವರಿಸಲು ಇನ್ನೂ ವಿಚಾರಗಳು ಉಳಿದಿರುತ್ತವೆ.

ಶ್ರೀರಾಮಕೃಷ್ಣರ ಭಗವದ್ಭಾವವನ್ನೂ ಭಾಗವತದ ಮೇಲಿನ ಪ್ರೇಮವನ್ನೂ, ಲೋಕಕಾರುಣ್ಯವನ್ನೂ ಚಿತ್ರಿಸುವ **'ಶ್ರೀರಾಮಕೃಷ್ಣ ಭಾಗವತಂ'** ಎಂಬುದು ಶ್ರೀರಾಮಕೃಷ್ಣರ ಬೇರೊಂದು ಆಯಾಮವನ್ನು ಚಿತ್ರಿಸುವ ಇತರ ಕೃತಿಗಳಿಗಿಂತ ವಿಭಿನ್ನವೂ ವಿಶಿಷ್ಟವೂ ಆದ ಕೃತಿಯಾಗಿದೆ.

ಇದನ್ನು ರಚಿಸಿದವರು ರಾಮೇಂದ್ರ ಸುಂದರ ಭಟ್ಟಾಚಾರ್ಯರು. ಇವರ ಸುಮಾರು ೫೦ನೇ ವಯಸ್ಸಿನಲ್ಲಿ ಶ್ರೀರಾಮಕೃಷ್ಣರು ಕಾಣಿಸಿಕೊಂಡು 'ಮಲ್ಲೀಲಾಂ ವಿಲಿಖ ತ್ವಂ ಭೋ ದೇವಭಾಷಾಯುತಾಂ ಸುಧೀಃ' ಎಂದು ಹೇಳಿದರಂತೆ. ತಮ್ಮ ೮೦ನೇ ವಯಸ್ಸಿನವರೆಗೆ ಎಷ್ಟೋ ಬಾರಿ ಈ ವಿಚಾರ ಅವರ ಕನಸಿನಲ್ಲಿ ಮರುಕಳಿಸಿದ್ದರೂ ಕವಿ ಇದನ್ನು ಕಾರ್ಯಗತಗೊಳಿಸಿರಲಿಲ್ಲ. ಇವರ ತಂದೆ ಶ್ರೀರಾಮಕೃಷ್ಣರ ಸಮವಯಸ್ಕರರು ಮತ್ತು ಅವರ ಮಹಿಮೆಯನ್ನು ಬಲ್ಲವರಾಗಿದ್ದರು. ಶ್ರೀರಾಮೇಂದ್ರರು ೮ನೇ ವಯಸ್ಸಿನಲ್ಲಿದ್ದಾಗ ಅವರ ತಂದೆ ಅವರನ್ನು ಶ್ರೀರಾಮಕೃಷ್ಣರ ಬಳಿ ಕರೆದುಕೊಂಡು ಹೋಗಿದ್ದರು. 'ಇದೋ ಜೀವಂತ ಭಗವಂತ, ಪಾದಸ್ಪರ್ಶ ಮಾಡು; ಚರಣಧೂಳಿ ತೆಗೆದುಕೋ' ಎಂದು ಹೇಳಿ



ಕೃತಿ	: ಶ್ರೀ ಶ್ರೀರಾಮಕೃಷ್ಣ ಭಾಗವತಮ್
ಸಂಸ್ಕೃತ ಮೂಲಕರ್ತೃ	: ರಾಮೇಂದ್ರಸುಂದರ ಭಟ್ಟಾಚಾರ್ಯ- ಭಕ್ತಿತೀರ್ಥ
ಕನ್ನಡಾನುವಾದ ಕರ್ತೃ	: ಡಾ. ಆರೂಢಭಾರತೀ
ಪ್ರಕಾಶಕರು	: ರಾಮಕೃಷ್ಣ ಮಠ, ಬೆಂಗಳೂರು - 560 019. ದೂ: 26616060, 26616161

ಪುಟಗಳು: 584 *ಬೆಲೆ* : 250/

ಅವರ ತಲೆಯನ್ನು ಶ್ರೀರಾಮಕೃಷ್ಣರ ಪಾದದ ಮೇಲೆ ಇರಿಸಿದರು. ಶ್ರೀರಾಮಕೃಷ್ಣರು, 'ಏಳು ಮಗು, ನೀನು ದೀರ್ಘಾಯುಷಿಯೂ ಪಂಡಿತನೂ ಆಗುವೆ' ಎಂದು ಆಶೀರ್ವದಿಸಿದ್ದರು. ಇಷ್ಟುಬಿಟ್ಟರೆ ಕವಿ ರಾಮೇಂದ್ರರಿಗೆ ಶ್ರೀರಾಮಕೃಷ್ಣರ ಬಗ್ಗೆ ಬೇರೆ ಪರಿಚಯ ಇರಲಿಲ್ಲ. ಕನಸಿನಲ್ಲಿ 'ಮಲ್ಲೀಲಾಂ ವಿಲಿಖ...' ಎಂದು ಕಂಡಾಗ ಶ್ರೀರಾಮಕೃಷ್ಣರ ಸಮಕಾಲೀನರೂ ಮತ್ತು ಅವರ ಕೆಲವು ನೇರ ಶಿಷ್ಯರು ಇದ್ದರೂ, ಕವಿ ಸಂಸಾರ, ಅಧ್ಯಾಪನ ಮೊದಲಾದವುಗಳಲ್ಲಿ ಸಿಲುಕಿಕೊಂಡು ಈ ಕೆಲಸ ಮಾಡಲೇ ಇಲ್ಲ. ಕವಿಯ ೮೦ನೇ ವಯಸ್ಸಿನಲ್ಲೂ 'ಮಲೀಲಾ ವಿಲಿಖ ತ್ವಂ..' ಎಂಬ ಕನಸು ಪುನ

ರಾವರ್ತನೆಯಾಯಿತು. ಆಗ ಕವಿ ತನ್ನ ವಯಸ್ಸು , ಅಶಕ್ತತೆ, ಅನಾರೋಗ್ಯ, ಶ್ರೀರಾಮಕೃಷ್ಣರ ಕುರಿತು ಏನೂ ತಿಳಿದಿಲ್ಲ... ಇದೇ ಮೊದಲಾದ ನೆಪಗಳನ್ನೊಡ್ಡಿ ಕಾವ್ಯ ರಚಿಸಲು ಮುಂದಾಗಲಿಲ್ಲ.

ಬೇಡನೊಬ್ಬ ಜೋಡಿಹಕ್ಕಿಗಳಲ್ಲಿ ಒಂದನ್ನು ಬಾಣದಿಂದ ಹೊಡೆದ ದೃಶ್ಯವನ್ನು ಕಂಡು ಮರುಗಿದ ವಾಲ್ಮೀಕಿಗಳ ಬಾಯಿಂದ 'ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ..' ಶ್ಲೋಕ ಅರಿಯದೇ ಹೊಮ್ಮಿಬಿಟ್ಟಿತು. ಈ ಛಂದೋಬದ್ಧ ವಾಕ್ಯ ಎಲ್ಲಿಂದ ಬಂದಿತು? ಯಾಕೆ ಬಂದಿತು? ಇತ್ಯಾದಿ ಚಿಂತನೆಗಳ ಸಾಲು ವಾಲ್ಮೀಕಿ ಮನಸ್ಸನ್ನು ತುಂಬಿಕೊಂಡುಬಿಟ್ಟವು. ಆಗ ಬ್ರಹ್ಮ ಪ್ರತ್ಯಕ್ಷನಾಗಿ 'ಇದು ನನ್ನಿಚ್ಛೆಯಂತೆಯೇ ಬಂದಿದೆ, ಈ ವಯಸ್ಸಿನಲ್ಲಿ ರಾಮನ ಕಥೆಯನ್ನು ಬರೆ' ಎಂದು ಆದೇಶಿಸಿದನು. 'ರಾಮ' ಎಂದರೆ ಯಾರು ಏನೂ ಗೊತ್ತಿಲ್ಲವಲ್ಲ , ಅವನ ಕಥೆ ಏನು ಬರೆಯಲಿ? ಎಂದು ವಾಲ್ಮೀಕಿಗಳು ಕಂಗೆಟ್ಟರು. ಅದಕ್ಕೆ ಬೇಕಾದ ಎಲ್ಲ ಅಂಶ ಗಳನ್ನೂ ನಾರದರ ಮೂಲಕ ತಿಳಿಸಿಕೊಟ್ಟ.

ಇಲ್ಲಿ ಶ್ರೀರಾಮಕೃಷ್ಣರೇ ಕವಿಗೆ ಅಗತ್ಯವಾದ ಎಲ್ಲಾ ವಿಷಯ ಗಳನ್ನು ಅಗತ್ಯ ಬಿದ್ದಾಗ ತಾವೇ ತೋರಿ ಕೊಡುವುದಾಗಿ ಹೇಳಿ, ಕವಿಯನ್ನು ಈ ಕೃತಿ ರಚನೆಗೆ ಪ್ರೇರೇಪಿಸಿದರು. ಹಾಗಾಗಿ ಕವಿ ಅವರ ಆಶೀರ್ವಾದದಿಂದ ಪಡೆದ ಪಾಂಡಿತ್ಯ, ಆಯುಸ್ಸನ್ನು ಅವರಿಗೇ ಕೃತಿಯ ಮೂಲಕ ಅರ್ಪಿಸಲು ಮುಂದಾದದರು. ಕವಿ ರಾಮೇಂದ್ರರು ಈ ಕೃತಿಯನ್ನು ರಚಿಸಲು ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಶಾರದಾನಂದರ 'ಶ್ರೀರಾಮಕೃಷ್ಣ ಲೀಲಾ ಪ್ರಸಂಗ'ವನ್ನು ಪ್ರಧಾನವಾಗಿ ಆಶ್ರಯಿಸಿರುವುದಾಗಿ ಹೇಳಿ ಕೊಂಡಿದ್ದಾರೆ.

ಆದರೂ ಇದರಲ್ಲಿ ಇತರ ಕೃತಿಗಳಲ್ಲಿ ಕಾಣದ ಕೆಲವು ವಿಶಿಷ್ಟ ಪ್ರಸಂಗಗಳು ದಾಖಲಾಗಿದೆ. (೧) ಶ್ರೀಮಂತ ಲಾಹಾ ಮನೆಯಲ್ಲಿ ಘನವಿದ್ವಾಂಸರ ಮಹಾಸಭೆ ಸೇರಿತ್ತು. ಅಲ್ಲಿ ಒಂದು ಗಹನವಾದ ವಿಷಯ ಕುರಿತು ಬಹು ದೀರ್ಘಕಾಲ ಚರ್ಚೆ ನಡೆಯಿತು. ಆದರೂ ಯಾವ ತೀರ್ಮಾನವೂ ಆಗಲಿಲ್ಲ. ಇದನ್ನೆಲ್ಲಾ ಕೇಳುತ್ತಾ ಕುಳಿತಿದ್ದ ಬಾಲಕ ಗದಾಧರ ಈ ಸಮಸ್ಯೆಯನ್ನು ಸುಲಲಿತವಾಗಿ ಪರಿಹರಿಸಿದ ಎಂದಷ್ಟೇ ಶ್ರೀರಾಮಕೃಷ್ಣ ಜೀವನ ಚರಿತ್ರೆಗೆ ಸಂಬಂಧಿಸಿದ ಎಲ್ಲಾ ಕೃತಿಗಳೂ ತಿಳಿಸುತ್ತವೆ. ಆದರೆ ಈ ಕೃತಿಯಲ್ಲಿ ಅಲ್ಲಿ ಚರ್ಚಿಸಿದ ವಿಷಯ ಯಾವುದು, ಅದಕ್ಕೆ ಶ್ರೀರಾಮಕೃಷ್ಣರು (ಬಾಲಕ ಗದಾ ಧರ) ಕೊಟ್ಟ ಪರಿಹಾರ ಏನು ಎಂಬುದನ್ನು ತಿಳಿಸಲಾಗಿದೆ.

(೨) ವೈಕುಂಠನಾಥ ಸಂನ್ಯಾಲನಿಗೆ ಶ್ರೀರಾಮಕೃಷ್ಣರು ರಾಮಾ ಯಣದ ಶಬರೀ ವೃತ್ತಾಂತವನ್ನು ಓದಲು ಹೇಳಿದ್ದರು. ಸಂನ್ಯಾಲ ಕಕ್ಕಾಬಿಕ್ಕಿಯಾಗಿ ಅವರನ್ನೇ ನೋಡತೊಡಗಿದ. 'ರಾಮಾಯಣ ಯಾರ ಕಥೆಯೋ ಅವನೇ ನಾನಾಗಿದ್ದೇನೆ ನಿನಗೆ ಸಂಶಯವಿದ್ದರೆ ಕೇಳು' ಎಂದು ಹೇಳಿ ವಾಲ್ಮೀಕಿ ರಾಮಾಯಣದ ಅರಣ್ಯಕಾಂಡದ ೭೪ನೇ ಅಧ್ಯಾಯವನ್ನು ತಾವೇ ಹೇಳತೊಡಗಿದರು. ಈ ಪ್ರಸಂಗ ವನ್ನು ಕವಿ ರಾಮೇಂದ್ರನಿಗೆ ಶ್ರೀರಾಮಕೃಷ್ಣರು ತಿಳಿಸಿ, ಕವಿಯ ಮುಂದೆಯೂ ಆ ಅಧ್ಯಾಯವನ್ನು ಸುಸ್ಪಷ್ಟವಾಗಿ ಹೇಳಿದರಂತೆ. ಈ ಪ್ರಸಂಗ ಬೇರೆಲ್ಲೂ ದಾಖಲಾಗಿಲ್ಲ.

ಇಂತಹ ಹಲವು ವಿಶೇಷಗಳ ಆಕರ ಗ್ರಂಥವಿದು. ಇದರಲ್ಲಿ ಒಟ್ಟು ೨೮೮೯ ಶ್ಲೋಕಗಳನ್ನೊಳಗೊಂಡ ಆದಿ ಲೀಲಾ, ಮಧ್ಯ ಲೀಲಾ, ಅಂತ್ಯಲೀಲಾ ಎಂಬ ಮೂರು ಪ್ರಕರಣಗಳಿವೆ. ಜೊತೆಗೆ ೨೧ ಶ್ಲೋಕಗಳ ಸ್ತುತಿ ಅಧ್ಯಾಯ, ೨೧ ಶ್ಲೋಕಗಳ ಪರಿಶಿಷ್ಟ ಅಧ್ಯಾಯ ಗಳಿವೆ. ಸಾಧಾರಣವಾಗಿ ಎಲ್ಲರೂ ಸುಲಭವಾಗಿ ಅರಿಯಬಹು ದಾದ ಸರಳ ಸಂಸ್ಕೃತಭಾಷೆಯಲ್ಲಿ ಇದು ರಚಿತವಾಗಿದೆ. ವಿಶೇಷ ವಾಗಿ ಅನುಷ್ಟುಪ್ ಛಂದಸ್ಸು , ಉಪಜಾತಿ ಛಂದಸ್ಸುಗಳೇ ಇವೆ. ಅಲ್ಲೊಂದು ಇಲ್ಲೊಂದು ಮಂದಾಕ್ರಾಂತ, ಶಾರ್ದೂಲವಿಕ್ರೀಡಿತ ಛಂದಸ್ಸಿನ ಶ್ಲೋಕಗಳೂ ಕಂಡುಬರುತ್ತವೆ. ಅಂತ್ಯಲೀಲಾ ಭಾಗ ಹಾಗೂ ಪರಿವಿಷ್ಟ ಅಧ್ಯಾಯಗಳಲ್ಲಿ ಅಲ್ಲಲ್ಲಿ ಗದ್ಯಖಂಡಗಳೂ ಇವೆ. 'ಯಾರಿಗೆ ಯಾರೂ ಸುಖವನ್ನೂ ದುಃಖವನ್ನೂ ಕೊಡಲಾರ. ಪುರು ಷನು ತನ್ನ ತನ್ನ ಕರ್ಮದ ಫಲವನ್ನೇ ಉಣ್ಣುತ್ತಾನೆ.' *(ಪ್ರ. ೩ , ಶ್ಲೋ. ೧೫)* ಒಬ್ಬರ ಮೇಲೆ ಬಹು ಕಾರ್ಯಭಾರ ಬಿದ್ದರೆ ಕೆಲಸವೂ ಸುಸಂಪನ್ನವಾಗುವುದಿಲ್ಲ' *(ಪ್ರ. ೩೯, ಶ್ಲೋ. ೪೪)* ಇಂತಹ ಜೀವನಕ್ಕೆ ಬೆಳಕು ನೀಡುವ ಸುಭಾಷಿತ ವಾಕ್ಯಗಳು ಅಲ್ಲಲ್ಲಿ ದೊರಕುತ್ತವೆ. ಅಂತ್ಯಲೀಲಾ ಅಧ್ಯಾಯದಲ್ಲಿ ನಿರೂಪಿತವಾಗಿ ರುವ ಶ್ರೀರಾಮಕೃಷ್ಣರ ಗಹನ ವೇದಾಂತ ತತ್ತ್ವಗಳನ್ನು ತಿಳಿಸುವ ಉಪದೇಶಗಳು ಅತ್ಯಂತ ಮನೋಹರವಾಗಿವೆ. ಅರಿಯದವನಿಗೂ ಮನದಟ್ಟಾಗುವಂತೆ ಸರಳಭಾಷೆಯಲ್ಲಿ ನಿರೂಪಿತವಾಗಿವೆ.

ಈ ಕಾವ್ಯದಲ್ಲಿ ಕೆಲವು ಸುಂದರವಾದ ಭಕ್ತಿಭಾವಭರಿತವಾದ ಸ್ತೋತ್ರ ಭಾಗಗಳೂ ಇವೆ. ಉದಾ: ಪು. ೧೫; ಶ್ಲೋ. ೮೬. 'ತ್ವಾಂ ಜ್ಞಾನಿಭಿಸ್ತತ್ತ್ವವಿಬೋಧನಾರ್ಥಂ.. ಪೂರ್ಣಮಹಂ ಪ್ರಪದ್ಯೇ'; ಪು.೪೫೬. ಶ್ಲೋ ೨೨: 'ನಮಃ ಪುರಸ್ತಾತ್ ಪುರಮಂಗಲಾಯ ಪೃಷ್ಠೇ ನಮಸ್ತೇ ಪ್ರಕೃತೇರ್ವಧಾಯ' ಇದು ಭಗವದ್ಗೀತೆಯ ೧೧ನೇ ಅಧ್ಯಾಯವನ್ನು ನೆನಪಿಗೆ ತರುತ್ತದೆ. 'ಶ್ರೀರಾಮಕೃಷ್ಣ ಮಮ ದೇಹಿ ಪದಾವಲಂಬಂ..'ಎಂದು ಕೊನೆಗೊಳ್ಳುವ ಶ್ರೀಶಂಕ ರರ ಲಕ್ಷ್ಮೀನೃಸಿಂಹ ಕರಾವಲಂಬ ಸ್ತೋತ್ರವನ್ನು ನೆನಪಿಗೆ ತರುವ ಸ್ತೋತ್ರಗಳೂ ಇಲ್ಲಿವೆ. *(ಪು ೪೫೭ -೫೮)*

ಶ್ರೀರಾಮಕೃಷ್ಣರೇ ಬರೆಸಿರುವುದು, ಇತರ ಗ್ರಂಥಗಳಲ್ಲಿಲ್ಲದ ಕೆಲವು ವಿಶಿಷ್ಟ ಅಂಶಗಳನ್ನು ಚಿತ್ರಿಸಿರುವುದು ಇದೇ ಮೊದಲಾದ ಕಾರಣಗಳಿಂದ ವಿಶಿಷ್ಟವಾದುದು ಈ ಕೃತಿ. ಶ್ರೀಸಿದ್ಧಾರೂಢ ಮಿಷನ್ ಆಶ್ರಮದ ಡಾ. ಆರೂಢಭಾರತಿಯವರು ಇದರ ಅತ್ಯಂತ ಸರಳವೂ ಸುಲಲಿತವೂ ಸಕಲಜನಗ್ರಾಹ್ಯವೂ ಆದ ಕನ್ನಡಾನು ವಾದವನ್ನು ಮಾಡಿದ್ದಾರೆ.

ಈ ಕೃತಿ ಸಾಧಕರೆಲ್ಲರಿಗೆ ಇದು ಅಚ್ಚುಮೆಚ್ಚಾಗುವುದರಲ್ಲಿ ಸಂಶಯವಿಲ್ಲ. ದೇವಭಾಷೆಯ ಪರಿಮಳದೊಡಗೂಡಿದ ಈ ಕೃತಿ ಆಧ್ಯಾತ್ಮಿಕ ಬಂಧುಗಳೆಲ್ಲರ ಮನೆಮನಗಳನ್ನು ತುಂಬಿ ಜ್ಞಾನ ಜ್ಯೋತಿಯನ್ನು ಬೆಳಗಲಿ.

— ಡಾ. ಕೆ.ಎಲ್.ಪ್ರಸನ್ನಾಕ್ಷೀ



ಆನಂದದ ಹುಡುಕಾಟ

ಮೂಲ ಹಿಂದೀ : **ಸ್ವಾಮಿ ಬ್ರಹ್ಮೇಶಾನಂದ** ಅನುವಾದ : **ಮಾತಾ ತ್ಯಾಗಮಯೀ**

ಭಗವಂತನ ಮೂಲ ಸ್ವರೂಪವೇ ಆಗಿರುವ ಆನಂದದ ಸುತ್ತ ಎಲ್ಲ ಜೀವಿಗಳ, ಜಗತ್ತಿನ ಜೀವನ ಅವಲಂಬಿತವಾಗಿದೆ. ಪ್ರತಿಯೊಂದು ಜೀವಿಯೂ ಆನಂದವನ್ನು ಅರಸುತ್ತ ಮುಂದಕ್ಕೆ ಸಾಗುತ್ತವೆ; ಜೀವನದ ಏರುಪೇರುಗಳಲ್ಲಿ ತಮ್ಮತಮ್ಮ ಜೀವಿತಲಕ್ಷ್ಯವನ್ನು ಕಂಡುಕೊಳ್ಳುತ್ತವೆ. ಆದರೆ ಆನಂದದ ವಿವಿಧ ನೆಲೆಗಳೇನು, ಜೀವನದಲ್ಲಿ ಅವುಗಳ ಪರಿಣಾಮವೇನು, ನಿಜವಾದ ಆನಂದವೆಂದರೆ ಯಾವುದು ಮೊದಲಾದ ಪ್ರಶ್ನೆಗಳು ಜೀವನದ ಆಳವಾದ, ಮೂಲಭೂತವಾದ ಆಧ್ಯಾತ್ಮಿಕ ಹಂತಕ್ಕೆ ನಮ್ಮನ್ನು ಒಯ್ಯಬಲ್ಲವು. ಮೂಲ ಹಿಂದಿಯಲ್ಲಿ ರಚಿತವಾದ 'ಆನಂದ್ ಕೀ ಖೋಜ್' ಎಂಬ ಗ್ರಂಥದ ಅದೇ ಹೆಸರಿನ ಮೊದಲ ಲೇಖನವಿದು. ಈ ಗ್ರಂಥದ ಲೇಖನಗಳ ಅನುವಾದವನ್ನು ಈ ಸಂಚಿಕೆಯಿಂದ ಪ್ರಕಟಿಸುತ್ತೇವೆ. ಲೇಖಕರು 'ವೇದಾಂತ ಕೇಸರಿ'ಯ ಸಂಪಾದಕರಾಗಿಯೂ ಮುಂದೆ ಕಾನ್ಪುರ ರಾಮಕೃಷ್ಣ ಮಠದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿ, ಪ್ರಸ್ತುತ ವಾರಣಾಸಿ ಅದ್ವೈತ ಆಶ್ರಮದಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ಅನುವಾದಕರು ಚಳ್ಳಕೆರೆ ಶ್ರೀಶಾರದಾಶ್ರಮದ ಮುಖ್ಯಸ್ಥರಾಗಿದ್ದಾರೆ. ಅವರ ಅನೇಕ ಲೇಖನಗಳು ಈಗಾಗಲೇ ಈ ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಜೀವನದ ಗುರಿ: ಸ್ವಾಮಿ ವಿವೇಕಾನಂದರು ತಮ್ಮ 'ಕರ್ಮಯೋಗ'ದ ಪ್ರಥಮ ಅಧ್ಯಾಯದಲ್ಲಿ ಮಾನವ ಜೀವನದ ಗುರಿ ಜ್ಞಾನ, ಸುಖವಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಸುಖ ಅಥವಾ ಆನಂದ ಅನಿತ್ಯ, ಅಶಾಶ್ವತ. ಸುಖವನ್ನು ಜೀವನದ ಗುರಿಯೆಂದು ಬಗೆಯುವುದು ತಪ್ಪು. ಭಾರತೀಯ ದರ್ಶನಗಳಲ್ಲಿ ಎಲ್ಲೆಡೆ ಜ್ಞಾನ, ಮೋಕ್ಷ, ಕೈವಲ್ಯವನ್ನೇ ಜೀವನದ ಗುರಿಯೆಂದು ಸಾರಿದ್ದಾರೆ. ಪತಂಜಲಿಯ ಯೋಗಸೂತ್ರದ ಪ್ರಕಾರ ಕೈವಲ್ಯ ಅಥವಾ ಸ್ವರೂಪ ಅವಸ್ಥಿತಿಯು ಯೋಗದ ಗುರಿ. ಅದರಿಂದ ಕ್ಲೇಶನಿವೃತ್ತಿಯಾಗುತ್ತದೆ. ಮೋಕ್ಷದ ಅರ್ಥವೂ ಅಜ್ಞಾನ ಅಥವಾ ಅಜ್ಞಾನ ಜನಿತ ಸಂಸಾರಬಂಧನದಿಂದ ಪಾರಾಗುವುದು. ಉಪನಿಷತ್ತುಗಳಲ್ಲಿ ಹಾಗೂ ಇತರೆಡೆಗಳಲ್ಲಿ ಅಮರತ್ವವನ್ನು ಜೀವನದ ಗುರಿ ಎನ್ನಲಾಗಿದೆ. ಭಾರತೀಯ ದರ್ಶನಗಳು ಆತ್ಯಂತಿಕ ದುಃಖನಿವೃತ್ತಿಯನ್ನು ಜೀವನದ ಗುರಿ ಎಂದು ಸಾರಿವೆ. ಹಾಗಾದರೆ ಆ ಸ್ಥಿತಿಯಲ್ಲಿ ಸುಖ ಅಥವಾ ಆನಂದ ಎಂಬುದು ಇಲ್ಲದಿರಬಹುದು ಎಂದು ನಮಗನ್ನಿಸಬಹುದು.

ಇದಕ್ಕೆ ವ್ಯತಿರಿಕ್ತವಾಗಿ ಪಾಶ್ಚಾತ್ಯ ದರ್ಶನಗಳು ಸುಖವನ್ನು ಜೀವನದ ಗುರಿ ಎಂದು ಹೇಳಿವೆ. ಹಿಡೋನಿಸಂ ಎಂಬ ಒಂದು ಚಾರ್ವಾಕ ದರ್ಶನ ಇದೆ. ಅದು ಸುಖವನ್ನು ಜೀವನದ ಆದರ್ಶ ಎಂದು ಹೇಳುತ್ತದೆ. ಅದು ಯಾವ ವಸ್ತು ಅಥವಾ ಕ್ರಿಯೆಯು ಸುಖವನ್ನು ನೀಡುತ್ತದೆಯೋ ಅದನ್ನು ಶುಭವೆಂದು ಬಗೆಯುತ್ತದೆ. ಆ ಸುಖವನ್ನು ಆಯಾ ವ್ಯಕ್ತಿಯ ವೈಯಕ್ತಿಕ ಅನುಭವಕ್ಕೆ ತಕ್ಕಂತೆ ಅಳೆಯಲಾಗುತ್ತದೆ. ಪಾಶ್ಚಾತ್ಯ ದಾರ್ಶನಿಕ ಇಪಿಕ್ಯೂರಸ್ ಹೇಳುವಂತೆ ಅಂತಿಮ ಪರಿಣಾಮದಲ್ಲಿ ದುಃಖದಾಯಕವಲ್ಲದೆ ಸುಖ ಮಾತ್ರ ಸ್ವೀಕಾರಾರ್ಹವಾದುದು. ಆದ್ದರಿಂದ ಸುಖ ಲಾಭಕ್ಕಾಗಿ ದೂರದರ್ಶಿತ್ವ, ಮೈತ್ರಿ, ಧೈರ್ಯ ಇತ್ಯಾದಿ ಗುಣಗಳ ಅಗತ್ಯವಿದೆ. ಮಹಾನ್ ದಾರ್ಶನಿಕ ಅರಿಸ್ಟಾಟಲ್ ಪ್ರಕಾರ ವ್ಯಕ್ತಿಗತ ಅನುಭವವಷ್ಟೇ ಸುಖ. ಉದಾಹರಣೆಗೆ ಮಧುಮೇಹದ

ರೋಗಿಗೆ ಮಿಠಾಯಿ ತಿನ್ನುವುದು ಸುಖ ನೀಡಬಹುದು. ಆದರೆ ಅದರಿಂದ ಅವನಿಗೆ ತೊಂದರೆಯೇ ಆಗುತ್ತದೆ. ಆದ್ದರಿಂದ ಸಂಯಮ, ಸದಾಚಾರ, ಸಚ್ಚಾರಿತ್ರ್ಯದಿಂದ ಲಭಿಸುವ ಸುಖ ಮಾತ್ರ ಜೀವನದ ಗುರಿಯಾಗಲು ಸಾಧ್ಯ.

ಭಾರತೀಯ ದರ್ಶನಗಳಲ್ಲೂ ಸುಖ ಅಥವಾ ಆನಂದವನ್ನು ಕುರಿತು ವಿಶದವಾಗಿ ವಿವೇಚನೆ ಮಾಡಲಾಗಿದೆ ಎಂದು ಸ್ವಲ್ಪ ಆಳವಾಗಿ ಅಧ್ಯಯನ ಮಾಡಿದಾಗ ಸ್ಪಷ್ಟವಾಗುತ್ತದೆ. ಉಪನಿಷತ್ತುಗಳಲ್ಲಿ ಪ್ರೇಯಸ್ಸು ಮತ್ತು ಶ್ರೇಯಸ್ಸನ್ನು ಭಿನ್ನವೆಂದು ಹೇಳಲಾಗಿದೆ. ನಮಗೆ ಸುಖವನ್ನು ಯಾವುದು ನೀಡುತ್ತದೆಯೋ ಅದು ಪ್ರೇಯಸ್ಸು; ನಮಗೆ ಒಳಿತನ್ನು ಮಾಡುವಂಥದ್ದು ಶ್ರೇಯಸ್ಸು. ಗೀತೆಯ ೧೮ನೆಯ ಅಧ್ಯಾಯದಲ್ಲಿ ಮೂರು ಬಗೆಯ ಸುಖಗಳನ್ನು ಹೇಳುತ್ತ ಈ ಮಾತನ್ನು ಸ್ಪಷ್ಟೀಕರಿಸಲಾಗಿದೆ:

ಯತ್ತದಗ್ರೇ ವಿಷಮಿವ ಪರಿಣಾಮೇಽಮೃತೋಪಮಮ್ ।
ತತ್ಸುಖಂ ಸಾತ್ತ್ವಿಕಂ ಪ್ರೋಕ್ತಮಾತ್ಮಬುದ್ಧಿಪ್ರಸಾದಜಮ್ ॥೩೭॥
ವಿಷಯೇಂದ್ರಿಯಸಂಯೋಗಾದ್ಯತ್ತದಗ್ರೇಽಮೃತೋಪಮಮ್ ।
ಪರಿಣಾಮೇ ವಿಷಮಿವ ತತ್ಸುಖಂ ರಾಜಸಂ ಸ್ಮೃತಮ್ ॥೩೮॥

ಯದಗ್ರೇ ಚಾನುಬಂಧೇ ಚ ಸುಖಂ ಮೋಹನಮಾತ್ಮನಃ ।
ನಿದ್ರಾಲಸ್ಯ ಪ್ರಮೋದೋತ್ಥಂ ತತ್ತಾಮಸಮುದಾಹೃತಮ್ ॥೩೯॥

ಮೂರು ಬಗೆಯ ಸುಖಗಳಿವೆ. ಸಾತ್ತ್ವಿಕ ಸುಖವು ಪ್ರಾರಂಭದಲ್ಲಿ ವಿಷದಂತೆ ಅಪ್ರಿಯವಾಗಿದ್ದರೂ ಕೊನೆಯಲ್ಲಿ ಅಮೃತ ಸಮಾನವಾಗಿರುತ್ತದೆ. ರಾಜಸಿಕ ಸುಖವು ಆರಂಭದಲ್ಲಿ ಸುಖಪ್ರದ. ಆದರೆ ಪರಿಣಾಮದಲ್ಲಿ ದುಃಖದಾಯಕ. ವಿಷಯೇಂದ್ರಿಯ ಸಂಯೋಗದಿಂದ ಜನಿಸಿದ ಎಲ್ಲ ಸುಖಗಳೂ ಈ ಗುಂಪಿಗೆ ಬರುತ್ತವೆ. ನಿದ್ರೆ ಮತ್ತು ಆಲಸ್ಯದಿಂದ ಲಭಿಸುವ ಸುಖದಿಂದ ಅಜ್ಞಾನ ಮತ್ತು ಮೋಹಬಂಧನವೇ ಹೆಚ್ಚುತ್ತದೆ.

ಗೀತೆಯ ಪ್ರಕಾರ ಚಿತ್ತವೃತ್ತಿನಿರೋಧದಿಂದ ಲಭಿಸಿದ ಆತ್ಯಂತಿಕ ಸುಖವೇ ಸರ್ವೋತ್ಕೃಷ್ಟವಾದುದು ಮತ್ತು ಅದೇ ಜೀವನದ ಗುರಿಯೂ ಆಗಿದೆ.

ಸುಖಮಾತ್ಯಂತಿಕಂ ಯತ್ತದ್‌ಬುದ್ಧಿಗ್ರಾಹ್ಯಮತೀಂದ್ರಿಯಮ್ ।
ವೇತ್ತಿ ಯತ್ರ ನ ಚೈವಾಯಂ ಸ್ಥಿತಶ್ಚಲತಿ ತತ್ತ್ವತಃ ॥
ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ ।
ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಽಪಿ ವಿಚಾಲ್ಯತೇ ॥

ಆತ್ಮದರ್ಶನದಿಂದ ಲಭಿಸಿದ ಆತ್ಯಂತಿಕ ಸುಖವು ಇಂದ್ರಿಯಗಳಿಗೆ ಅತೀತವಾದುದು. ಅದು ಬುದ್ಧಿಗ್ರಾಹ್ಯವಾದುದು. ಆ ಸ್ಥಿತಿಯಲ್ಲಿ ನೆಲಸಿದಾಗ ಯೋಗಿಯು ಎಂತಹ ದುಃಖದಿಂದಲೂ ವಿಚಲಿತನಾಗುವುದಿಲ್ಲ. ಅವನಿಗೆ ಹೆಚ್ಚಿನ ಲಾಭದ ತೃಷೆಯೂ ಇರುವುದಿಲ್ಲ.

ಹೀಗೆ ಜ್ಞಾನ ಮತ್ತು ಅಮರತ್ವದ ಜೊತೆಜೊತೆಯಲ್ಲಿ ಭಾರತೀಯ ದರ್ಶನವು ಆನಂದ ಅಥವಾ ಆತ್ಯಂತಿಕ ಸುಖವನ್ನು ಜೀವನದ ಗುರಿಯೆಂದು ಒಪ್ಪಿದೆ ಎಂಬುದು ಗೀತೆಯ ಮತ್ತು ಉಪನಿಷತ್ತಿನ ಉಪದೇಶಗಳಿಂದ ಸ್ಪಷ್ಟವಾಗುತ್ತದೆ. ವಾಸ್ತವವಾಗಿ **ಸತ್, ಚಿತ್, ಆನಂದ; ಅಸ್ತಿ ಭಾತಿ ಪ್ರಿಯ; ಸತ್ಯಂ ಶಿವಂ ಸುಂದರಂ** ಇವು ಒಂದೇ ಪರಮಸತ್ಯದ ಮೂರು ಮುಖಗಳು. ಯಾವುದು ಜ್ಞಾನವೋ ಅದು ಆನಂದವೂ ಹೌದು. ಯಾವುದು ನಿತ್ಯವೋ ಅದು ಆನಂದವೂ ಹೌದು. ಇವು ಮೂರೂ ಆತ್ಮನ ಸ್ವರೂಪವೇ ಆಗಿವೆ. ಇವು ಮೂರೂ ಭಿನ್ನವಲ್ಲ, ಒಂದೇ. ಶಬ್ದ ದೃಷ್ಟಿಯಿಂದ ಬೇರೆ ಬೇರೆ ಅಷ್ಟೇ. ಆತ್ಮಸಾಕ್ಷಾತ್ಕಾರವೇ ಎಂದರೆ ತನ್ನ ಆನಂದ ಸ್ವರೂಪದ ಸಾಕ್ಷಾತ್ಕಾರವೇ ಜೀವನದ ಗುರಿಯಾಗಿದೆ. ಅದರ ಹೊರತು ಶಾಂತಿ ಅಥವಾ ಶಾಶ್ವತ ಸುಖ ಲಭಿಸದು.

ಏಕೋ ವಶೀ ಸರ್ವಭೂತಾಂತರಾತ್ಮಾ
ಏಕಂ ರೂಪಂ ಬಹುಧಾ ಯಃ ಕರೋತಿ ।
ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾ–
ಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಂ ॥

ನಿತ್ಯೋಽನಿತ್ಯಾನಾಂ ಚೇತನಶ್ಚೇತನಾ–
ಮೇಕೋ ಬಹೂನಾಂ ಯೋ ವಿದಧಾತಿ ಕಾಮಾನ್ ।
ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾ–
ಸ್ತೇಷಾಂ ಶಾಂತಿಃ ಶಾಶ್ವತೀ ನೇತರೇಷಾಮ್ ॥

ಸಂತಮಹಾತ್ಮರು, ಅವತಾರ ಪುರುಷರೆಲ್ಲ ಈ ಶಾಶ್ವತ ಸುಖವನ್ನು, ಆತ್ಯಂತಿಕ ಸುಖವನ್ನು ಪಡೆದಿರುವರು. ಬುದ್ಧನ ದರ್ಶನವು ದುಃಖ ಮತ್ತು ಅದರ ನಿವೃತ್ತಿಯನ್ನು ಅವಲಂಬಿಸಿದೆ. ನಿರ್ವಾಣವು ದುಃಖನಿವೃತ್ತಿಯೆಂಬ ಅಭಾವದ ಸ್ಥಿತಿ ಮಾತ್ರವಲ್ಲ, ಎಂಬುದು ನಮಗೆ ಅವನ ನಿರ್ವಾಣಾನುಭವದ ಘಟನೆಯಲ್ಲಿ ವೇದ್ಯವಾಗುತ್ತದೆ. ಬೋಧಿಜ್ಞಾನ ಲಭಿಸಿದಾಗ ಬುದ್ಧ ಏಳುದಿನ, ಏಳು ರಾತ್ರಿ ಅದೇ ಆನಂದದಲ್ಲಿ ಮತ್ತನಾಗಿದ್ದನು. ಅಸ್ಸಿಸ್ಸಿಯ ಸಂತ ಫ್ರಾನ್ಸಿಸ್ ಕ್ರಿಸ್ತನನ್ನು ಶಿಲುಬೆಗೇರಿಸಿದ ವೇದನೆಯ ಘಟನೆಯನ್ನು ಧ್ಯಾನಿಸಿದನು. ಪರಿಣಾಮವಾಗಿ ಅವನ ಹಸ್ತ ಮತ್ತು ಪಾದಗಳಲ್ಲಿ ಮೊಳೆಯ ಗಾಯಗಳಾದವು. ಸಂತ ಫ್ರಾನ್ಸಿಸ್‌ನಿಗೆ ಒಂದು ಭಾರೀ ದೈವೀ ವಾದ್ಯಧ್ವನಿ ಕೇಳಿಸಿತು. ಅದು ಎಷ್ಟು ಮಧುರ, ಘನತರವಾಗಿತ್ತೆಂದರೆ, ಅದನ್ನು ಆಲಿಸುತ್ತಲೇ ಅವನು ಆನಂದದಲ್ಲಿ ಉನ್ಮತ್ತನಾದನು. ಇನ್ನು ಸ್ವಲ್ಪ ಹೊತ್ತು ಅವನು ಅದನ್ನು ಆಲಿಸಿದ್ದರೆ ಅವನ ಪ್ರಾಣವೇ ಹೊರಟುಹೋಗುತ್ತಿತ್ತು ಎಂದು ಅವನು ಹೇಳುತ್ತಿದ್ದನು. ಶ್ರೀರಾಮಕೃಷ್ಣರು ಸದಾ ಆನಂದ ಮೂರ್ತಿಯಾಗಿದ್ದರು. ಒಬ್ಬ ಭಕ್ತನು ಅವರೆದುರು, 'ಈ ಸಂಸಾರ ಮಾಯೆಯ ಮನೆ' ಎಂದು ಹಾಡುತ್ತಿದ್ದರೆ, ಅವರು ಅದನ್ನು ತಡೆದು, 'ಇಲ್ಲ, ಇದು ಆನಂದದ ಮನೆ' ಎಂದು ಹಾಡಿದರು.

ಸುಖದ ಪ್ರಕಾರಗಳು: ಜಡವಾದಿಗಳಾಗಲಿ, ಚಾರ್ವಾಕರಾಗಲಿ, ಧಾರ್ಮಿಕರಾಗಲಿ, ಆಸ್ತಿಕರಾಗಲಿ, ವೇದಾಂತಿಗಳಾಗಲಿ ಎಲ್ಲರೂ ಸುಖ, ಆನಂದ ಅಥವಾ ಶಾಂತಿಯನ್ನು ಬಯಸುತ್ತಾರೆ,

ಜಗತ್ತಿನಲ್ಲಿ ಎಲ್ಲ ಜೀವರಾಶಿಗಳಿಗೂ ಒಂದಲ್ಲೊಂದು ಬಗೆಯ ಸುಖ, ಒಂದಲ್ಲೊಂದು ಪ್ರಮಾಣದಲ್ಲಿ ಸಿಗುತ್ತಲೇ ಇದೆ. ಜೀವನದಲ್ಲಿ ಕೇವಲ ದುಃಖವೇ ಇದ್ದುದಾದರೆ ಜೀವನವೇ ಸಾಧ್ಯವಿರುತ್ತಿರಲಿಲ್ಲ. ಹಾಗಾದರೆ ಸುಖದ ಸ್ವರೂಪವೇನು, ಸುಖಪ್ರಾಪ್ತಿಯ ಉಪಾಯವೇನು ಎಂದು ತಿಳಿಯಲೆತ್ನಿಸೋಣ. ಸುಖ ಎಲ್ಲರಿಗೂ ಸಿಗುತ್ತದೆ. ಶಾಸ್ತ್ರಕಾರರು ೧. ಮಗುವಿನ ಸುಖ ೨. ಮಹಾರಾಜನ ಸುಖ ಮತ್ತು ೩. ಬ್ರಹ್ಮಜ್ಞಾನಿಯ ಸುಖ ಎಂದು ಮೂರು ಗುಂಪುಗಳಾಗಿ ವಿಭಜಿಸಿದ್ದಾರೆ. ಈ ಮೂರು ಸುಖಗಳು ಜಗತ್ತಿನಲ್ಲಿ ಪ್ರಸಿದ್ಧವಾದವುಗಳೇ. ಈ ಮೂವರಿಗೆ ಹೋಲಿಸಿದಾಗ ಇತರರ ಸುಖ ನಗಣ್ಯವಾದುದು ಎಂದರ್ಥ.

ಮಕ್ಕಳ ಸುಖ: ಮಕ್ಕಳು ಸದಾ ಆನಂದವಾಗಿರುತ್ತಾರೆ. ಮಗು ತಾಯಿಯ ಹಾಲು ಕುಡಿಯುತ್ತದೆ, ಸದಾ ನಗುತ್ತಲೇ ಇರುತ್ತದೆ. ಅದಕ್ಕೆ ಜೀವನದ ದುಃಖಗಳ ಪರಿಚಯವಿಲ್ಲ. ಅದಕ್ಕೆ ಭವಿಷ್ಯದ ಚಿಂತೆಯಿಲ್ಲ. ಭೂತಕಾಲದ ವ್ಯಥೆಯಿಲ್ಲ. ಸಾಮಾಜಿಕ ವಿಧಿ-ನಿಷೇಧಗಳ ಪರಿವೆಯೂ ಅದಕ್ಕಿಲ್ಲ. ಶ್ರೀರಾಮಕೃಷ್ಣರು ಹೇಳುತ್ತಾರೆ, ಮಕ್ಕಳು ಮೂರು ಗುಣಗಳಿಗೆ ಅತೀತರು. ಅವು ಮಕ್ಕಳನ್ನು ಕಟ್ಟಿಹಾಕಲಾರವು. ಮಕ್ಕಳಿಗೆ ರಾಗದ್ವೇಷಗಳೂ ಇಲ್ಲ. ಪರಮಹಂಸರು ಬಾಲಕರಂತೆ ಇರುತ್ತಾರೆ. ಏಕೆಂದರೆ ಅವರು ರಾಗ-ದ್ವೇಷ, ವಿಧಿ-ನಿಷೇಧಗಳು ಮತ್ತು ಮೂರು ಗುಣಗಳಿಗೆ ಅತೀತರಾಗಿರುತ್ತಾರೆ. ಆದ್ದರಿಂದ ಅವನ ಸುಖ ಪ್ರಾಪಂಚಿಕರ ಸುಖಕ್ಕಿಂತ ದೊಡ್ಡ ಸುಖಪ್ರಾಪ್ತಿಗೆ ಬಾಧಕಗಳಾಗವು ಎಂಬ ಸೂಚನೆಯೂ ಸಿಗುತ್ತದೆ. ಜ್ಞಾನಿ ಮತ್ತು ಬಾಲಕನ ಸುಖ ಒಂದೇ ಬಗೆಯದು. ಅಜ್ಞಾನದಿಂದ ಮಕ್ಕಳ ಸುಖ ಶಾಶ್ವತವಾಗಲಾರದು. ಅವರು ದೊಡ್ಡವರಾದಂತೆ ಆ ಸುಖ ಮರೆಯಾಗುತ್ತದೆ.

ವಿಷಯಸುಖಗಳು: ಪಶುಪಕ್ಷಿಗಳಿಂದ ಹಿಡಿದು ಮನುಷ್ಯ ಗಂಧರ್ವರವರೆಗೆ ಇಂದ್ರಿಯ-ವಿಷಯ ಭೋಗಗಳು ಸಮಾನ. ಅದರಲ್ಲೂ ಯೌವನದಲ್ಲಿ ಇಂದ್ರಿಯಪಟುತ್ವವು ಅಧಿಕವಾಗಿರುವುದರಿಂದ ಭೋಗಿಸುವ ಸಾಮರ್ಥ್ಯವೂ ಅಧಿಕವಾಗಿರುತ್ತದೆ. ವಿಷಯ ಸುಖಭೋಗಕ್ಕೆ ಯೌವನವೇ ಸರಿಯಾದ ಸಮಯ. ವಿಷಯಸುಖಗಳಲ್ಲಿ ಕಾಮಸುಖ ಎಲ್ಲಕ್ಕಿಂತ ಹೆಚ್ಚಿನದು ಎಂದು ಭಾವಿಸಲಾಗಿದೆ. ಆದರೆ ವಿವೇಕಿಯಾದವನು ಎಲ್ಲ ಅನರ್ಥಗಳ ಮೂಲವಾದ ವಿಷಯಸುಖಗಳನ್ನು ದುಃಖ ಎಂದೇ ಬಗೆಯುತ್ತಾನೆ. ಪ್ರಿಯತಮನು ಪ್ರಿಯೆಯ ಆಲಿಂಗನದಲ್ಲಿರುವಾಗ ಅವನಿಗೆ ಇಡೀ ಜಗತ್ತು ಮರೆತುಹೋಗುತ್ತದೆ ಎಂದು ಉಪನಿಷತ್ತಿನಲ್ಲಿ ಕಾಮಸುಖವನ್ನು ವರ್ಣಿಸಲಾಗಿದೆ. ಅದೇ ರೀತಿಯಲ್ಲಿ ಗಾಢ ನಿದ್ರೆಯಲ್ಲಿ ಜೀವಿಗೆ ಏನೂ ಗೊತ್ತಿರುವುದಿಲ್ಲ - ಎಂದರೆ ಪೂರ್ಣ ಏಕಾಗ್ರತೆಯಿರುವಲ್ಲಿ ಸುಖ ಅಧಿಕವಾಗಿರುತ್ತದೆ. ಸುಖ ಮತ್ತು ಚಿತ್ತ ಏಕಾಗ್ರತೆಗೆ ನೇರವಾದ ಸಂಬಂಧವಿದೆ. ಪ್ರಾಣಿ-ಪಕ್ಷಿಗಳ ಜೀವನವು ಇಂದ್ರಿಯಗಳಲ್ಲೇ ಕೇಂದ್ರೀಕೃತವಾಗಿದೆ. ಆದ್ದರಿಂದ ಅವಕ್ಕೆ ವಿಷಯಭೋಗಗಳಲ್ಲಿ ಮನುಷ್ಯನಿಗಿಂತ ಹೆಚ್ಚಿನ ಸುಖ ಸಿಗುತ್ತದೆ. ಹಂದಿ ಅಥವಾ ನಾಯಿಗೆ ಆಹಾರ ಸೇವನೆಯಲ್ಲಿ ಸಿಗುವ ಆನಂದ ಮನುಷ್ಯನಿಗೆ ಆಹಾರದಲ್ಲಿ ಸಿಗುವುದಿಲ್ಲ.

ಮನುಷ್ಯನ ಏಕಾಗ್ರತೆಯು ಅಧಿಕವಾದಷ್ಟೂ ಅವನ ಸುಖಾನುಭವ ಅಧಿಕವಾಗುತ್ತದೆ. ತತ್ತ್ವವಿಚಾರ ಮತ್ತು ಭಗವತ್ ಚಿಂತನೆಯಿಂದ ಚಿತ್ತ ಶುದ್ಧಿಯಾಗುತ್ತದೆ. ಆಗ ಅವನ ಏಕಾಗ್ರತೆಯೂ ಹೆಚ್ಚುತ್ತದೆ. ಅಂತಹ ಶುದ್ಧ ಮನಸ್ಸನ್ನು ಎಲ್ಲಿ ತೊಡಗಿಸಿದರೆ ಅದು ಆಯಾ ವಿಷಯವನ್ನು ದೃಢವಾಗಿ ಹಿಡಿದುಕೊಳ್ಳುತ್ತದೆ. ಅದು ಆಸಕ್ತಿಯೆಂಬಂತೆ ಕಾಣುತ್ತದೆ. ಆದರೆ ಭಗವತ್ ಚಿಂತನೆಯಿಂದ ಸಶಕ್ತವಾದ ಚಿತ್ತಕ್ಕೆ ಆ ಆಸಕ್ತಿಯಿಂದ ಹೊರಬರಲಿಕ್ಕೂ ಶಕ್ತಿಯಿರುತ್ತದೆ, ಎಂದರೆ ಅಂತಹ ವ್ಯಕ್ತಿಯಲ್ಲಿ ಆಸಕ್ತಿ ಅಥವಾ ಅನಾಸಕ್ತಿ ಎರಡೂ ಇರುತ್ತವೆ. ಆಸಕ್ತಿ ಸುಖ ಕೊಡುತ್ತದೆ, ಆಸಕ್ತಿಯಿಂದಲೇ ದುಃಖ ಬರುತ್ತದೆ. ಆದರೆ ಸಾತ್ವಿಕ ಮನಸ್ಸಿಗೆ ಅನಾಸಕ್ತನಾಗುವ ಸಾಮರ್ಥ್ಯವಿರುವುದರಿಂದ ಅದು ದುಃಖವಶವಾಗುವುದಿಲ್ಲ. ಶಿವನ ಮನಸ್ಸು ಅಂತಹುದು. ಅವನಲ್ಲಿ ಆಸಕ್ತಿ ಮತ್ತು ಏಕಾಗ್ರತೆಯ ಜೊತೆ ಜೊತೆಯಲ್ಲಿ ಅನಾಸಕ್ತಿ ಮತ್ತು ವೈರಾಗ್ಯವೂ ಇದೆ. ಶಿವನ ಮನಸ್ಸನ್ನು ಸಾಮಾನ್ಯನ ಮನಸ್ಸಿನೊಂದಿಗೆ ಹೋಲಿಸುತ್ತ ಭರ್ತೃಹರಿ ಹೇಳುತ್ತಾನೆ:

**ಏಕೋ ರಾಗಿಷು ರಾಜತೇ ಪ್ರಿಯತಮೋ ದೇಹಾರ್ಧಹಾರೀ ಹರೋ
ನೀರಾಗೇಷು ಜನೋ ವಿಮುಕ್ತಲಲನಾಸಂಗೋ ನ ಯಸ್ಮಾತ್ ಪರಃ ।
ದುರ್ವಾರಸ್ಮರಬಾಣಪನ್ನಗವಿಷವ್ಯಾವಿದ್ಧಮುಗ್ಧೋ ಜನಃ
ಶೇಷಃ ಕಾಮವಿಡಂಬಿತಾನ್ನ ವಿಷಯಾನ್ ಭೋಕ್ತುಂ ನ ಮೋಕ್ತುಂ ಕ್ಷಮಃ ॥**

(ವೈರಾಗ್ಯಶತಕಮ್, ೧೭.)

('ಪತ್ನಿಯನ್ನು ತನ್ನ ದೇಹದ ಅರ್ಧಭಾಗದಲ್ಲಿ ಧರಿಸಿರುವ ಶಿವನು, ಅನುರಾಗ ಹೊಂದಿರುವ ಮನುಷ್ಯರಲ್ಲಿ ಅತಿ ಅನುರಾಗಿ ಎಂದು ಪ್ರಸಿದ್ಧನಾಗಿದ್ದಾನೆ. ಅಂತೆಯೇ, ಸ್ತ್ರೀಸಂಗವೇ ಇಲ್ಲದ ವಿರಾಗಿ ಜನರಿಗೆ ಅವನು 'ಪರಾತ್ ಪರ' ಎಲ್ಲವನ್ನೂ ಮೀರಿದ ಯೋಗಿಶ್ರೇಷ್ಠ. ಮನ್ಮಥನ ಬಾಣಗಳು ಸರ್ಪದ ವಿಷದ ಲೇಪವನ್ನು ಹೊಂದಿವೆ. ತಡೆಯಲಾಗದ ಆ ಬಾಣದ ಕೈವಶರಾಗಿ ಮುಗ್ಧ ಜನರು ಸುಖಭೋಗಗಳನ್ನು ಅನುಭವಿಸಲೂ ಆರರು, ಬಿಡಲೂ ಆರರು.')

ಉಪನಿಷತ್ತುಗಳಲ್ಲಿ ಹೇಳಿರುವಂತೆ, ಜಗತ್ತಿನ ಎಲ್ಲ ಜೀವಿಗಳು ಪರಮಾತ್ಮ ಸುಖದ ಒಂದು ಅಂಶಮಾತ್ರದಿಂದ ಜೀವಿಸುತ್ತಿದ್ದಾರೆ. ವಿಷಯಗಳಿಂದ ದೊರೆಯುವ ಸುಖವು ಆತ್ಮಸುಖವೇ ಆಗಿದೆ. ಆ ಸುಖ ವಿಷಯಗಳಲ್ಲಿ ಇಲ್ಲ. ವಿಷಯಪ್ರಾಪ್ತಿಯ ಆಸೆಯಿಂದ, ಅವನ್ನು ಪಡೆಯುವ ಪ್ರಯತ್ನದಲ್ಲಿ ಮನಸ್ಸು ಚಂಚಲವಾಗಿರುತ್ತದೆ. ವಿಷಯಗಳು ದೊರೆತಾಗ ಆ ಗಳಿಗೆಯಲ್ಲಿ ಮನಸ್ಸು ಶಾಂತವಾಗುತ್ತದೆ. ಶಾಂತ ಮನಸ್ಸಿನಲ್ಲಿ ಆತ್ಮನ ಆನಂದ ಪ್ರತಿಬಿಂಬಿಸುತ್ತದೆ. ಅದನ್ನು ವಿಷಯಸುಖ ಎಂದು ತಪ್ಪಾಗಿ ತಿಳಿಯುತ್ತಾನೆ

ಮನುಷ್ಯ. ನಿಜವಾದ ಸುಖ ಇರುವುದು ಆತ್ಮನಲ್ಲಿ ಮಾತ್ರ. ವಿಷಯಗಳಲ್ಲಿ ಸುಖ ಇದೆ ಎಂದು ಭಾಸವಾಗುತ್ತದಷ್ಟೆ.

ಮಹಾರಾಜನ ಸುಖ : ತೈತ್ತರೀಯ ಉಪನಿಷತ್ತಿನಲ್ಲಿ ಬ್ರಹ್ಮಾನಂದ ಅಥವಾ ಆತ್ಮಾನಂದವನ್ನು ವರ್ಣಿಸಲು ಮನುಷ್ಯನ ಸುಖದಿಂದ ಹಿಡಿದು ಬ್ರಹ್ಮನ ಸುಖದವರೆಗೆ ಪ್ರತಿ ಜೀವಿಯ ಸುಖವನ್ನು ವರ್ಣಿಸಿದ್ದಾರೆ. ಮನುಷ್ಯ ಆನಂದವನ್ನು ವರ್ಣಿಸುತ್ತ ಋಷಿ ಹೇಳುತ್ತಾನೆ:

ಯುವಾ ಸ್ಯಾತ್ ಸಾಧು ಯುವಾಽಧ್ಯಾಯಕಃ ।
ಆಶಿಷ್ಠೋ ದ್ರಢಿಷ್ಠೋ ಬಲಿಷ್ಠಃ ।
ತಸ್ಯೇಯಂ ಪೃಥಿವೀ ಸರ್ವಾ ವಿತ್ತಸ್ಯ ಪೂರ್ಣಾ ಸ್ಯಾತ್ ।
ಸ ಏಕೋ ಮಾನುಷ ಆನಂದಃ ॥ *(ತೈತ್ತಿರಿಯೋಪನಿಷತ್ತು)*

ಎಂದರೆ ಸಾತ್ತ್ವಿಕನಾದ, ಬುದ್ಧಿವಂತನಾದ, ಆಶಿಷ್ಠ-ದ್ರಢಿಷ್ಠ-ಬಲಿಷ್ಠನಾದ, ಧನಸಂಪನ್ನನಾದ ಇಡೀ ಪೃಥ್ವಿಗೆ ಒಡೆಯನಾದ ಒಬ್ಬ ಯುವಕ – ಅವನ ಆನಂದವು ಒಂದು ಮಾನುಷ ಆನಂದ. ಮನುಷ್ಯ ಗಂಧರ್ವರ ಆನಂದವು ಅದಕ್ಕಿಂತ ನೂರು ಪಾಲು ಹಿರಿದು, ದೇವ ಗಂಧರ್ವರ ಆನಂದವು ಅದಕ್ಕಿಂತ ನೂರು ಪಾಲು ದೊಡ್ಡದು. ಅದೇ ರೀತಿ ಪಿತೃಗಣಗಳು, ದೇವತೆಗಳು, ಇಂದ್ರ, ಬೃಹಸ್ಪತಿ, ಪ್ರಜಾಪತಿ, ಮತ್ತು ಬ್ರಹ್ಮರ ಆನಂದವು ತಮ್ಮ ಹಿಂದಿನವರಿಗಿಂತ ನೂರು ಪಾಲು ಅಧಿಕ. ಎಲ್ಲ ಬಗೆಯ ಲೌಕಿಕ, ಪಾರ್ಥಿವ ಕಾಮನೆಗಳನ್ನು ಈಡೇರಿಸಿಕೊಳ್ಳುವ ಸಾಮರ್ಥ್ಯವುಳ್ಳ ಭೂಮಿಯ ಮೇಲಿನ ಒಬ್ಬ ರಾಜನ ಸುಖವನ್ನು ಸರ್ವಾಧಿಕವೆಂದು ಬಗೆಯಲಾಗಿದೆ. ಅದನ್ನು ಪಡೆಯಲಿಕ್ಕೆ ಪ್ರಯತ್ನ ಪಡಬೇಕಾಗುತ್ತದೆ. ಅದು ಕಳೆದುಹೋದರೆ ಎಂಬ ಭಯ ಸದಾ ಇರುತ್ತದೆ. ಆದ್ದರಿಂದ ಮಹಾರಾಜನಿಗೂ ಗಂಧರ್ವರ ಸುಖ, ಇಂದ್ರಾದಿಗಳ ಸುಖದ ಅಪೇಕ್ಷೆಯಿರುತ್ತದೆ. ತುಲಸೀದಾಸರು ದಿಟವಾಗಿ ಹೇಳಿದ್ದಾರೆ:

ಧನಿಕನೇ ಸುಖಿ ಎನ್ನುವನು ಧನಹೀನ
ರಾಜನ ಸುಖ ಹಿರಿದೆನ್ನುವನು ಧನವಂತ
ರಾಜ ಹೇಳುವನು ಮಹಾರಾಜ ಸುಖಿಯೆಂದು
ಮಹಾರಾಜ ಹೇಳುವನು ಇಂದ್ರನ ಸುಖ ದೊಡ್ಡದು
ಚತುರಾನನನು ಸುಖಿ ಎಂದು ಪೇಳ್ವನು ಇಂದ್ರ
ಬ್ರಹ್ಮ ನುಡಿವನು ವಿಷ್ಣುವಿನದೆ ಸುಖ ದೊಡ್ಡದೆಂದು
ತುಲಸಿ ಪೇಳ್ವನು ವಿಚಾರಗೈಯಿರಿ
ಹರಿನಾಮವಿಲ್ಲದೆ ಲೋಕವೆಲ್ಲವೂ ದುಃಖಿ

ವಿದ್ವಾಂಸನ ಸುಖ : ಜಗತ್ತಿನಲ್ಲಿರುವ ಎಲ್ಲರೂ ವಿಷಯ ಸುಖಗಳನ್ನೇ ಬಯಸುತ್ತಾರೆಂದಲ್ಲ. ಮನಸ್ಸು ಬೆಳೆದಂತೆ, ಸಂಸ್ಕೃತಿಯ ಪ್ರಜ್ಞೆ ಉದಿಸಿದಂತೆ ಸುಖದ ವಸ್ತುಗಳು ಬದಲಾಗುತ್ತ ಹೋಗುತ್ತವೆ. ವ್ಯಕ್ತಿ ಸುಸಂಸ್ಕೃತನಾದಷ್ಟೂ ವಿಷಯಗಳಲ್ಲಿ ಅವನ ತೃಷೆ, ಸುಖಾಭಿಲಾಷೆ ಕಡಿಮೆಯಾಗುತ್ತದೆ. ಶಾಸ್ತ್ರಾಧ್ಯಯನ, ಗಂಭೀರ ಚಿಂತನೆ, ಸಾಹಸಪೂರ್ಣ ಸಂಶೋಧನೆಗಳಲ್ಲಿ ಅವನಿಗೆ ಅಧಿಕ ಸುಖ ಲಭಿಸುತ್ತದೆ. ಅವನಿಗೆ ಕಲೆ, ವಿಜ್ಞಾನದಲ್ಲಿ ರುಚಿ ಸಿಗುತ್ತದೆ. ಈ ಆನಂದಗಳು ಅವನಿಗೆ ಲಭಿಸಲು ಕಾರಣ ಏಕಾಗ್ರತೆ. ಆದರೆ ಶಿಕ್ಷಣ, ವಿಜ್ಞಾನ, ಕಲೆ, ವಿದ್ವತ್ತಿನಿಂದ ದೊರೆಯುವ ಆನಂದವು ದೋಷದೂರವಲ್ಲ. ಉಪನಿಷತ್ತಿನಲ್ಲಿ ನಾರದ ಮತ್ತು ಸನತ್ಕುಮಾರರ ಸಂಭಾಷಣೆಯು ಬರುತ್ತದೆ. ನಾರದರು ಚತುರ್ವೇದಗಳು, ವೇದಾಂಗಗಳು ಮತ್ತು ಇನ್ನು ಹತ್ತು ಹಲವು ವಿದ್ಯೆಗಳಲ್ಲಿ ಪಾರಂಗತರಾಗಿದ್ದರೂ ಅವರಿಗೆ ಸುಖ ಸಿಕ್ಕಿರಲಿಲ್ಲ. ಅವರು ತಮ್ಮ ಶೋಕನಿವೃತ್ತಿಗಾಗಿ ಸನತ್ಕುಮಾರರ ಹತ್ತಿರ ಹೋಗುತ್ತಾರೆ. ಶಾಸ್ತ್ರಾಧ್ಯಯನಕ್ಕೆ ಮೊದಲು ಆಧ್ಯಾತ್ಮಿಕ, ಆಧಿದೈವಿಕ ಮತ್ತು ಆಧಿಭೌತಿಕ ತಾಪಗಳು ಇದ್ದೇ ಇದ್ದವು. ಈಗ ಇನ್ನು ಹೊಸ ತಾಪಗಳು ಸೇರಿಕೊಂಡವು. ಶಾಸ್ತ್ರಜ್ಞಾನಲಾಭಕ್ಕಾಗಿ ಸತತ ಅಭ್ಯಾಸ, ಅಧ್ಯಯನಶೀಲತೆ, ಶಾಸ್ತ್ರ ವಿಸ್ಮರಣೆಯ ಭಯ ಮತ್ತು ನಾನು ವಿದ್ವಾಂಸ ಎಂಬ ಗರ್ವ, ತನಗಿಂತ ದೊಡ್ಡ ವಿದ್ವಾಂಸರ ಕೈಯಲ್ಲಿ ಸೋತರೆ ಎಂಬ ಭಯ — ಇತ್ಯಾದಿ ಸಮಸ್ಯೆಗಳು ಸೇರ್ಪಡೆಯಾದವು ಎಂದರೆ ವಿದ್ವಾಂಸನಿಗೂ ನಿರತಿಶಯ ಸುಖ ಲಭಿಸಿಲ್ಲ.

ನಿದ್ರೆ ಹಾಗೂ ತೂಷ್ಣಿಯ ಸುಖ : ಜಗತ್ತಿನ ಎಲ್ಲ ಜೀವಿಗಳಿಗೆ, ಪಶುಪಕ್ಷಿಗಳಿಗೆ, ಧನಿಕರಿಗೆ, ನಿರ್ಧನರಿಗೆ, ಮೂರ್ಖರಿಗೆ, ಬುದ್ಧಿವಂತರಿಗೆ, ಪಾಪಿಗಳಿಗೆ-ಪುಣ್ಯಾತ್ಮರಿಗೆ-ಎಲ್ಲರಿಗೂ ನಿದ್ರಾಸುಖ ಸಮಾನವಾದದ್ದು. ನಿದ್ರೆಯಲ್ಲಿ ಕುರುಡ ಕುರುಡನಾಗಿರುವುದಿಲ್ಲ, ನಿರ್ಧನನು ನಿರ್ಧನನಾಗಿರುವುದಿಲ್ಲ. ಅತ್ಯಂತ ಶೋಕಾಕುಲನೂ, ಸಮಸ್ಯೆಗಳನ್ನು ಹೊತ್ತುಕೊಂಡು, ಹೊದ್ದುಕೊಂಡವನು ನಿಶ್ಚಿಂತನೂ, ಪರಮಸುಖಿಯೂ ಆಗಿ ನಿದ್ರಿಸುತ್ತಾನೆ. ಆದ್ದರಿಂದ ಪ್ರತಿಯೊಂದು ಜೀವಿಗೆ ನಿದ್ರೆ ಬೇಕೆನ್ನಿಸುತ್ತದೆ. ಅತ್ಯಂತ ಧನಿಕನೂ ನಿದ್ರೆಯ ಮಾತ್ರೆಗಳನ್ನು ನುಂಗಿ ನಿದ್ರಿಸಬಯಸುತ್ತಾನೆ. ತನ್ನ ಧನಕ್ಕಿಂತ ಅವನಿಗೆ ನಿದ್ರೆಯ ಅಗತ್ಯ ಹೆಚ್ಚು ಇದೆ. ವಿಷಯಭೋಗಗಳಲ್ಲಿ ಮುಳುಗಿದವನೂ ನಿದ್ರೆಯನ್ನು ಬಯಸುತ್ತಾನೆ.

ನಿದ್ರೆಯು ಜಾಗ್ರತ್ ಅಥವಾ ಸ್ವಪ್ನಕ್ಕಿಂತ ಬಹಳ ವಿಶಿಷ್ಟವಾದುದು. ನಿದ್ರೆಗೆ ಸುಖ ನೀಡುವ ಶಕ್ತಿಯಿದೆ. ದ್ವಂದ್ವಾತ್ಮಕ ಜಗತ್ತನ್ನು ಅದು ಪೂರ್ತಿ ಮರೆಯುವಂತೆ ಮಾಡುತ್ತದೆ. ಭಾರತೀಯ ಋಷಿಗಳು ನಿದ್ರೆಯನ್ನು ಕುರಿತು ಬಹಳ ಆಳವಾಗಿ ಚಿಂತನೆ ಮಾಡಿದ್ದಾರೆ. ಮಲಗಿ ಎದ್ದ ವ್ಯಕ್ತಿ, **'ನಾಹಂ ಕಿಂಚಿದವೇದಿಷಮ್ ಸುಖಮಸ್ವಾಪ್ಸಮ್'** — 'ನಾನು ಸುಖವಾಗಿ ಮಲಗಿದ್ದೆ; ನನಗೆ ಏನೂ ಗೊತ್ತಾಗಲಿಲ್ಲ.' ಎಂದರೆ ನಿದ್ರಾವಸ್ಥೆಯಲ್ಲಿ ಒಬ್ಬ ಆನಂದವನ್ನು ಭೋಗಿಸುವವನು ಇರುತ್ತಾನೆ. ಅವನು ಎದ್ದ ಮೇಲೆ, 'ನಾನು ಸುಖವಾಗಿ ಮಲಗಿದ್ದೆ' ಎಂದು ಹೇಳುತ್ತಾನೆ. ಅಲ್ಲಿ ಅಜ್ಞಾನವೂ ಇದೆ, ಆನಂದದ ಅನುಭವವೂ ಇದೆ. ಆದರೆ ಜ್ಞಾತಾ, ಜ್ಞೇಯ ಮತ್ತು ಜ್ಞಾನ ಎಂಬ ತ್ರಿಪುಟಿ ಅಲ್ಲಿ ಇಲ್ಲ. ವಿಷಯಗಳಲ್ಲಿ ಭೋಕ್ತಾ, ಭೋಗ್ಯ ಮತ್ತು ಭೋಗ ಎಂಬ ದ್ವೈತಾತ್ಮಕ ತ್ರಿಪುಟಿ ಇದೆ. ಆದರೆ ನಿದ್ರೆಯಲ್ಲಿ ದ್ವೈತ ಇಲ್ಲ. ಈ ತ್ರಿಪುಟಿ ಜೀವಿಗೆ ಕ್ಲೇಶ ಕೊಡುತ್ತದೆ.

ಆದ್ದರಿಂದಲೇ ವ್ಯಕ್ತಿ ಹೆಚ್ಚು ವಿಷಯಸುಖಗಳನ್ನು ಅನುಭವಿಸಿದರೆ, ಅವನಿಗೆ ವಿಶ್ರಾಂತಿ ಬೇಕೆನ್ನಿಸುತ್ತದೆ, ಹಾಸಿಗೆಯ ಮೇಲೆ ಒರಗಿದರೆ ಅವನಿಗೆ ಭೋಗಕ್ಕಿಂತ ಹೆಚ್ಚಿನ ಸುಖ ಸಿಕ್ಕಂತಾಗುತ್ತದೆ. ಅದರಲ್ಲೂ ಅವನು ಗಾಢ ನಿದ್ರೆಯನ್ನು ಬಯಸುತ್ತಾನೆ. ನಿದ್ರೆಯಲ್ಲಿ ಅವನು ಎಲ್ಲವನ್ನೂ ಮರೆತು ಸುಖಿಸುತ್ತಾನೆ. ಅಲ್ಲಿ ಕೇವಲ ಅದ್ವೈತ. ಉಪನಿಷತ್ತುಗಳಲ್ಲಿ ಹೇಳಲಾಗಿದೆ, '**ಯೋ ವೈ ಭೂಮಾ ತತ್ ಸುಖಂ, ನಾಲ್ಪೇ ಸುಖಮಸ್ತಿ**' – ಎರಡು ಇರುವಲ್ಲಿ ಭಯವಿದೆ. ಶಾಸ್ತ್ರಕಾರರು ಹೇಳುತ್ತಾರೆ, ನಿದ್ರೆಯಲ್ಲಿ ನಾವು ಬ್ರಹ್ಮಾನಂದವನ್ನೇ ಅನುಭವಿಸುತ್ತಿರುವುದು, ಆದರೆ ಆ ಸ್ಥಿತಿಯಲ್ಲಿ ಅಜ್ಞಾನವಿದೆ. ಅಜ್ಞಾನವೆಂಬ ಚಿತ್ತವೃತ್ತಿ ಆನಂದಾಭಿಮುಖವಾಗಿರುತ್ತದೆ. ಅದರ ಮೇಲೆ ಆತ್ಮಾನಂದದ ಬೆಳಕು ಬೀಳುತ್ತದೆ.

ನಿದ್ರೆಯಿಂದ ಎಚ್ಚೆತ್ತರೂ ನಾವು ಏಳಲು ಬಯಸುವುದಿಲ್ಲ. ನಾವು ಅದೇ ಶಾಂತಭಾವದಲ್ಲಿ ಅಥವಾ ತೂಷ್ಣೀ ಸ್ಥಿತಿಯಲ್ಲಿ ಮುಂದುವರಿಯಬಯಸುತ್ತೇವೆ. ನಿದ್ದೆಗೆ ಸ್ವಲ್ಪ ಮೊದಲು ಮತ್ತು ನಿದ್ರೆಯಿಂದ ಎದ್ದೇಳುತ್ತಲೇ ಮನಸ್ಸು ಎಲ್ಲ ಚಿತ್ತವೃತ್ತಿಗಳಿಂದ ಪಾರಾಗಿರುತ್ತದೆ. ಆಗ ಅಜ್ಞಾನದ ಆವರಣವು ಇರುವುದಿಲ್ಲ. ಆಗ ಅದು ಆತ್ಮಾನಂದದ ಸಹಜಾವಸ್ಥೆಯನ್ನು ಅನುಭವಿಸುತ್ತದೆ. ನಾವು ಈ ತೂಷ್ಣೀ ಸ್ಥಿತಿಯನ್ನು ಮುಂದುವರಿಸುವ ಪ್ರಯತ್ನವನ್ನು ಮಾಡಬೇಕು, ಎಂದು ವೇದಾಂತಿಗಳು ಹೇಳುತ್ತಾರೆ. ನಿದ್ರೆಗಿಂತ ಮೊದಲು ಅಥವಾ ಎಚ್ಚೆತ್ತ ಕೂಡಲೇ, ಸುಂದರ ಪ್ರಕೃತಿ ದೃಶ್ಯವನ್ನು ನೋಡಿದಾಗ, ಉತ್ತಮ ಸಂಗೀತವನ್ನು ಆಲಿಸಿದಾಗ ಅಥವಾ ಇನ್ನಾವುದೇ ಗಳಿಗೆಗಳಲ್ಲಿ ಮನಸ್ಸು ಚಿತ್ತವೃತ್ತಿ ಶೂನ್ಯವಾಗಿ ಇದ್ದಕ್ಕಿದ್ದಂತೆ ಶಾಂತವಾಗುತ್ತದೆ. ಆಗ ಆ ಸ್ಥಿತಿಯನ್ನು ಹೆಚ್ಚಿಸಿಕೊಂಡು ಹೋಗುವ ಪ್ರಯತ್ನವನ್ನು ಮಾಡಬೇಕು. ಆ ಸ್ಥಿತಿಯಲ್ಲಿ ಲಭಿಸುವ ಆನಂದವು ಬ್ರಹ್ಮಾನಂದವೇ ಅಲ್ಲದಿದ್ದರೂ ಅದಕ್ಕೆ ಅದು ಬಹಳ ಹತ್ತಿರವಾದುದು.

ಶ್ರೀರಾಮಕೃಷ್ಣರು ಮೂರು ಬಗೆಯ ಆನಂದಗಳನ್ನು ಹೆಸರಿಸುತ್ತಾರೆ: ವಿಷಯಾನಂದ, ಭಜನಾನಂದ, ಮತ್ತು ಬ್ರಹ್ಮಾನಂದ. ಬ್ರಹ್ಮಾನಂದದ ನೆರಳೇ ವಿಷಯಾನಂದ. ವಿಷಯಾನಂದ ಬಂಧನಕ್ಕೆ ಕಾರಣ. ಭಗವಂತನ ನಾಮಗುಣಕೀರ್ತನೆ, ಸಾಧನೆಯಿಂದ ಲಭಿಸುವ ಭಜನಾನಂದದಲ್ಲಿ ದ್ವೈತ ಇದೆ, ಆದರೆ ಅದು ಬಂಧನವೆಸಗದು. ಅದು ಕ್ರಮೇಣ ಬ್ರಹ್ಮಾನಂದಕ್ಕೆ ಕರೆದೊಯ್ದು ಮುಕ್ತಿಯನ್ನು ಅನುಗ್ರಹಿಸುತ್ತದೆ. ಸಮಾಧಿಯಲ್ಲಿ ಭಗವಂತನ ಅಪರೋಕ್ಷಾನುಭೂತಿಯಾದಾಗ, ಆ ಆನಂದವನ್ನು ಶಬ್ದಗಳಲ್ಲಿ ವಿವರಿಸಲಾಗದು. ಶ್ರೀರಾಮಕೃಷ್ಣರು ಹೇಳುವಂತೆ ಆಗ ರೋಮರೋಮಗಳಲ್ಲಿ ಮಹಾಭೋಗದ ಅನುಭವವಾಗುತ್ತದೆ.

ಬ್ರಹ್ಮಜ್ಞಾನಿಯ ಸುಖ : ಅಪರೋಕ್ಷಾನುಭವದಿಂದ ಲಭಿಸುವ ಸುಖವು ಎಲ್ಲ ಸುಖಗಳಿಗಿಂತ ಸರ್ವಶ್ರೇಷ್ಠವಾದುದು. ಈ ನಿರತಿಶಯ ಆನಂದವು ಎಲ್ಲ ಸಾಧನೆಗಳ ಗುರಿ. ತೈತ್ತಿರೀಯ ಉಪನಿಷತ್ತಿನಲ್ಲಿ ಮನುಷ್ಯ ಆನಂದದಿಂದ ಹಿಡಿದು ಬ್ರಹ್ಮಾನಂದದವರೆಗೆ ಯಾವ ಯಾವ ಸುಖಗಳನ್ನು ವರ್ಣಿಸಲಾಗಿದೆಯೋ ಅವೆಲ್ಲವೂ ಅಕಾಮಹತನಾದ ಶ್ರೋತ್ರಿಯನಿಗೂ ಲಭಿಸುತ್ತವೆ.

('ಶ್ರೋತ್ರಿಯಸ್ಯ ಚಾಕಾಮಹತಸ್ಯ', *ತೈತ್ತಿರೀಯೋಪನಿಷತ್ತು*)

ದುಃಖನಿವೃತ್ತಿ, ಸರ್ವಕಾಮಾಪ್ತಿ, ಕೃತಕೃತ್ಯತೆ, ಮತ್ತು ಪ್ರಾಪ್ಯಪ್ರಾಪ್ಯತೆಯಿಂದ ಬ್ರಹ್ಮಜ್ಞಾನಿಯು ನಿರತಿಶಯ ಸುಖವನ್ನು ಪಡೆಯುತ್ತಾನೆ. ಅವನು ಸ್ಥೂಲ, ಸೂಕ್ಷ್ಮ, ಕಾರಣ – ಈ ಮೂರೂ ಶರೀರವನ್ನು ಮಿಥ್ಯೆ ಎಂದರಿತು ಅವುಗಳೊಂದಿಗಿನ ತಾದಾತ್ಮ್ಯ ಅಧ್ಯಾಸದಿಂದ ನಿವೃತ್ತನಾಗುತ್ತಾನೆ. ಅವನು ದೇಹದ ವ್ಯಾಧಿ ಮತ್ತಿತರ ದುಃಖಗಳನ್ನು ತನ್ನದು ಎಂದು ಭಾವಿಸುವುದಿಲ್ಲ. ಮನಸ್ಸು ಮತ್ತು ಸೂಕ್ಷ್ಮ ಶರೀರದಲ್ಲಿ ಎದ್ದೇಳುವ ಕಾಮ-ಕ್ರೋಧಾದಿ ವೃತ್ತಿಗಳಲ್ಲಿ 'ತಾನು' ಎಂಬ ಭಾವ ತಾಳುವುದಿಲ್ಲ. ಅವನಿಗೆ ಪಾಪ-ಪುಣ್ಯದ ಚಿಂತೆ ಇಲ್ಲ, ಅವನು ಹಳೆಯ ದುಃಖಗಳಿಂದ ಬಾಧೆ ಪಡುವುದೂ ಇಲ್ಲ, ಅವನು ತಾನು (ಧರ್ಮ ಮತ್ತು ಅಧರ್ಮಕ್ಕೆ ಅತೀತನಾದ) ಅಜ, ಅಮರ, ನಿತ್ಯ, ಆನಂದ ಆತ್ಮ ಎಂದು ಬಲ್ಲನು. ಅವನ ಕರ್ಮಗಳು ಜ್ಞಾನಾಗ್ನಿಯಿಂದ ದಗ್ಧವಾಗಿವೆ. ಆದ್ದರಿಂದ ಅವನ ಲೌಕಿಕ ಮತ್ತು ಪಾರಲೌಕಿಕ ದುಃಖಗಳು ನಿವೃತ್ತಿಯಾಗಿವೆ.

ಅತೃಪ್ತ ಕಾಮನೆಗಳೇ ನಮ್ಮ ಕಷ್ಟಸಂಕಟಗಳಿಗೆ ಕಾರಣ. ಬ್ರಹ್ಮಜ್ಞಾನಿಯಲ್ಲಿ ಎಲ್ಲ ಕಾಮನೆಗಳೂ ಪೂರ್ಣವಾಗುತ್ತವೆ. ಓರ್ವ ಚಕ್ರವರ್ತಿಗೆ ಓರ್ವ ಧನಿಕನ ಅಥವಾ ಮಂತ್ರಿಯ ಅಥವಾ ಇನ್ನಾವುದೇ ವ್ಯಕ್ತಿಯು ಪಡೆಯುವ ಸುಖದ ಬಯಕೆ ಇರದು. ಏಕೆಂದರೆ ಅವನ ಸರ್ವಶ್ರೇಷ್ಠ ಸುಖದಲ್ಲಿ ಉಳಿದೆಲ್ಲ ಸುಖಗಳು ಸೇರಿಕೊಂಡಿವೆ. ಆದ್ದರಿಂದ ರಾಜನು ಆ ನಿಮ್ನ ಸುಖಗಳನ್ನು ಬಯಸುವುದಿಲ್ಲ. ವಿವೇಕಿಯು, ಜ್ಞಾನಿಯು, ವಿವೇಕದಿಂದ ಎಲ್ಲ ಕಾಮನೆಗಳನ್ನು ತ್ಯಜಿಸುತ್ತಾನೆ. ತಾನೇ ಎಲ್ಲ ದೇಹಗಳಲ್ಲಿರುವ ಅಂತರ್ಯಾಮಿ ಸಾಕ್ಷಿ ಆತ್ಮ, ತಾನೇ ಎಲ್ಲರ ಮೂಲಕ ಸುಖವನ್ನು ಪಡೆಯುತ್ತಿರುವವನು ಎಂದು ಮನಗಾಣುತ್ತಾನೆ. ಆದ್ದರಿಂದ ಅವನು ತನಗಾಗಿ ಭೋಗಗಳನ್ನು ಬಯಸನು. ಅವನಿಗೆ ತಾನೇ ಅನ್ನವಾಗಿದ್ದೇನೆ, ತಾನೇ ಅನ್ನಾದ ಎಂಬ ಅರಿವಿರುತ್ತದೆ. ತಾನೇ ಎಲ್ಲವೂ ಆಗಿರುವಾಗ ಪ್ರತ್ಯೇಕವಾದ ಭೋಗ ಎಲ್ಲಿರಲು ಸಾಧ್ಯ? ಅವನು ಪೂರ್ಣವಾಗಿ ನಿಷ್ಕಾಮನಾಗುತ್ತಾನೆ. ನಿಷ್ಕಾಮ ಸ್ಥಿತಿಯಲ್ಲೇ ಸರ್ವಶ್ರೇಷ್ಠ ಸುಖವಿದೆ.

ಜ್ಞಾನಿಗೆ ತಾನು ಮಾಡಬೇಕಾದದ್ದು (ಕೃತಕೃತ್ಯತೆ) ಏನೂ ಇಲ್ಲ ಎಂದು ಗೊತ್ತಿರುತ್ತದೆ. ಅವನಿಗೆ ಪಾಪ ಕರ್ಮಗಳಲ್ಲಿ ಪ್ರವೃತ್ತಿ ಇಲ್ಲ. ಸ್ವರ್ಗಾದಿಗಳಲ್ಲಿ ಅವನಿಗೆ ಆಶೆ ಇಲ್ಲದ್ದರಿಂದ ಪುಣ್ಯ ಕರ್ಮಗಳಲ್ಲೂ ಅವನಿಗೆ ಪ್ರವೃತ್ತಿ ಇಲ್ಲ. ಅವನಿಗೆ ಚಿತ್ತಶುದ್ಧಿಗಾಗಿ ನಿಷ್ಕಾಮ ಕರ್ಮದ ಅಗತ್ಯವಿಲ್ಲ. ಅವನು ಸಮಾಧಿಗಾಗಿ ಚಿತ್ತವೃತ್ತಿ ನಿರೋಧವನ್ನೂ ಮಾಡಬೇಕಿಲ್ಲ. ಏಕೆಂದರೆ ಅವನು ನಿತ್ಯವೂ ಸಮಾಧಿಯಲ್ಲಿ ಸ್ಥಿತನಾಗಿದ್ದಾನೆ. ಇನ್ನು ತನಗಿಂತ ಬೇರೆ ವಸ್ತು ಇದ್ದರಲ್ಲವೇ ಅಪ್ರಾಪ್ಯ ವಸ್ತುವನ್ನು ಪಡೆಯುವ ಚಿಂತೆ?

ಆನಂದಪ್ರಾಪ್ತಿಯ ಉಪಾಯ : ಆನಂದದ ಸ್ವರೂಪವನ್ನರಿತ ಮೇಲೆ ಆನಂದಪ್ರಾಪ್ತಿಯ ಉಪಾಯಗಳನ್ನರಿಯುವುದು ಸುಲಭ. ಮನುಷ್ಯ ನಿರತಿಶಯ, ನಿತ್ಯ ನಿರಂತರ ಸುಖವನ್ನು ಬಯಸುತ್ತಾನೆ. ಅಂತಹ ಆನಂದಪ್ರಾಪ್ತಿಗಾಗಿ ಕ್ಷಣಿಕ ಸುಖದಾಯಕವಾದ ಎಲ್ಲ ವಿಚಾರಗಳು, ಹವ್ಯಾಸಗಳು, ಅಭ್ಯಾಸಗಳನ್ನು ಬಿಟ್ಟುಬಿಡಬೇಕು. ಜಗತ್ತಿನ ಅನಿತ್ಯ ವಿಷಯಗಳು ಶಾಶ್ವತ ಸುಖವನ್ನು ನೀಡಲಾರವು ಎಂದರಿತು ಅವುಗಳಲ್ಲಿನ ಆಸಕ್ತಿಯನ್ನು, ತೃಷೆಯನ್ನು ತೊರೆಯ ಬೇಕು. **ಆಶಾ ಹಿ ಪರಮಂ ದುಃಖಂ, ನಿರಾಶಾ ಹಿ ಪರಮಂ ಸುಖಂ** ಎಂಬುದು ಶಾಶ್ವತ ಸತ್ಯ. ವಿವೇಕ ವಿಚಾರದಿಂದ ಜಗತ್ತಿನ ವಿಷಯಗಳಲ್ಲಿ ದುಃಖವನ್ನು ಮತ್ತು ದೋಷವನ್ನು ಕಂಡು ಅವು ಗಳ ಬಯಕೆಯನ್ನು ಬಿಡಬೇಕು. ಹೀಗೆ ಮಾಡುತ್ತ ಮಾಡುತ್ತ ಚಿತ್ತ ಚಂಚಲತೆಯು ತಾನೇ ತಾನಾಗಿ ಕಡಿಮೆಯಾಗುತ್ತದೆ. ಮತ್ತು ಮನಸ್ಸು ಹೆಚ್ಚೆಚ್ಚು ಸ್ಥಿರವಾಗುತ್ತದೆ, ಶಾಂತವಾಗುತ್ತದೆ.

ಶಾಂತ-ಸತ್ವಗುಣಿ ಚಿತ್ತದಲ್ಲಿ ಆತ್ಮನ ಆನಂದವು ಪ್ರತಿಬಿಂಬಿತ ವಾಗುತ್ತದೆ. ಆದ್ದರಿಂದ ಯೋಗಸಾಧನೆಯಿಂದ ಚಿತ್ತವೃತ್ತಿ ನಿರೋಧ ವನ್ನು ಸಾಧಿಸಲೆತ್ನಿಸಬೇಕು. ಗೀತೆಯಲ್ಲಿ ಭಗವಂತ ಆ ನಿರತಿಶಯ ಸುಖವನ್ನು ಪಡೆಯುವಂತೆ ಆದೇಶಿಸುತ್ತಾನೆ :

ತಂ ವಿದ್ಯಾದ್ದುಃಖಸಂಯೋಗವಿಯೋಗಂ ಯೋಗಸಂಜ್ಞಿತಂ ।
ಸ ನಿಶ್ಚಯೇನ ಯೋಕ್ತವ್ಯೋ ಯೋಗೋಽನಿರ್ವಿಣ್ಣಚೇತಸಾ ॥

ಈ ಯೋಗವೂ ದೀರ್ಘಕಾಲ ನಿರಂತರವಾಗಿ ಮಾಡಲ್ಪಡುವ ಅಭ್ಯಾಸದಿಂದ ಸಿದ್ಧಿಸುತ್ತದೆ. ಯೋಗಸಾಧನೆಯಿಂದ ಏಕಾಗ್ರತೆ ಅಧಿಕವಾದಷ್ಟೂ ನಮ್ಮ ಜೀವನದಲ್ಲಿ ಸುಖ ವರ್ಧಿಸುತ್ತದೆ. ನಾವು ತೂಷ್ಣೀ ಸ್ಥಿತಿಯನ್ನು ಎಂದರೆ ಚಿತ್ತವೃತ್ತಿರಹಿತ ಸ್ಥಿತಿಯನ್ನು ಪಡೆ ಯಲು ಪ್ರಯತ್ನಿಸಬೇಕು. ಹಾಗೆಂದು ಶಾಂತಸ್ಥಿತಿಯ ಹೆಸರಿನಲ್ಲಿ ಆಲಸ್ಯ ಅಥವಾ ನಿದ್ರೆಗೆ ಜಾರಿಬಿಡಬಾರದು. ನಮ್ಮ ಪ್ರಯತ್ನ ನಿದ್ರೆಯ ನಿರಾಳ ಸ್ಥಿತಿಯನ್ನು ಜಾಗ್ರತ್ತಿನಲ್ಲಿ ಪಡೆಯುವುದು. ತೂಷ್ಣೀ ಸ್ಥಿತಿ ನಮಗೆ ಕಷ್ಟವೆನ್ನಿಸಿದರೆ ಸಗುಣ ಸಾಕಾರ ಧ್ಯಾನ ವನ್ನು ಮಾಡುತ್ತ ಹೋಗಬೇಕು. ಆಗ ಕ್ರಮೇಣ ನಿರ್ಗುಣ ನಿರಾ ಕಾರ ಧ್ಯಾನಸ್ಥಿತಿಗೇರಿ ತೂಷ್ಣೀ ಸ್ಥಿತಿಯನ್ನು ತಲಪುತ್ತೇವೆ.

ಆನಂದಪ್ರಾಪ್ತಿಗೆ ಎಲ್ಲಕ್ಕಿಂತ ಪರಿಣಾಮಕಾರಿ ಉಪಾಯ ಭಕ್ತಿ. ನಮ್ಮ ಸ್ಥೂಲ ಮನಸ್ಸು ರೂಪ-ರಸಾದಿಗಳಲ್ಲಿ ಆಸಕ್ತವಾಗಿ ರುವವರೆಗೆ ಅದಕ್ಕೆ ನಾವು ಭಗವಂತನ ಪ್ರಿಯ ರೂಪವನ್ನು ಮತ್ತು ನಾಮ ರಸವನ್ನು ಪಾನಮಾಡಿಸಬೇಕು. ಭಗವಂತ ನಮಗೆ ಅತ್ಯಂತ ಪ್ರಿಯ ಎಂದು ಅವನನ್ನು ಧ್ಯಾನಿಸುವುದರಿಂದ ಅತಿ ಹೆಚ್ಚು ಆನಂದ ಲಭಿಸುತ್ತದೆ. ಭಕ್ತಿಯಿಂದ ಚಿತ್ತಶುದ್ಧಿಯಾಗುತ್ತದೆ. ಚಿತ್ತ ಶುದ್ಧಿಯಾದಷ್ಟು ಅಧಿಕಾಧಿಕ ಆನಂದ.

ಜ್ಞಾನಮಾರ್ಗ ಅಥವಾ ವಿಚಾರಮಾರ್ಗದಿಂದಲೂ ಆನಂದ ಪ್ರಾಪ್ತಿಯಾಗುತ್ತದೆ. 'ನಾನು ಆನಂದ ಪರಿಪೂರ್ಣನಾದ ಆತ್ಮ' ಎಂದು ಭಾವಿಸುತ್ತ ಹೋಗಬೇಕು. ಮನುಷ್ಯನು ಧನ, ಸಂಪತ್ತು, ಪತ್ನಿ, ಪುತ್ರ, ದೇಹ ಎಲ್ಲವನ್ನೂ ಪ್ರೀತಿಸುತ್ತಾನೆ. ಆದರೆ ಎಲ್ಲಕ್ಕಿಂತ ಹೆಚ್ಚಿನ ಪ್ರೇಮ ಅವನಿಗೆ ಆತ್ಮನಲ್ಲಿ. ಅತ್ಯಧಿಕ ಸುಖವನ್ನು ನೀಡುವ ವಸ್ತುವಿನಲ್ಲೇ ನಮಗೆ ಅತ್ಯಧಿಕ ಪ್ರೇಮ, ಆದ್ದರಿಂದ ಆತ್ಮನಲ್ಲಿಯೇ ನಮಗೆ ಅತ್ಯಧಿಕ ಪ್ರೇಮ. ಆತ್ಮವೊಂದೇ ಪರಮ ಸುಖ ಸ್ವರೂಪನು.

ಮಗನ ಪ್ರಾಣವನ್ನು ರಕ್ಷಿಸಲು ಮನುಷ್ಯ ಎಷ್ಟು ಬೇಕಿದ್ದರೂ ಹಣ ಖರ್ಚು ಮಾಡುತ್ತಾನೆ. ಆದರೆ ಮಗ ತನ್ನನ್ನು ಕೊಲ್ಲಲು ಬಂದರೆ ಇವನು ತನ್ನನ್ನು ತಾನು ಮೊದಲು ರಕ್ಷಿಸಿಕೊಳ್ಳಲು ನೋಡುತ್ತಾನೆ. ಎಂದರೆ ಮಗನಿಗಿಂತ ತನ್ನ ದೇಹ ಹೆಚ್ಚು ಪ್ರಿಯ ವಾದಂತಾಯಿತು. ಸ್ಥೂಲ ದೇಹಕ್ಕಿಂತ ಇಂದ್ರಿಯಗಳು ಹೆಚ್ಚು ಪ್ರಿಯ. ಏಕೆಂದರೆ ಯಾರಾದರೂ ಕಣ್ಣಿಗೆ ಗುರಿಯಿಟ್ಟರೆ ನಾವು ಅದನ್ನು ಕೈಯಿಂದ ರಕ್ಷಿಸಿಕೊಳ್ಳಲು ನೋಡುತ್ತೇವೆ. ಇಂದ್ರಿಯ ಗಳಿಗಿಂತ ಪ್ರಾಣವು ಪ್ರಿಯ. ಏಕೆಂದರೆ ಯಾವುದೇ ಇಂದ್ರಿಯಕ್ಕೆ ತಗುಲಿದ ರೋಗದಿಂದ ಪ್ರಾಣಕ್ಕೆ ಅಪಾಯ ಎದುರಾದಾಗ ಪ್ರಾಣರಕ್ಷಣೆಗಾಗಿ ಆ ಅಂಗವನ್ನು ಕತ್ತರಿಸಿ ಹಾಕಲು ನಾವು ಹಿಂದೆ ಮುಂದೆ ನೋಡುವುದಿಲ್ಲ. ಪ್ರಾಣಕ್ಕಿಂತ ಮನಸ್ಸು ಪ್ರಿಯ. ಮನುಷ್ಯ ತನ್ನ ವಿಚಾರಗಳಿಗಾಗಿ, ಆದರ್ಶಗಳಿಗಾಗಿ ಪ್ರಾಣವನ್ನೇ ಕೊಡುವುದನ್ನು ನೋಡುತ್ತೇವೆ. ಹೀಗೆ ಅಂತರತಮವಾದ, ಆತ್ಮಕ್ಕೆ ಹತ್ತಿರ ಹತ್ತಿರವಾದ ಅಂಗಗಳು ನಮಗೆ ಹೆಚ್ಚು ಪ್ರಿಯ. ಆತ್ಮ ಅಂತರತಮ. ಆದ್ದರಿಂದ ಆತ್ಮ ನಮಗೆ ಅತ್ಯಧಿಕ ಪ್ರಿಯನು. ಮತ್ತು ಆತ್ಮಸಾಕ್ಷಾತ್ಕಾರದಲ್ಲಿ ಪರಮಾನಂದಪ್ರಾಪ್ತಿಯಾಗುತ್ತದೆ.

ಉಪಸಂಹಾರ: ಜಗತ್ತಿನಲ್ಲಿ ಶಾಶ್ವತ ಸುಖವಿಲ್ಲ, ಸುಖವಿರು ವುದು ಕೇವಲ ಭಗವಂತನಲ್ಲಿ, ಭೂಮದಲ್ಲಿ, ಅದ್ವೈತದಲ್ಲಿ ಎಂಬುದು ಶಾಸ್ತ್ರಗಳ ವಾಣಿ, ವಿದ್ವಾಂಸರ ವಾಣಿ. ನಮ್ಮ ಆತ್ಮ ಸ್ವರೂಪವನ್ನು ಸತ್ ವಸ್ತುವನ್ನು ಜ್ಞಾನ, ಭಕ್ತಿ ಅಥವಾ ಯೋಗ ಮಾರ್ಗದಿಂದ ಸಾಕ್ಷಾತ್ಕರಿಸಿಕೊಂಡು ಪರಮಾನಂದದಲ್ಲಿ ಭಾಗಿಗ ಳಾಗಬೇಕು. ಇದು ಮಾನವ ಜೀವನದ ಗುರಿ. ಅದರಲ್ಲೇ ಮಾನವ ಜೀವನದ ಸಾರ್ಥಕ್ಯವಿದೆ.

ಮುಖಪುಟದ ಹಿನ್ನೆಲೆ

ದ್ವಾ ಸುಪರ್ಣಾ ಸಯುಜಾ ಸಖಾಯಾ
ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯ-
ನಶ್ನನ್ನನ್ಯೋ ಅಭಿಚಾಕಶೀತಿ ॥

ಯಾವಾಗಲೂ ಜೊತೆಯಲ್ಲಿರುವ ಸಖರಾದ ಎರಡು ಪಕ್ಷಿಗಳು ಒಂದೇ ವೃಕ್ಷವನ್ನು ಆಲಿಂಗಿಸಿಕೊಂಡಿವೆ. ಅವು ಎರಡರಲ್ಲಿ ಒಂದು (ಜೀವಾತ್ಮ) ಸವಿಯಾದ ಹಣ್ಣನ್ನು ತಿನ್ನುತ್ತದೆ. ಇನ್ನೊಂದು (ಈಶ್ವರ) ತಿನ್ನದೆ ನೋಡುತ್ತಿದೆ.

(ಮುಂಡಕೋಪನಿಷತ್ತು, ೩.೧.೧)

ಶ್ರೀಮಾತೆಯವರ ಪತ್ರಗಳು - ೧೫

ಅನುವಾದ: ಪ್ರವ್ರಾಜಿಕಾ ಧರ್ಮಪ್ರಾಣಾ

ಪತ್ರ - ೮೩

೨೭ ನೇ ದಿನ, ಜಯರಾಂಬಾಟಿ
೧೩. ೩. ೧೯೧೩

ಶುಭವಾಗಲಿ.

ತಾಯಿ, ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ನಿನಗೆ ನನ್ನ ಆಶೀರ್ವಾದ ಹಾಗೂ ಶೋಕಹರಣನಿಗೆ ಮತ್ತು ಸುಮತಿಗೆ ನನ್ನ ಆಶೀರ್ವಾದ ತಿಳಿಸು. ಇತ್ತೀಚೆಗೆ ರಾಧು ಚೆನ್ನಾಗಿದ್ದಾಳೆ. ಇಲ್ಲಿ ಎಲ್ಲವೂ ಕ್ಷೇಮ. ನನ್ನ ಹಲ್ಲು ನೋವು ವಾಸಿಯಾಗಿದೆ. ನೀವೆಲ್ಲರೂ ಚೆನ್ನಾಗಿರುವಿರಿ ಎಂದು ಆಶಿಸುತ್ತೇನೆ.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಶ್ರೀಮತಿ ಸರಯೂಬಾಲಾ ದೇವಿ
Calcatta ೪/೧ ಮನೋಹರ ಪುಕುರ್ ರೋಡ್
ಕಾಳಿಘಾಟ್, ಕಲ್ಕತ್ತಾ

ಪತ್ರ - ೮೪

೨೩.೩.೧೯೧೩
ಚೈತ್ರ ೮, ಜಯರಾಂಬಾಟಿ
Anur, Hughly

ಶುಭವಾಗಲಿ.

ಮಗೂ, ನಿನ್ನಪತ್ರ ಸಿಕ್ಕಿ ಸಮಾಧಾನವಾಯಿತು. ಕುಲಗುರುವಿಗೆ ವಾಡಿಕೆಯಂತೆ ವರ್ಷಾಶನವನ್ನು ಕೊಡಬೇಕು. ಬೇರೆ ಇನ್ನೇನಾದರೂ ಕೊಡಲು ಸಾಧ್ಯವಾದರೆ ಕೊಡು. ಧನವನ್ನು ಕೊಟ್ಟು ಸಂತುಷ್ಟಿಗೊಳಿಸಲು, ಅಷ್ಟೊಂದು ಧನ ನಿನಗೆ ಎಲ್ಲಿಂದ ಸಿಗುವುದು? ಇಲ್ಲಿ ನಾನು ಚೆನ್ನಾಗಿದ್ದೇನೆ. ನಿನಗೆ ನನ್ನ ಆಶೀರ್ವಾದ ಹಾಗೂ ಸೊಸೆ ಮತ್ತು ಮಕ್ಕಳಿಗೂ ನನ್ನ ಆಶೀರ್ವಾದಗಳನ್ನು ತಿಳಿಸು. ಶ್ರೀ ಠಾಕೂರರು ನಿನಗೆ ಮಂಗಳವನ್ನುಂಟುಮಾಡಲಿ.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
Babu TarakNath Roy Chowdhury
Sub Registrar
Kathiadi , (Dt. Mymensingh)

ಪತ್ರ - ೮೫

೧೪ನೇ ಚೈತ್ರ
ಜಯರಾಂಬಾಟಿ
೨೭.೩.೧೯೧೩

ಶುಭವಾಗಲಿ.

ತಾಯಿ, ನಿನ್ನ ಪತ್ರವು ಸಿಕ್ಕಿ ಸಂತುಷ್ಟಳಾದೆ. ಸದ್ಯ ನಾವೆಲ್ಲರೂ ಚೆನ್ನಾಗಿದ್ದೇವೆ. ನಿನಗೆ ನನ್ನ ಆಶೀರ್ವಾದ. ಶ್ರೀ ಠಾಕೂರರು ನಿನ್ನನ್ನು ಕ್ಷೇಮವಾಗಿ ಇಟ್ಟಿರಲಿ. ನೀವೆಲ್ಲರೂ ಚೆನ್ನಾಗಿರುವಿರೆಂದು ಆಶಿಸುತ್ತಿದ್ದೇನೆ.

ಇತಿ ಆಶೀರ್ವಾದ ನೀಡುತ್ತಿರುವ
ನಿನ್ನ ಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಶೀಮತಿ ಸರಯೂಬಾಲಾ ದೇವಿ
C/O Dr.G.C.Sen
P.O. Meherpur, Dt.Nadia

ಪತ್ರ - ೮೬

೬.೪-೧೯೧೩
ಚೈತ್ರ ೨೧, ಜಯರಾಂಬಾಟಿ

ಶುಭವಾಗಲಿ.

ಮಗೂ, ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ನಿನ್ನ ಹಿಂದಿನ ಪತ್ರಕ್ಕೂ ಉತ್ತರ ಬರೆದಿರುವೆ. ಇಷ್ಟರಲ್ಲಿ ಸಿಕ್ಕಿರಬಹುದು ಅನ್ನಿಸುತ್ತದೆ. ನೀನು ಕಳುಹಿಸಿರುವ ೧೦ ರೂಪಾಯಿ ತಲುಪಿ ಸಂತುಷ್ಟಳಾದೆ. ಇಲ್ಲಿ ಎಲ್ಲವೂ ಕ್ಷೇಮ. ನಾನು ಚೆನ್ನಾಗಿದ್ದೇನೆ. ನಿನಗೆ ನನ್ನ ಆಶೀರ್ವಾದ ಹಾಗೂ ಸೊಸೆ ಮತ್ತು ಮಕ್ಕಳಿಗೂ ನನ್ನ ಆಶೀರ್ವಾದಗಳನ್ನು ತಿಳಿಸು. ಶ್ರೀ ಠಾಕೂರರು ನಿಮಗೆಲ್ಲರಿಗೂ ಮಂಗಳವನ್ನುಂಟುಮಾಡಲಿ. ನೀವೆಲ್ಲರೂ ಕ್ಷೇಮವಾಗಿದ್ದೀರೆಂದು ಆಶಿಸುತ್ತೇನೆ.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಶ್ರೀ ತಾರಕನಾಥ್ ರಾಯ್ ಚೌಧುರಿ
ಸಬ್ - ರೆಜಿಸ್ಟ್ರಾರ್
ಕಥಿಯಾದಿ ಪೋಸ್ಟ್, (ಮೈಮನ್‌ಸಿಂಗ್) (Mymensing)

ಪರಾ ವಿದ್ಯೆ ಯಾವುದು? ಅಪರಾ ವಿದ್ಯೆ ಯಾವುದು?

(ಮುಂಡಕೋಪನಿಷತ್ತಿನ ಕತೆ)

ಸ್ವಾಮಿ ವೀರೇಶಾನಂದ

ಮುಂಡಕೋಪನಿಷತ್ತು ಅಥರ್ವಣವೇದಕ್ಕೆ ಸೇರಿದ್ದು. ಈ ಉಪನಿಷತ್ತು ಆಕಾರದಲ್ಲಿ ಸಣ್ಣದು. ಬ್ರಹ್ಮವಿದ್ಯೆಯೇ ಇದರ ಮುಖ್ಯ ವಿಷಯ. ಬ್ರಹ್ಮವಿದ್ಯೆಯನ್ನು ಪಡೆದುಕೊಳ್ಳಲು ಬೇಕಾದ ಸಾಧನ ಮತ್ತು ಬ್ರಹ್ಮವಿದ್ಯೆಯ ಫಲಗಳನ್ನು ಈ ಉಪನಿಷತ್ತು ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ಶಿಷ್ಯ-ಆಚಾರ್ಯರ ಪ್ರಶ್ನೋತ್ತರದ ರೂಪದಲ್ಲಿ ಉಪನಿಷತ್ತು ಈ ಗಹನ ವಿಷಯವನ್ನು ತಿಳಿಸಿಕೊಡುತ್ತದೆ. ಈ ಕಥೆಯ ಹಂದರ ಹೀಗಿದೆ:



ಬ್ರಹ್ಮ ಅಂದರೆ ಚತುರ್ಮುಖ ಬ್ರಹ್ಮನು ದೇವತೆಗಳಿಗೆಲ್ಲ ಹಿರಿಯನಾದವನು. ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ — ಇವುಗಳಲ್ಲಿ ಅವನು ಎಲ್ಲರನ್ನೂ ಮೀರಿಸಿದ್ದನು. ದೇವತೆಗಳು ಎಂದರೆ ಪ್ರಕಾಶವುಳ್ಳವರು. ಬ್ರಹ್ಮನು ಅವರಿಗೆಲ್ಲ ಮುಖ್ಯನು; ಮೊದಲನೆಯವನಾಗಿ ಭಗವಂತನಿಂದಲೇ ಹೊರತೋರಿಸಿಕೊಂಡವನು. ಅವನೇ ವಿಶ್ವಕ್ಕೆಲ್ಲ ಕರ್ತಾರನು. ಹಾಗೆಯೇ ಅದನ್ನು ಕಾಪಾಡುವವನು ಕೂಡ. ಈ ಚತುರ್ಮುಖ ಬ್ರಹ್ಮನು ಪರಮಾತ್ಮ ವಿದ್ಯೆಯನ್ನು ಅಥರ್ವ ಎಂಬ ತನ್ನ ಹಿರಿಯ ಮಗನಿಗೆ ಉಪದೇಶ ಮಾಡಿದನು. ಇದೇ ಬ್ರಹ್ಮವಿದ್ಯೆ. ಯಾವ ವಿದ್ಯೆಯ ಮೂಲಕ ಸತ್ಯತತ್ತ್ವವೂ, ಅಕ್ಷರವೂ (ಕ್ಷಯವಾಗದ ತತ್ತ್ವ) ಆದ ಬ್ರಹ್ಮತತ್ತ್ವವನ್ನು ಪಡೆದುಕೊಳ್ಳಬಹುದೋ ಅದೇ ಬ್ರಹ್ಮವಿದ್ಯೆ.

ಈ ಬ್ರಹ್ಮವಿದ್ಯೆಯು ಎಲ್ಲ ಇತರ ವಿದ್ಯೆಗಳಿಗೂ ಮೂಲವಾಗಿರುವ ವಿದ್ಯೆ; ಆಶ್ರಯವಾಗಿರುವ ವಿದ್ಯೆ. ಎಲ್ಲ ವಿದ್ಯೆಗಳ ಮೂಲಕ ಯಾವುದನ್ನು ತಿಳಿದುಕೊಳ್ಳಬಹುದೋ, ಅದರ ಸಾರಸರ್ವಸ್ವವೇ, ಮೂಲವೇ ಈ ವಿದ್ಯೆಯ ಮೂಲಕ ತಿಳಿದುಬರುತ್ತದೆ. ಹೀಗಾಗಿ ಇದು ಸರ್ವವಿದ್ಯೆಗಳಿಗೂ ಆಧಾರಭೂತವಾದ ವಿದ್ಯೆಯಾಗಿದೆ. ಇಂಥ ಬ್ರಹ್ಮವಿದ್ಯೆಯನ್ನು ತನ್ನ ಹಿರಿಯ ಮಗನಾದ ಅಥರ್ವಣನಿಗೆ ಚತುರ್ಮುಖ ಬ್ರಹ್ಮನು ಉಪದೇಶಿಸಿದನು. ಈ ಬ್ರಹ್ಮನು ಇಡೀ ಜಗತ್ತಿಗೇ ಸೃಷ್ಟಿಕರ್ತನಾಗಿದ್ದಾನೆ. ಅವನ ಸೃಷ್ಟಿಯಲ್ಲಿ ಮೊದಲು ಹುಟ್ಟಿದವನು ಈ ಅಥರ್ವಣನು. ಇವನಿಗೆ ಮೊದಲ ಬಾರಿಗೆ ಬ್ರಹ್ಮವಿದ್ಯೆಯ ಉಪದೇಶವಾಯಿತು. ಅಥರ್ವಣನು ಅಂಗಿರನೆಂಬುವನಿಗೆ ಇದನ್ನು ಉಪದೇಶಿಸಿದನು. ಅಂಗಿರನು ಭಾರದ್ವಾಜ ಸತ್ಯವಹನಿಗೆ ಇದನ್ನು ಹೇಳಿಕೊಟ್ಟನು. ಭಾರದ್ವಾಜನು ಅಂಗಿರಸನೆಂಬ ಜಿಜ್ಞಾಸುವಿಗೆ ಈ ವಿದ್ಯೆಯನ್ನು ತಿಳಿಸಿಕೊಟ್ಟನು.

ಅಂಗಿರಸನು ಭಾರದ್ವಾಜನಿಗೆ ಕೇವಲ ಶಿಷ್ಯನಲ್ಲ. ಅವನ ಮಗನೇ ಆಗಿದ್ದನು. ಹೀಗಾಗಿ ಇದು ಹಿರಿಯರು ಕಿರಿಯವರಿಗೆ ಹೇಳಿ ಕೊಟ್ಟ ವಿದ್ಯೆ ಎಂದೂ ಆಗುತ್ತದೆ. ಆದ್ದರಿಂದ ಈ ವಿದ್ಯೆಗೆ ಪರಾವರ ವಿದ್ಯೆ ಎಂದು ಹೆಸರು. ಈ ವಿದ್ಯೆಯ ಮಹತ್ವ ಏನು ಗೊತ್ತೆ? ಇದಕ್ಕೆ ಪರಾಪರ ವಿದ್ಯೆ ಎಂದೂ ಹೆಸರು. ಪರವಿದ್ಯೆ ಎಂದರೆ ಪರಬ್ರಹ್ಮ ವಿದ್ಯೆಯಾದ ಜ್ಞಾನ. ಅಪರಾವಿದ್ಯೆ ಎಂದರೆ ಸಗುಣ ಬ್ರಹ್ಮ ಅಥವಾ ಈಶ್ವರನ ಧ್ಯಾನ ಅಥವಾ ಉಪಾಸನೆ. ಪರಂಪರೆಯಲ್ಲಿ ಬಂದ ಈ ಮಹಾವಿದ್ಯೆಯು ಈ ಎರಡು ರೀತಿಯ ವಿದ್ಯೆಗಳನ್ನೂ ಒಳಗೊಂಡಿದೆ.

ಇರಲಿ. ಸಿಂಧೂ ದೇಶವು ವೈದಿಕ ಸಂಸ್ಕೃತಿಯ ಆಗರ. ಇದರಲ್ಲಿ ಶೌನಕನೆಂಬ ಪ್ರಸಿದ್ಧನಾದ ಗೃಹಸ್ಥನೊಬ್ಬನಿದ್ದನು. ಅವನು ಯಜ್ಞಯಾಗಾದಿಗಳನ್ನು ಬಹಳ ನಿಷ್ಠೆಯಿಂದ ಆಚರಿಸುತ್ತಿದ್ದನು. ಗೃಹಸ್ಥರಿಗೆ ವೇದವು ಗೊತ್ತು ಮಾಡಿದ ರೀತಿಯಲ್ಲಿ ಆದರ್ಶ ಜೀವನವನ್ನು ನಡೆಸುತ್ತಿದ್ದನು. ಅವನು ಶಾಸ್ತ್ರಗಳಲ್ಲಿ ಹೇಳಿದ ರೀತಿಯಲ್ಲಿ, ಸಮಿತ್ತಿನ ಕಟ್ಟಿಗೆಯ ತುಂಡುಗಳನ್ನು ಹಿಡಿದುಕೊಂಡು, ವಿನಯದಿಂದ ಅಂಗಿರಸನನ್ನು ಸಮೀಪಿಸಿದನು. ಅವರಿಗೆ ದೀರ್ಘದಂಡ ನಮಸ್ಕಾರ ಮಾಡಿ, ಒಂದು ಮಹತ್ವದ ಪ್ರಶ್ನೆಯನ್ನು ಕೇಳಿದನು. ಭಾರತೀಯ ತತ್ತ್ವಜಿಜ್ಞಾಸೆಯಲ್ಲಿಯೇ ಅತ್ಯಂತ ಗಹನವಾದ ಪ್ರಶ್ನೆಗಳಲ್ಲಿ ಇದೂ ಒಂದು. ಅವನು ಕೇಳಿದ ಪ್ರಶ್ನೆ ಹೀಗಿತ್ತು: ''ಭಗವನ್, ಯಾವುದನ್ನು ಅರಿತುಕೊಂಡರೆ, ಎಲ್ಲವನ್ನೂ ತಿಳಿದುಕೊಂಡಂತೆ ಆಗುತ್ತದೆ?''

ಜಗತ್ತು ನಾಮರೂಪಗಳಿಂದ ಬೇರೆಬೇರೆಯಾಗಿ ತೋರುತ್ತದೆ. ಉದಾಹರಣೆಗೆ ಒಂದೇ ಮಣ್ಣಿನ ಮುದ್ದೆ ಹಲವು ಮಡಕೆಗಳಾಗಿ ತೋರುತ್ತದೆ. ಮಡಕೆಗಳ ಜ್ಞಾನವನ್ನು ವಿಶೇಷ ಜ್ಞಾನ ಎಂದು ಕರೆಯಬಹುದು. ಅಂದರೆ, ಒಂದೊಂದು ವಿಶೇಷ ಪದಾರ್ಥಗಳ

ಜ್ಞಾನ. ಆ ಮಡಕೆಗಳೆಲ್ಲವೂ ಯಾವುದರಿಂದ ಆಗಿದೆಯೋ, ಅದು ಯಾವುದು? ಮಣ್ಣು ತಾನೇ. ಮಣ್ಣಿನ ಜ್ಞಾನವನ್ನು ಪಡೆದು ಕೊಂಡರೆ, ಎಲ್ಲ ಮಡಕೆಗಳ ಜ್ಞಾನವನ್ನೂ ಪಡೆದುಕೊಂಡಂತೆ ಆಗುತ್ತದೆ, ಅಲ್ಲವೆ? ಇಂಥ ಜ್ಞಾನವನ್ನು ಸಾಮಾನ್ಯ ಜ್ಞಾನ ಎನ್ನು ತ್ತಾರೆ. ನಮಗೆ ಜಗತ್ತಿನ ಬಗ್ಗೆ ಇರುವ ವಿಶೇಷ ಜ್ಞಾನ ಭೌತಿಕ ವಿಜ್ಞಾನದಿಂದ ಅಥವಾ ನಮ್ಮ ಇಂದ್ರಿಯಗಳ ಮೂಲಕವೇ ಧಾರಾಳ ವಾಗಿ ದೊರಕುತ್ತದೆ. ಆದರೆ ಈ ಜಗತ್ತಿನ ವಿವಿಧತೆಯ ಆಧಾರ ಭೂತವಾಗಿ ಯಾವುದು ಇರುವುದೋ ಅದರ ಜ್ಞಾನವನ್ನು ಶಿಷ್ಯನು ಇಲ್ಲಿ ಅಪೇಕ್ಷಿಸುತ್ತಿದ್ದಾನೆ. ಜಗತ್ತಿನ ಭೇದಕ್ಕೆಲ್ಲ ಕಾರಣನಾಗಿರು ವವನು ಯಾರಿದ್ದಾನೆಯೋ, ಅವನನ್ನು ತಿಳಿದುಕೊಂಡರೆ ಎಲ್ಲ ವನ್ನು ತಿಳಿದುಕೊಂಡಂತೆ ಆಗುತ್ತದೆ ಅಲ್ಲವೆ? ಅಂಥ ತತ್ತ್ವ ಅದಾವುದು ಎನ್ನುವುದೇ ಈ ಪ್ರಶ್ನೆಯ ಅರ್ಥ. ಈ ಪ್ರಶ್ನೆಯಲ್ಲಿ ಎರಡು ವಿಭಾಗಗಳಿವೆ. ಅಂಥ ಏಕತ್ವರೂಪದ ವಸ್ತು ಇದೆಯೋ ಇಲ್ಲವೋ ಎಂಬುದು ಒಂದು. ಇದೆ ಎಂದಾದರೆ, ಅದು ಏನು, ಅದನ್ನು ತಿಳಿದುಕೊಳ್ಳುವುದು ಹೇಗೆ ಎನ್ನುವುದು ಇನ್ನೊಂದು.

ಅತ್ಯಂತ ಯಶಸ್ವೀ ಗೃಹಸ್ಥನಾದ ಶೌನಕನು ಕೇಳಿದ ಈ ಪ್ರಶ್ನೆಯನ್ನು ಕೇಳಿ ಗುರುವಾದ ಅಂಗಿರಸನು ಬೆರಗಾಗಿ ಹೋದನು; ಶೌನಕನ ಪ್ರಶ್ನೆಯ ಗಹನತೆಯನ್ನು ಕಂಡು ಹಾಗೂ ಜ್ಞಾನವನ್ನು ಪಡೆದುಕೊಳ್ಳಬೇಕೆಂಬ ಅವನ ಆಸಕ್ತಿಯನ್ನು ಕಂಡು ತಲೆದೂಗಿದನು. ಇಷ್ಟಾದರೂ ನೇರವಾಗಿ ಅವನಿಗೆ ಉತ್ತರವನ್ನು ನೀಡಲು ಹೋಗಲಿಲ್ಲ. ಅದಕ್ಕೆ ಬದಲಾಗಿ ಗೃಹಸ್ಥನಾದ ಶೌನಕನು ಈಗಾಗಲೇ ಅನುಸರಿಸುತ್ತಿರುವ ಯಜ್ಞಯಾಗ, ಧ್ಯಾನ — ಇವುಗಳಿಂದ ಕೂಡಿದ ಜೀವನವಿಧಾನದ ಸೀಮಿತತೆಯನ್ನು ಅವನಿಗೆ ಅರಿವು ಮಾಡಿಕೊಡಲು ಪ್ರಯತ್ನಿಸಿದನು. ಇಂಥ ಅಪರಾವಿದ್ಯೆಗಿಂತ ಅಥವಾ ಕೆಳಮಟ್ಟದ ವಿದ್ಯೆಗಿಂತ ಮಿಗಿಲಾದ ಪರಾವಿದ್ಯೆಯಲ್ಲಿಯೇ ಶೌನಕನು ತನ್ನ ಪ್ರಶ್ನೆಯ ಉತ್ತರವನ್ನು ಕಂಡುಕೊಳ್ಳಬೇಕು ಎಂದು ಮನಗಾಣಿಸಿದನು. ಅದಕ್ಕಾಗಿಯೇ, ಅವನು ಹೀಗೆ ಹೇಳುತ್ತಾನೆ: ''ಶೌನಕ. ಎರಡು ವಿದ್ಯೆಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಇದನ್ನು ನಾನು ಹೇಳುತ್ತಿಲ್ಲ. ವೇದಗಳ ಅರ್ಥವನ್ನು ಚೆನ್ನಾಗಿ ಅರಿತವರೇ ಹಾಗೆ ಹೇಳುತ್ತಾರೆ. ಅಂಥವರು ಸತ್ಯವನ್ನು ಸರಿಯಾಗಿ ಅರ್ಥಮಾಡಿಕೊಂಡವರು. ಅವರು ಹೇಳುವ ಪ್ರಕಾರ ಅಂಥ ಎರಡು ರೀತಿಯ ವಿದ್ಯೆಗಳಿವೆ: ಒಂದು ಪರಾವಿದ್ಯೆ; ಇನ್ನೊಂದು ಅಪರಾ ವಿದ್ಯೆ.''

ಎರಡು ವಿದ್ಯೆಗಳ ಸ್ವರೂಪ

ಅಂಗಿರಸನು ಅಪರಾವಿದ್ಯೆಯ ಸ್ವರೂಪವನ್ನು ಹೇಳಲು ಆರಂಭಿಸುತ್ತಾನೆ. ''ಮಗೂ, ಶೌನಕ, ಅಪರಾವಿದ್ಯೆಯೆಂದರೆ ಯಾವುದು ಗೊತ್ತೆ? ನಮ್ಮ ವೈದಿಕ ಸಮಾಜದಲ್ಲಿ ಯಾವುದಕ್ಕೆ ಬಹಳ ಪ್ರಮುಖವಾದ ಸ್ಥಾನವನ್ನು ನೀಡಿದ್ದೇವೆಯೋ, ಅವುಗಳ ಅಧ್ಯಯನವೆಲ್ಲವೂ ಅಪರಾವಿದ್ಯೆಯೇ. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ — ಈ ನಾಲ್ಕು ವೇದಗಳ ಜ್ಞಾನ ಕೂಡ ಅಪರಾವಿದ್ಯೆಯೇ ಆಗಿದೆ. ಇದಲ್ಲದೆ, ಆ ವೇದಗಳ ಅಧ್ಯಯನಕ್ಕೆ ನಮಗೆ ಸಹಾಯ ಮಾಡುವ ಶಿಕ್ಷಾ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷ ಮುಂತಾದ ವೇದಾಂಗಗಳು ಕೂಡ ಅಪರಾವಿದ್ಯೆಯೇ ಎಂದು ಹೇಳಬಹುದು. ಇನ್ನು ಪರಾವಿದ್ಯೆ ಎಂದರೆ ಯಾವುದು ಎಂದು ಕೇಳುವೆಯೇನು? **ಅಥ ಪರಾ ಯಯಾ ತದಕ್ಷರಮ್ ಅಧಿಗಮ್ಯತೇ** — ಯಾವುದರ ಮೂಲಕ ಕ್ಷಯವಿಲ್ಲದ ತತ್ತ್ವವಾದ ಬ್ರಹ್ಮಪ್ರಾಪ್ತಿಯು ಸಾಧ್ಯವಾಗುವುದೋ, ಅದೇ ಪರಾವಿದ್ಯೆ.

''ಇನ್ನು 'ಅಕ್ಷರ' ಎಂದರೆ ಯಾವುದು ಎಂದು ತಿಳಿದುಕೋ. ಬ್ರಹ್ಮವಸ್ತುವನ್ನೇ ಅಕ್ಷರ ಎಂದು ಕರೆಯುವುದು. ಅದು ನೋಡುವುದಕ್ಕೆ, ಚಿಂತಿಸುವುದಕ್ಕೆ ಸಿಲುಕದ ಅತೀಂದ್ರಿಯ ವಸ್ತು. ಇದಕ್ಕೆ ಜಾತಿಗೋತ್ರಗಳು ಇಲ್ಲ. ಏಕೆಂದರೆ ಇದು ಹುಟ್ಟಿರುವಂಥದ್ದೇ ಅಲ್ಲ. ಅಲ್ಲದೆ, ಅದು ಕಣ್ಣುಕಿವಿಗಳಂತೆ ಇಂದ್ರಿಯವೂ ಅಲ್ಲ ; ಕೈಕಾಲುಗಳಂತೆ ದೇಹಾಂಗವೂ ಅಲ್ಲ. ಇದು ನಿತ್ಯವಾದ ವಸ್ತು, ಎಲ್ಲ ಕಡೆ ಇರುವ ಸರ್ವವ್ಯಾಪಿ; ಎಲ್ಲದರ ಅರಿವೂ ಇದೇ ಆಗಿದೆ. ಇದು ಎಲ್ಲದಕ್ಕಿಂತ ಸೂಕ್ಷ್ಮವಾದುದು; ಇದು ಕಳೆಗುಂದದ ಅವ್ಯಯ ವಸ್ತು. ಎಲ್ಲ ಜೀವರಾಶಿಗಳ ಮೂಲಕಾರಣವೇ ಇದು. ತಿಳಿದವರು ಇದರ ಬಗ್ಗೆ ಹೀಗೆ ಹೇಳುತ್ತಾರೆ. ಇಂಥ 'ಅಕ್ಷರ'ವನ್ನು ತಿಳಿದುಕೊಳ್ಳುವುದೇ ಪರಾವಿದ್ಯೆ. ಶೌನಕ, ತಿಳಿಯಿತೆ?''

ಅಕ್ಷರದಿಂದ ಕ್ಷರ

''ಶೌನಕ, ಈ ಅಕ್ಷರ ತತ್ತ್ವವು ಭೂತಯೋನಿಯಾಗಿದೆ. ಅಂದರೆ ಎಲ್ಲ ಜೀವರಾಶಿಗಳಿಗೂ ಕಾರಣವಾಗಿದೆ ಎಂದು ಈಗಾಗಲೇ ನಾನು ಹೇಳಿದೆನಲ್ಲವೆ? ಅದರಿಂದ ಏನೆಲ್ಲವೂ ಹುಟ್ಟುತ್ತವೆ, ಹೇಗೆ ಹುಟ್ಟುತ್ತವೆ ಎಂದು ಸಂಕ್ಷಿಪ್ತವಾಗಿ ಹೇಳುತ್ತೇನೆ, ಕೇಳು. ಜೇಡರ ಹುಳು ತನ್ನ ಬಲೆಯನ್ನು ಕಟ್ಟುತ್ತದೆ. ಹೇಗೆ ಕಟ್ಟುತ್ತದೆ, ಹೇಳು? ಅದು ಬೇರಾವುದೇ ವಸ್ತುವನ್ನು ಬಯಸುವುದಿಲ್ಲ. ಅದೇ ತನ್ನನ್ನು ವಿಸ್ತರಿಸಿಕೊಂಡು, ಜೇಡರ ಬಲೆಯೂ ಆಗಿಬಿಡುತ್ತದೆ. ಹಾಗೆಯೇ ಅದು ತನ್ನ ಬಲೆಯನ್ನು ಹಿಂತೆಗೆದುಕೊಳ್ಳುತ್ತದೆ, ಕೂಡ. ಇನ್ನೊಂದು ದೃಷ್ಟಾಂತವನ್ನೂ ನೀಡಬಹುದು. ಮನುಷ್ಯನ ದೇಹದಿಂದ ದೊಡ್ಡ ಕೂದಲುಗಳು, ಸಣ್ಣ ಕೂದಲುಗಳು ತಾವಾಗಿಯೇ ಹುಟ್ಟುತ್ತವೆ. ಇದೇ ರೀತಿ ಅಕ್ಷರವೆಂಬ ಪರಮಾತ್ಮ ತತ್ತ್ವವು, ಬೇರೆ ಯಾವುದರ ಸಹಾಯವನ್ನೂ ಬಯಸದೆ, ತಾನೇತಾನಾಗಿ ತನ್ನಿಂದಲೇ ಜಗತ್ತೆಲ್ಲವನ್ನೂ ಸೃಷ್ಟಿಸುತ್ತದೆ. ಕಡೆಗೆ ಸೃಷ್ಟಿಸಿದ ಎಲ್ಲವನ್ನೂ ತನ್ನಲ್ಲಿಯೇ ವಿಲೀನ ಮಾಡಿಕೊಳ್ಳುತ್ತದೆ. ಈ ಸೃಷ್ಟಿಕ್ರಮದಲ್ಲಿ ಒಂದು ಗೊತ್ತುಪಡಿಸಿದ ಕ್ರಮವಿದೆ. ಅದನ್ನು ಹೇಳುತ್ತೇನೆ, ಕೇಳು.

''ಅಕ್ಷರವಾದ ಬ್ರಹ್ಮವು ತಾನು ಸೃಷ್ಟಿಯನ್ನು ಮಾಡಬೇಕು ಎಂಬ ಇಚ್ಛೆಯನ್ನು ತಾಳುತ್ತದೆ. ಅದೇ ಸೃಷ್ಟಿಜ್ಞಾನ. ಬೀಜವು ಅಂಕುರವನ್ನು ಉಂಟುಮಾಡುವಾಗ ಉಬ್ಬುತ್ತದೆ ತಾನೆ? ಅದೇ ರೀತಿ, ಸೃಷ್ಟಿಮಾಡುವ ಅರಿವಿನಿಂದ ಅಥವಾ ಸಂಕಲ್ಪದಿಂದ ಕೂಡಿದ ಬ್ರಹ್ಮವು ದೊಡ್ಡದಾಗುತ್ತದೆ, ದಪ್ಪವಾಗುತ್ತದೆ. ಇಲ್ಲಿ ಜ್ಞಾನ

ಎಂದರೆ ಏನು ಗೊತ್ತೆ? ಬ್ರಹ್ಮವು ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರ — ಇವುಗಳನ್ನು ಮಾಡುವ ಸಾಮರ್ಥ್ಯವನ್ನು ಹೊಂದಿದೆ; ಅದೇ ರೀತಿ ಅದನ್ನು ಮಾಡುವ ಜ್ಞಾನವನ್ನೂ ಪಡೆದುಕೊಂಡಿದೆ. ಇದನ್ನೇ ಜ್ಞಾನ ಎಂದು ಕರೆಯುವುದು. ಇಂಥ ಬ್ರಹ್ಮವು ಅವ್ಯಾಕೃತವನ್ನು ಉಂಟುಮಾಡುತ್ತದೆ. ಅವ್ಯಾಕೃತ ಎಂದರೆ ಜಗತ್ತು ನಾಮರೂಪಗಳಾಗಿ ಹೊರತೋರುವುದಕ್ಕೆ ಮುಂಚಿನ ಅವುಗಳ ಸೂಕ್ಷ್ಮಸ್ಥಿತಿ. ಬೀಜದಲ್ಲಿ ಮುಂದೆ ಬೆಳೆಯುವ ಹೆಮ್ಮರವು ಸೂಕ್ಷ್ಮರೂಪದಲ್ಲಿ ಇರುತ್ತದೆ, ಅಲ್ಲವೆ? ಹಾಗೆಯೇ ಇದು ಕೂಡ.

''ಇಂಥ ಅವ್ಯಾಕೃತದಿಂದ ಹಿರಣ್ಯಗರ್ಭವು ಹುಟ್ಟುತ್ತದೆ. ಹಿರಣ್ಯಗರ್ಭವೆಂದರೆ ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಗಳಿಂದ ಕೂಡಿಕೊಂಡು, ಅಖಂಡ ಜಗತ್ತಿನ ವೈವಿಧ್ಯಗಳನ್ನು ಒಳಗೊಂಡ, ಇಡೀ ಸೃಷ್ಟಿಯ ಸಾಮಾನ್ಯರೂಪ. ಜಗತ್ತಿನ ಸೃಷ್ಟಿಗೆ ಕಾರಣೀಭೂತವಾದ ಅವಿದ್ಯೆಯಿಂದ ಕಾಮವು ಹುಟ್ಟುತ್ತದೆ. ಕಾಮದಿಂದ ಕರ್ಮವು ಜನಿಸುತ್ತದೆ. ಕರ್ಮದಿಂದ ಎಲ್ಲ ಬಗೆಯ ಜೀವಿಗಳು ಹುಟ್ಟುತ್ತವೆ. ಹಿರಣ್ಯಗರ್ಭನು ಈ ಅವಿದ್ಯೆ-ಕಾಮ-ಕರ್ಮದ ಬೀಜರೂಪನಾಗಿ ಇರುವವನು. ಅವನಿಂದಲೇ ಅವೆಲ್ಲವೂ ಮೂಡುತ್ತವೆ. ಹಿರಣ್ಯಗರ್ಭನಿಂದ ಅತ್ಯಂತ ಸೂಕ್ಷ್ಮವಾದ ಸೃಷ್ಟಿಯಾದ ಮನಸ್ಸು ತಲೆದೋರುತ್ತದೆ. ಮನಸ್ಸು ಎಂದರೆ ಸಂಕಲ್ಪ, ವಿಕಲ್ಪ, ಸಂಶಯ, ನಿರ್ಣಯ ಮುಂತಾದ ರೂಪಗಳನ್ನು ತಾಳುವ ತತ್ತ್ವ. ಇದರಿಂದ ಪಂಚಭೂತಗಳು ಹುಟ್ಟುತ್ತವೆ. ಪಂಚಭೂತಗಳನ್ನು ಋಷಿಗಳು ಸತ್ಯ ಎಂದು ಕರೆಯುತ್ತಾರೆ. ಈ ಜಗತ್ತು ಸತ್ಯವಾದರೆ, ಪರಮಾತ್ಮನು ಸತ್ಯದ ಸತ್ಯ (ಸತ್ಯಸ್ಯ ಸತ್ಯ). ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವಿ — ಈ ಪಂಚಭೂತಗಳಿಂದ ಭೂಃ ಎಂದು ಮೊದಲಾಗುವ ಏಳು ಲೋಕಗಳು ಹುಟ್ಟುತ್ತವೆ. ಈ ಲೋಕಗಳಲ್ಲಿ ಮನುಷ್ಯ ಮುಂತಾದ ಪ್ರಾಣಿಗಳು ಹುಟ್ಟುತ್ತಾರೆ. ಮನುಷ್ಯರಲ್ಲಿ ವರ್ಣಾಶ್ರಮ ಮೊದಲಾದ ಸಾಮಾಜಿಕ ವ್ಯವಸ್ಥೆಗಳು ಉಗಮವಾಗುತ್ತವೆ. ಇಂಥ ಸಾಮಾಜಿಕ ವ್ಯವಸ್ಥೆಯು ಒಬ್ಬೊಬ್ಬ ಜೀವಿಯೂ ಮಾಡುವ ಕರ್ಮವನ್ನು ಪ್ರೇರೇಪಿಸುತ್ತದೆ. ಕರ್ಮಗಳು ಫಲವನ್ನು ನೀಡುತ್ತವೆ. ಕರ್ಮಗಳು ಇರುವ ತನಕ ಫಲಗಳು ಇದ್ದೇ ಇರುತ್ತವೆ. ಹೀಗೆ ಇಡೀ ವಿಶ್ವವ್ಯವಸ್ಥೆಯು ಅಕ್ಷರವೆಂಬ ಹೆಸರಿನ ಬ್ರಹ್ಮತತ್ತ್ವದಿಂದ ಒಡಮೂಡುತ್ತದೆ.''

ಅಂಗಿರಸರು ಶೌನಕನಿಗೆ ತಾವು ಹೇಳಿದುದರ ಸಾರಾಂಶವನ್ನು ತಿಳಿಹೇಳುತ್ತಾರೆ: ''ಮಗು, ಅಕ್ಷರವೆಂಬ ಬ್ರಹ್ಮವು ಈ ಜಗತ್ತೆಲ್ಲವೂ ಆಗಿ ಪರಿಣಮಿಸಿರುವುದರಿಂದ ಸರ್ವಜ್ಞನು. ಅವನು ಎಲ್ಲವನ್ನೂ ತಿಳಿದವನು. ಹಾಗೆಯೇ ಪ್ರತಿಯೊಂದನ್ನೂ ಅರಿತವನು. ಅವನು ಮಾಡುವ ಸೃಷ್ಟಿಕ್ರಿಯೆಗೆ ಜ್ಞಾನರೂಪವಾಗಿರುವ ತಪಸ್ಸೇ ಮೂಲವಾಗಿರುತ್ತದೆ. ಅಂದರೆ ಮನುಷ್ಯರಂತೆ ಪ್ರಯತ್ನಪೂರ್ವಕವಾಗಿ ಅವನು ತಪಸ್ಸನ್ನು ಮಾಡುವುದಿಲ್ಲ. ಸೃಷ್ಟಿಯ ಬಗೆಗಿನ ಜ್ಞಾನವು ಅವನಲ್ಲಿ ಈಗಾಗಲೇ ಸುಪ್ತವಾಗಿರುತ್ತದೆ. ಅದರಿಂದಲೇ ಸೃಷ್ಟಿಯ ಸಂಕಲ್ಪವನ್ನು ಅವನು ಮಾಡಿದಾಗ, ತಾನೇತಾನಾಗಿ ಸೃಷ್ಟಿಕಾರ್ಯವು ಆರಂಭವಾಗುತ್ತದೆ. ಇದಕ್ಕಾಗಿ ಅವನು ಯಾವುದೇ ಪ್ರಯತ್ನವನ್ನೂ ಮಾಡುವ ಆವಶ್ಯಕತೆ ಇರುವುದಿಲ್ಲ. ಇಂಥ ಸರ್ವಜ್ಞನಿಂದ ಕಾರ್ಯಬ್ರಹ್ಮ ಎನ್ನಿಸಿದ ಹಿರಣ್ಯಗರ್ಭ ತತ್ತ್ವವು ಹುಟ್ಟುತ್ತದೆ. ಅವನಿಂದ ವಿವಿಧ ವಸ್ತುಗಳ ಮೂಲವಾದ ಹೆಸರು ಮತ್ತು ರೂಪಗಳು ಹುಟ್ಟುತ್ತವೆ. ತದನಂತರ, ಆಹಾರವಿಧಾನಗಳಾದ ಭತ್ತ, ಜವೆ ಮುಂತಾದ ಧಾನ್ಯಗಳ ಉತ್ಪತ್ತಿಯಾಗುತ್ತದೆ. ಈ ಅನ್ನದ ಸಹಾಯದಿಂದಲೇ ಜೀವಿಗಳು ಜನಿಸುವುದು.''

ಅಪರಾವಿದ್ಯೆಯ ಗತಿ ಯಾವುದು?

ಇಷ್ಟು ಪರಾವಿದ್ಯೆಯ ವಿಷಯ. ಇನ್ನುಮುಂದೆ ಯಜ್ಞಯಾಗಾದಿಗಳ ವಿವರಗಳನ್ನು ಒಳಗೊಂಡ ಅಪರಾ ವಿದ್ಯೆಯನ್ನು ಗುರುವು ವಿವರಿಸಲು ಆರಂಭಿಸುತ್ತಾನೆ. ಉಪನಿಷತ್ತಿನ ಮುಖ್ಯ ವಿಷಯವು ಪರಾವಿದ್ಯೆಯೇ. ಆದರೆ ಅಪರಾವಿದ್ಯೆಯನ್ನು ಕೂಡ ವಿವರಿಸಿರುವುದರಲ್ಲಿ ಒಂದು ಉದ್ದೇಶವಿದೆ. ಅಪರಾವಿದ್ಯೆಯು ಯಾವುದನ್ನು ಕಲಿಸುತ್ತದೆ? ಕರ್ತೃ, ಕ್ರಿಯೆ, ಕ್ರಿಯೆಗಳ ಸಾಧನ, ಕ್ರಿಯೆಯಿಂದ ಉಂಟಾಗುವ ಫಲ — ಇವುಗಳಿಗಷ್ಟೇ ಅದು ಸೀಮಿತವಾಗಿದೆ. ಅದು ಮುಕ್ತಿಪ್ರಾಪ್ತಿಗೆ ಅವಶ್ಯವಾದ ಆತ್ಮಜ್ಞಾನವನ್ನು ಉಪದೇಶಿಸುವುದಿಲ್ಲ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಹುಟ್ಟುಸಾವುಗಳ ಚಕ್ರಕ್ಕೆ ಕಾರಣವಾದ (ಸಂಸಾರಚಕ್ರ) ಕರ್ಮಗಳ ವಿಧಾನವನ್ನು ಬೋಧಿಸುವುದಕ್ಕಷ್ಟೇ ಅಪರಾವಿದ್ಯೆಯು ಸೀಮಿತವಾಗಿದೆ. ಈ ವಿದ್ಯೆಯ ವಿಷಯವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ದುಃಖವನ್ನು ಮಾತ್ರವೇ ಅನುಭವಿಸಬೇಕಾಗುತ್ತದೆ. ಈ ಸಂಸಾರದಲ್ಲಿ ಸುಖದ ಲೇಶಮಾತ್ರವೂ ಇಲ್ಲ. ಇದನ್ನು ಸಾಧಕನಿಗೆ ಮನದಟ್ಟು ಮಾಡಿಕೊಡಲು, ಗುರುವಾದ ಅಂಗಿರಸನು ಶಿಷ್ಯನಾದ ಶೌನಕನಿಗೆ ಸಂಸಾರ ಗತಿಯೇ ಲಕ್ಷ್ಯವಾಗುಳ್ಳ ಅಪರಾ ವಿದ್ಯೆಯನ್ನು ಕೂಡ ಸಂಕ್ಷಿಪ್ತವಾಗಿ ಬೋಧಿಸುತ್ತಾನೆ. ಅವುಗಳ ಕ್ಷಣಿಕತೆಯನ್ನೂ, ಅರ್ಥಹೀನತೆಯನ್ನೂ ಆ ಮೂಲಕ ಶಿಷ್ಯನಿಗೆ ಮನಗಾಣಿಸುತ್ತಾನೆ.

ಲೋಕಗಳಲ್ಲಿ ಹಲವು ಹಂತಗಳು ಇರುತ್ತವೆ. ಅವುಗಳನ್ನು ಪುಣ್ಯಕರ್ಮಗಳನ್ನು ಮಾಡಿ ಸಂಪಾದಿಸಿಕೊಳ್ಳಬಹುದು. ಅಂಥ ಕರ್ಮಗಳು ಹಲವು ವಿಧವಾಗಿವೆ. ವೇದಗಳಲ್ಲಿ ಅವುಗಳನ್ನು ಉಪದೇಶಿಸಲಾಗಿದೆ. ಅವುಗಳನ್ನು ಸತ್ಯಕಾಮರಾಗಿ ನಾವು ಆಚರಿಸಬೇಕು. ಸತ್ಯಕಾಮನೆಂದರೆ, ಕರ್ಮಫಲದಲ್ಲಿ ಆಸಕ್ತಿಯನ್ನು ಹೊಂದಿರುವವನು ಎಂದರ್ಥ. ನಾವು ಸ್ವರ್ಗ ಮುಂತಾದ ಫಲಗಳನ್ನು ಪಡೆಯಲು ಬಯಸುವುದಾದರೆ ಕರ್ಮಗಳನ್ನು ಶ್ರದ್ಧೆಯಿಂದ ಮಾಡಬೇಕು. ಈ ಕರ್ಮಗಳಲ್ಲೆಲ್ಲ ಮೊದಲನೆಯದು ಅಗ್ನಿಹೋತ್ರ. ಅದನ್ನು ಗುರುವು ಶಿಷ್ಯನಿಗೆ ವಿವರಿಸಿ ಹೇಳುತ್ತಾರೆ. ಈ ಕರ್ಮಗಳನ್ನು ಮಾಡುವಾಗ ಹಲವಾರು ಅಡಚಣೆಗಳು ಉಂಟಾಗಲು ಸಾಧ್ಯ. ವಿಸ್ತಾರವಾಗಿರುವ ಅವುಗಳನ್ನು ಚಾಚೂ ತಪ್ಪದೆ ಮಾಡುವುದು ಬಹಳ ಕಷ್ಟ. ಅಲ್ಲದೆ ಈ ಕರ್ಮಗಳನ್ನು ಹೀಗೆಯೇ ಮಾಡಬೇಕು, ಈ ಸಮಯದಲ್ಲಿಯೇ ಮಾಡಬೇಕು, ಈ ಬಗೆಯ ಪರಿಕರಗಳಿಂದಲೇ ಮಾಡಬೇಕು ಎಂಬ ನಿಬಂಧನೆ

ಗಳು ಹಲವಾರು ಇವೆ. ಹೀಗಾಗಿ ಕರ್ಮಗಳನ್ನು ಮಾಡುವುದು ಅತಿಕಷ್ಟ. ಅವುಗಳನ್ನು ಯಶಸ್ವಿಯಾಗಿ ಮಾಡಿದರೆ, ಹೆಚ್ಚು ಹೆಚ್ಚು ಉನ್ನತ ಲೋಕಗಳನ್ನು ಪಡೆಯಬಹುದು. ಆದರೆ ಆ ಲೋಕಗಳಲ್ಲಿ ಶಾಶ್ವತವಾಗಿ ಇರಲು ಸಾಧ್ಯವೇ ಇಲ್ಲ. ಕರ್ಮದ ಪುಣ್ಯಫಲ ತೀರಿದೊಡನೆ, ಮತ್ತೆ ಭೂಲೋಕಕ್ಕೆ ಮರಳಿ ಬರಲೇಬೇಕಾಗುತ್ತದೆ.

ಅನಂತರ, ಕರ್ಮಗಳನ್ನು ಮಾಡಲು ಸಾಧನವಾದ ಅಗ್ನಿಯ ಬಗ್ಗೆ ಅಂಗಿರಸನು ಹೇಳಿಕೊಡುತ್ತಾನೆ. ಈ ಅಗ್ನಿಗೆ ಕಾಲೀ, ಕರಾಲೀ, ಮನೋಜವೆ, ಸುಲೋಹಿತೆ ಸುಧೂಮ್ರವರ್ಣೆ, ಸ್ಫುಲಿಂಗಿನೀ, ವಿಶ್ವರುಚಿ ಎಂಬ ಏಳು ನಾಲಗೆಗಳು. ಈ ಏಳು ನಾಲಗೆಗಳಿಂದ ಕೂಡಿ ಹೊಳೆಯುತ್ತಿರುವ ಅಗ್ನಿಯನ್ನು ಮುಂದಿಟ್ಟುಕೊಂಡು, ಕಾಲಕ್ಕೆ ಸರಿಯಾಗಿ ಕರ್ಮವನ್ನು ಮಾಡಬೇಕು; ಆಹುತಿಗಳನ್ನು ಅಗ್ನಿಗೆ ನೀಡಬೇಕು. ಅವನು ಮರಣ ಹೊಂದಿದ ಮೇಲೆ ಆ ಆಹುತಿಗಳೇ ಸೂರ್ಯರಶ್ಮಿಗಳಾಗಿ ಅಂಥ ಸಾಧಕನನ್ನು, ದೇವತಾಧಿಪತಿಯಾದ ಇಂದ್ರನ ಬಳಿಗೆ ಕರೆದುಕೊಂಡು ಹೋಗುತ್ತವೆ. ಇದನ್ನು ಕಾವ್ಯಮಯವಾಗಿ ಗುರುವು ಹೀಗೆ ವಿವರಿಸುತ್ತಾನೆ: ಯಜಮಾನನು ಯಜ್ಞದಲ್ಲಿ ನೀಡಿದ ಆಹುತಿಗಳೇ ಸೂರ್ಯರಶ್ಮಿಗಳಾಗಿ ಪರಿಣಮಿಸುತ್ತವೆ. ಹೊಳೆಯುತ್ತಿರುವ ಅವುಗಳು ಒಳ್ಳೆಯ ಹೊಗಳಿಕೆಯ ಮಾತುಗಳನ್ನು ಆಡುತ್ತ, ಯಜಮಾನನನ್ನು ಚೆನ್ನಾಗಿ ಮರ್ಯಾದೆ ಮಾಡುತ್ತ, ಸ್ವರ್ಗಲೋಕಕ್ಕೆ ಕರೆದುಕೊಂಡು ಹೋಗುತ್ತವೆ.

ಗುರುಗಳು ಮುಂದುವರಿದು ಹೇಳುತ್ತಾರೆ: ''ಆದರೆ, ಶೌನಕನೇ, ನೆನಪಿಡು. ಜ್ಞಾನರಹಿತವಾದ ಈ ಕರ್ಮಕ್ಕೆ ಅನಿತ್ಯವಾದ ಲೋಕಗಳನ್ನು ಹೋಗಿ ಸೇರುವುದಷ್ಟೇ ಫಲ. ಅದಕ್ಕಿಂತ ಹೆಚ್ಚು ಯಾವ ಫಲವೂ ಅದಕ್ಕೆ ದೊರಕುವುದಿಲ್ಲ. ಇದನ್ನೇ ಸಂಸಾರ ಅಂದರೆ, ಅವಿದ್ಯೆ-ಕಾಮ-ಕರ್ಮಗಳಿಂದ ಹುಟ್ಟಿದ ಲೋಕಗಳು ಎನ್ನುವುದು. ಅವುಗಳಲ್ಲಿ ಯಾವುದೇ ತಿರುಳು ಇಲ್ಲ. ಇವು ಹಗುರವಾದಂಥವು. ಇವುಗಳಲ್ಲಿ ಯಾವ ದೃಢತೆಯೂ ಇಲ್ಲ. ಕರ್ಮ, ಕರ್ಮಫಲ — ಈ ಎರಡೂ ನಾಶವಾಗುವ ಸ್ವಭಾವ ಉಳ್ಳವು. ಹೀಗಾಗಿ ಈ ಕರ್ಮವೇ ಶ್ರೇಯಸ್ಸಿಗೆ ಸಾಧನವೆಂದು ತಿಳಿದುಕೊಳ್ಳಬೇಡ. ಹಾಗೆ ತಿಳಿದುಕೊಳ್ಳುವ ಮೂಢರು ಅವಿವೇಕಿಗಳು. ಅಂಥವರು ಸ್ವಲ್ಪಕಾಲದವರೆಗೆ ಸ್ವರ್ಗದಲ್ಲಿ ಇರುತ್ತಾರೆ. ಮತ್ತೆ ಮರ್ತ್ಯಲೋಕಕ್ಕೆ ತಿರುಗಿ ಬರುತ್ತಾರೆ. ಮತ್ತೆ ಹುಟ್ಟು-ಸಾವುಗಳ ಚಕ್ರದಲ್ಲಿ ಸಿಕ್ಕಿಬೀಳುತ್ತಾರೆ. ಅವಿದ್ಯೆಯಲ್ಲಿ ಸಿಕ್ಕಿಹಾಕಿಕೊಂಡಿರುವ ಅವರು ತಾವೇ ಧೀರರು, ಪಂಡಿತರು ಎಂದು ತಪ್ಪಾಗಿ ತಿಳಿಯುತ್ತಾರೆ. ಕುರುಡನೊಬ್ಬ ಮತ್ತೊಬ್ಬ ಕುರುಡನಿಗೆ ಮಾರ್ಗದರ್ಶನ ಮಾಡುವಂತೆ, ಅವರು ಇತರರಿಗೆ ಉಪದೇಶಿಸಲು ಪ್ರಯತ್ನಿಸುತ್ತಾರೆ. ಆದರೆ ತಾವೇ ಸಂಸಾರಚಕ್ರದಲ್ಲಿ ಬಿದ್ದು ತೊಳಲಾಡುತ್ತಾರೆ.

''ಇದಕ್ಕೆ ವಿರುದ್ಧವಾಗಿ, ಕುಟುಂಬವನ್ನು ತ್ಯಜಿಸಿ ವಾನಪ್ರಸ್ಥರಾಗಿರುವ ಸದ್ಗೃಹಸ್ಥರು ಉಪಾಸನೆ ಮತ್ತು ಕರ್ಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಅವರು ಧ್ಯಾನದ ಮೂಲಕ ತಮ್ಮ ಇಂದ್ರಿಯಗಳನ್ನು ನಿಯಂತ್ರಿಸುತ್ತಾರೆ. ಹೀಗಾಗಿ ಅವರು ತಮ್ಮ ಮನಸ್ಸನ್ನು ಬಹಳ ಶಾಂತವಾಗಿ ಇಟ್ಟುಕೊಂಡಿರುತ್ತಾರೆ; ಭಿಕ್ಷೆಯಿಂದ ತಮ್ಮ ಜೀವನಯಾಪನೆಯನ್ನು ಮಾಡಿಕೊಂಡಿರುತ್ತಾರೆ. ಹೀಗೆ ಕರ್ಮ ಮತ್ತು ಉಪಾಸನೆಗಳನ್ನು ತಮ್ಮ ಜೀವನವಿಧಾನದಲ್ಲಿ ಅಳವಡಿಸಿಕೊಂಡಿರುವ ವಾನಪ್ರಸ್ಥಿಗಳು ತಮ್ಮ ಪುಣ್ಯಪಾಪ ಕರ್ಮಗಳನ್ನು ಸವೆಸಿಕೊಂಡು, ಉತ್ತರಾಯಣ ಮಾರ್ಗದ ಮೂಲಕ ಸಂಸಾರದಲ್ಲಿ ಅತ್ಯಂತ ಶ್ರೇಷ್ಠ ಗತಿಯಾದ ಸತ್ಯಲೋಕವನ್ನು ಅಥವಾ ಹಿರಣ್ಯಗರ್ಭ ಲೋಕವನ್ನು ಹೋಗಿ ಸೇರುತ್ತಾರೆ. ಈ ಸ್ಥಿತಿಯು ಪರಮಾರ್ಥ ಮೋಕ್ಷವಲ್ಲ. ಆದರೆ ಹಿರಣ್ಯಗರ್ಭ ಲೋಕವನ್ನು ತಲುಪಿದವರು ಮತ್ತೆ ಕೆಳಗಿನ ಲೋಕಗಳಿಗೆ ಬರುವುದಿಲ್ಲ. ಕ್ರಮಮುಕ್ತಿಯ ಮೂಲಕ ಅವರು ಮುಕ್ತಿಯನ್ನೇ ಪಡೆಯುತ್ತಾರೆ.''

ಪರಾವಿದ್ಯೆಯ ಗತಿ ಯಾವುದು?

''ಆದರೆ ಕರ್ಮಸಂನ್ಯಾಸಿಯ ಗತಿಯು ಇನ್ನೂ ಉತ್ತಮವಾದುದು. ಇದೇ ವೇದಾಂತದ ಆದರ್ಶ; ಇದೇ ಉಪನಿಷತ್ತುಗಳ ಧ್ಯೇಯ. ಅಂತಹ ಸಂನ್ಯಾಸಿಯು ಬ್ರಹ್ಮಜ್ಞಾನದಲ್ಲಿ ನಿಷ್ಠನಾಗಿರುವವನು. ಅವನು ಹಿರಣ್ಯಗರ್ಭ ಲೋಕದವರೆಗೂ ಇರುವ ಎಲ್ಲ ಲೋಕಗಳನ್ನೂ ಪರೀಕ್ಷಿಸಿ ನೋಡುತ್ತಾನೆ. ಅವೆಲ್ಲವೂ ಅನಿತ್ಯವಾದ ಕರ್ಮದಿಂದಲೇ ಆಗಿರುವಂಥವು ಎಂದು ಮನನ ಮಾಡಿ ನಿಷ್ಕರ್ಷೆಗೆ ಬರುತ್ತಾನೆ. ಅಶಾಶ್ವತವಾದ ಕರ್ಮಗಳ ಫಲವಾದ ಲೋಕಗಳು ಕೂಡ ಅನಿತ್ಯವಾದುವು ಎಂದು ಅವನು ಮನಗಾಣುತ್ತಾನೆ. ನ ಅಸ್ತಿ, ಅಕೃತಃ ಕೃತೇನ — ಮಾಡಲ್ಪಡದೆ ಇರುವುದು (ಅಶಾಶ್ವತವಾದುದು) ಮಾಡುವುದರಿಂದ (ಕರ್ಮದಿಂದ) ಎಂದಿಗೂ ದೊರಕುವುದಿಲ್ಲ ಎಂಬ ಪರಿಜ್ಞಾನ ಅವನಿಗೆ ಬರುತ್ತದೆ. ಶಾಶ್ವತವಾದುದನ್ನು ತಿಳಿದುಕೊಳ್ಳಬೇಕು ಎಂಬ ಪ್ರಬಲವಾದ ಇಚ್ಛೆ ಅವನಿಗೆ ಉಂಟಾಗುತ್ತದೆ. ಅನಿತ್ಯವಾದ ಸಂಸಾರ ಜೀವಿತವನ್ನು ಅವನು ತ್ಯಾಗ ಮಾಡುತ್ತಾನೆ. ವೈರಾಗ್ಯಮೂರ್ತಿಯಾದ ಅವನು ಬ್ರಹ್ಮವಿದ್ಯೆಯನ್ನು ಪಡೆದುಕೊಳ್ಳುವುದಕ್ಕಾಗಿ ಗುರುವಿನ ಹತ್ತಿರ ಹೋಗುತ್ತಾನೆ. ಹಾಗೆ ಹೋಗುವಾಗ, ಸಮಿತ್ತುಗಳನ್ನು (ಸಣ್ಣ ಕಟ್ಟಿಗೆಯ ತುಂಡುಗಳು) ಕೈಯಲ್ಲಿ ಹಿಡಿದುಕೊಂಡು ಹೋಗುತ್ತಾನೆ. ಇದು ಅವನ ವಿನಯದ ದ್ಯೋತಕವಾಗಿದೆ. ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವಿನ ಬಳಿಗೆ ಹೀಗೆ ವಿಧಿಯ ಪ್ರಕಾರ ಅವನು ಬರುತ್ತಾನೆ. ತನ್ನ ವಿನಯ, ಶ್ರದ್ಧೆ ಮತ್ತು ವೈರಾಗ್ಯ ಭಾವನೆಗಳಿಂದ ಅವನು ಗುರುವಿನ ಮನಸ್ಸನ್ನು ಪ್ರಸನ್ನಗೊಳಿಸಿಕೊಳ್ಳುತ್ತಾನೆ. ತದನಂತರ, ಪರತತ್ತ್ವದ ಬಗ್ಗೆ ಅವನನ್ನು ಪ್ರಶ್ನಿಸುತ್ತಾನೆ.

''ಗುರುವು ಅಂಥ ಅರ್ಹತೆಯುಳ್ಳ ಶಿಷ್ಯನಿಗೆ ಉಪದೇಶ ಮಾಡಲೇಬೇಕು. ಹಾಗೆ ಮಾಡುತ್ತಾನೆ, ಕೂಡ. ಏಕೆಂದರೆ ಶಿಷ್ಯನ ಮನಸ್ಸು ಕಾಮ-ಕ್ರೋಧ ರಹಿತವಾಗಿ, ಪ್ರಶಾಂತವಾಗಿರುತ್ತದೆ. ಇಂದ್ರಿಯಗಳನ್ನು ನಿಯಂತ್ರಣ ಮಾಡಿಕೊಂಡಿರುತ್ತಾನೆ. ಅಂಥ ಶಿಷ್ಯನಿಗೆ ಗುರುವು ಬ್ರಹ್ಮವಿದ್ಯೆಯನ್ನು ಉಪದೇಶಿಸುತ್ತಾನೆ. ಮಗೂ, ಬ್ರಹ್ಮವಿದ್ಯೆ ಎಂದರೇನು ತಿಳಿದಿದೆಯೇನು? ಯಾವುದರಿಂದ ಪರ

ಮಾರ್ಥವಾದ, ಚ್ಯುತಿಯಿಲ್ಲದ, ಅಕ್ಷರವಾದ ಬ್ರಹ್ಮತತ್ತ್ವವನ್ನು ತಿಳಿದುಕೊಳ್ಳಬಹುದೋ ಅದೇ ಬ್ರಹ್ಮವಿದ್ಯೆ.


''ಮಗೂ, ಶೌನಕ. ಹಿಂದಿನ ಆಚಾರ್ಯರು ಉಪದೇಶಿಸಿರುವ ಈ ಬ್ರಹ್ಮವಿದ್ಯೆಯನ್ನೇ ನಾನು ನಿನಗೆ ಈಗ ಹೇಳುತ್ತಿದ್ದೇನೆ. ಜಾಗರೂಕತೆಯಿಂದ ಆಲಿಸಿ ತಿಳಿದುಕೋ. ಅಕ್ಷರವೆಂಬ ಮೂಲದಿಂದಲೇ ಇಡೀ ಜಗತ್ತು ಮೈದಳೆಯುವುದು ಎಂದು ನಾನು ಹೇಳುತ್ತಲಿದ್ದೆನಷ್ಟೇ. ಅದರ ರಹಸ್ಯವನ್ನು ಹೇಳುತ್ತೇನೆ ಕೇಳು. ಬೆಂಕಿ ಚೆನ್ನಾಗಿ ಹೊತ್ತಿ ಉರಿಯುತ್ತಿರುವುದನ್ನು ಭಾವಿಸಿಕೋ. ಅದರಿಂದ ಸಾವಿರಾರು ಕಿಡಿಗಳು ಹೊರಹೊಮ್ಮುತ್ತಿರುತ್ತವೆ. ಇದೇ ರೀತಿ, ಅಕ್ಷರ ಅಥವಾ ಬ್ರಹ್ಮನಿಂದ ವಿಧವಿಧವಾದ ದೇಹಗಳನ್ನು ಧರಿಸಿರುವ ಜೀವಿಗಳು ಹುಟ್ಟುತ್ತವೆ. ಕಡೆಗೆ ಅವನಲ್ಲಿಯೇ ವಿಲೀನವಾಗಿ ಹೋಗುತ್ತವೆ. ಆಕಾಶ ಒಂದೇ. ಆದರೆ ಗಡಿಗೆ, ಕುಡಿಕೆ – ಮುಂತಾದ ಉಪಾಧಿಗಳಿಂದ ಚಿಕ್ಕ ಆಕಾಶ, ದೊಡ್ಡ ಆಕಾಶ ಎಂಬಂತೆ ಭೇದಗಳು ಕಾಣಿಸಿಕೊಳ್ಳುತ್ತವೆ, ತಾನೇ. ಇದೇ ರೀತಿ ನಾಮರೂಪಗಳ ವೈವಿಧ್ಯದ ಕಾರಣವಾಗಿ ಬ್ರಹ್ಮವೇ ಅನೇಕ ಜೀವರಾಶಿಗಳಾಗಿ ಕಾಣಿಸಿಕೊಳ್ಳುತ್ತದೆ. ಈ ಭೇದ ನಿಜವಲ್ಲ , ಬರಿಯ ತೋರಿಕೆ ಮಾತ್ರ. ಈ ಅಕ್ಷರನು ಸ್ವಯಂಜ್ಯೋತಿ ಸ್ವರೂಪನು. ಅವನಿಗೆ ಯಾವ ಮೂರ್ತರೂಪವೂ ಇಲ್ಲ. ಏಕೆಂದರೆ ನಾಮರೂಪಗಳ ಉಪಾಧಿ ಅವನಲ್ಲಿ ಇಲ್ಲ. ಹೊರಗೂ ಅವನೇ; ಒಳಗೂ ಅವನೇ. ಎಲ್ಲೆಲ್ಲೂ ಇರುವವನು; ಎಲ್ಲವನ್ನೂ ತುಂಬಿಕೊಂಡವನು. ಹುಟ್ಟಿಲ್ಲ ಅವನಿಗೆ; ಪ್ರಾಣ, ಮನಸ್ಸು ಎಂಬ ವಿಕಾರಗಳ ಸೋಂಕಿಲ್ಲ ಅವನಲ್ಲಿ. ಹೀಗಾಗಿ ಅವನು ನಿಜವಾಗಿಯೂ ಶುಭ್ರನು. ಎಲ್ಲದಕ್ಕೂ ಕಾರಣವಾಗಿರುವವನು, ಉಪಾಧಿಗಳು ಇಲ್ಲದವನು. ಇವನಿಂದಲೇ ಪ್ರಾಣ, ಮನಸ್ಸು, ಎಲ್ಲ ಇಂದ್ರಿಯಗಳು, ಆಕಾಶ, ವಾಯು, ಜ್ಯೋತಿ, ನೀರು, ಇವೆಲ್ಲವನ್ನೂ ಧರಿಸಿಕೊಂಡಿರುವ ಪೃಥ್ವಿ— ಇವೆಲ್ಲವೂ ಮೂಡಿಬರುತ್ತವೆ.

''ಮಗೂ, ಅವನು ವಿಶ್ವರೂಪನೂ ಆಗಿದ್ದಾನೆ. ವಿಶ್ವಕ್ಕೆ ಅತೀತವಾದ ನಿರ್ಗುಣ ಸ್ವರೂಪನೂ ಆಗಿದ್ದಾನೆ. ಎಲ್ಲ ಜೀವಿಗಳ ಅಂತರ್ಯಾಮಿಯೂ ಆಗಿದ್ದಾನೆ. ವಿಶ್ವರೂಪನಾದ ಅವನಿಗೆ ಅಗ್ನಿಯೇ ಶಿರಸ್ಸು, ಚಂದ್ರಸೂರ್ಯರು ಎರಡು ಕಣ್ಣುಗಳು, ದಿಕ್ಕುಗಳು ಕಿವಿಗಳು. ವಿಸ್ತಾರವಾದ ವೇದಗಳೇ ಅವನ ಮಾತು. ವಾಯುವೇ ಅವನ ಜೀವಪ್ರಾಣ. ಇಡೀ ಪ್ರಪಂಚವೇ ಅವನ ಹೃದಯ. ಭೂಮಿಯೇ ಅವನ ಪಾದಗಳು. ಹೀಗೆ ಪರಮಾತ್ಮನೇ ಈ ಅಖಂಡ ಸೃಷ್ಟಿಯಾಗಿದ್ದಾನೆ ಎಂದು ನಾವು ಧ್ಯಾನಿಸಬೇಕು.

''ಮಗು, ಶೌನಕ. ಈ ಜಗತ್ತೆಲ್ಲವೂ ಅಕ್ಷರದಿಂದಲೇ ಉಂಟಾಗಿದೆ ಎಂದು ನಾನೀಗಾಗಲೇ ನಿನಗೆ ಹಲವುಬಾರಿ ತಿಳಿಸಿಕೊಟ್ಟಿದ್ದೇನೆ. ಇದರ ಮತ್ತಷ್ಟು ವಿವರವನ್ನು ಹೇಳುತ್ತೇನೆ, ಕೇಳು. ಜಗತ್ತಿಗೆ ಮೂಲಭೂತವಾದ ಶಕ್ತಿ–ಬೆಳಕುಗಳನ್ನು ನೀಡುವ ಪಂಚಾಗ್ನಿಗಳೆಲ್ಲವೂ ಅಕ್ಷರನಿಂದಲೇ ಹುಟ್ಟಿಬಂದಿರುವಂಥವು. ಅವು ಯಾವುವು ಗೊತ್ತೆ? ದ್ಯುಲೋಕವನ್ನು ಬೆಳಗುವ ಸೂರ್ಯನೇ ಮೊದಲ ಅಗ್ನಿ. ಅವನಿಂದ ಮೋಡ–ಮಳೆಗಳು ಉಂಟಾಗುತ್ತವೆ. ಮಳೆಯಿಂದಷ್ಟೇ ಅಲ್ಲವೇ ಜೀವಿಗಳಿಗೆ ಆಹಾರವಾದ ದವಸಧಾನ್ಯಗಳು ಬೆಳೆಯುವುದು? ಈ ಆಹಾರದಿಂದ ರೇತಸ್ಸು ಉಂಟಾಗುತ್ತದೆ. ಇದರಿಂದ ಮನುಷ್ಯರ ಸಂತತಿ ಬೆಳೆಯುತ್ತದೆ. ನಾವು ಯಾವ ಜ್ಞಾನರಾಶಿಯನ್ನು ವೇದಗಳೆಂದು ಕರೆಯುತ್ತೇವೆಯೋ, ಅವೆಲ್ಲದರ ಉಗಮ ಅಕ್ಷರ ಬ್ರಹ್ಮವೇ. ಋಗ್ವೇದ, ಯಜುರ್ವೇದ, ಸಾಮವೇದ, ಎಲ್ಲ ಯಜ್ಞಗಳು, ಎಲ್ಲ ಯಾಗಗಳು, ಚಂದ್ರ, ಎಲ್ಲ ಸಂವತ್ಸರಗಳು — ಇವೆಲ್ಲವೂ ಉಂಟಾಗುವುದು ಈ ಅಕ್ಷರ ಬ್ರಹ್ಮನಿಂದಲೇ. ದೇವತೆಗಳು, ಮನುಷ್ಯರು, ಪಶುಗಳು, ಪಕ್ಷಿಗಳು, ಪ್ರಾಣಾಪಾನಗಳು, ಎಲ್ಲ ರೀತಿಯ ಧಾನ್ಯಗಳು, ತಪಸ್ಸು, ಶ್ರದ್ಧೆ, ಸತ್ಯ, ಬ್ರಹ್ಮಚರ್ಯ, ವಿಧಿ — ಇವೆಲ್ಲವೂ ಅಕ್ಷರಬ್ರಹ್ಮನಿಂದಲೇ ಹುಟ್ಟಿರುವುದು. ಏಳು ಪ್ರಾಣಗಳು, ಎಲ್ಲ ವಿಷಯಗಳನ್ನು ಬೆಳಗುವ ಏಳು ಬಗೆಯ ಬೆಳಕುಗಳು, ಏಳು ಸಮಿತ್ತುಗಳು – ಇವೆಲ್ಲವೂ ಬೀಡುಬಿಟ್ಟಿರುವ ಏಳು ಲೋಕಗಳು ಮೂಡಿಬಂದಿರುವುದು ಅಕ್ಷರಬ್ರಹ್ಮನಿಂದಲೇ. ಎಲ್ಲ ಸಮುದ್ರಗಳೂ, ಪರ್ವತಗಳೂ, ಎಲ್ಲ ರೀತಿಯ ನದಿಗಳೂ, ಎಲ್ಲ ಓಷಧಿಗಳೂ, ರಸವೂ ಎಲ್ಲವೂ ಅಕ್ಷರ ಬ್ರಹ್ಮದಿಂದಲೇ ಜನಿಸಿವೆ. ಅವುಗಳ ಅಂತರಾತ್ಮನಾಗಿರುವ ಪರಮಾತ್ಮನೇ ಈ ಅಕ್ಷರಬ್ರಹ್ಮನಾಗಿದ್ದಾನೆ. ಕರ್ಮ, ತಪಸ್ಸು – ಎಲ್ಲವೂ ಅಕ್ಷರ ಬ್ರಹ್ಮವೇ ಆಗಿದೆ. ಎಲ್ಲಕ್ಕೂ ಕಾರಣನಾದ ಪರಮಾತ್ಮನನ್ನು ಅರಿತುಕೊಂಡಾಗ, ಇಡೀ ವಿಶ್ವವೇ ಪರಮಾತ್ಮನು ಎಂಬ ನಿಜವಾದ ಜ್ಞಾನ ಉಂಟಾಗುತ್ತದೆ. ಈ ಪರಮಾತ್ಮನು ಬೇರೆಲ್ಲಿಯೂ ಇಲ್ಲ. ಆ ಪರತತ್ತ್ವವು ನಮ್ಮ ಹೃದಯ ಗುಹೆಯಲ್ಲಿಯೇ ವಿರಾಜಮಾನವಾಗಿದೆ. ಪ್ರತಿಯೊಂದು ಜೀವಿಯ ಪ್ರತ್ಯಗಾತ್ಮ ಸ್ವರೂಪನೇ ಆ ಪರಮಾತ್ಮನು. ಆ ಪರಮಾತ್ಮನೇ ಎಲ್ಲ ಜೀವಿಗಳಲ್ಲಿಯೂ ಆತ್ಮಸ್ವರೂಪದಲ್ಲಿ ಇದ್ದಾನೆ. 'ಈ ಪರತತ್ತ್ವವು ನಾನೇ ಆಗಿದ್ದೇನೆ' – ಎಂದು ಯಾವನು ಅರಿತುಕೊಳ್ಳುತ್ತಾನೆಯೋ, ಅಂತಹ ವ್ಯಕ್ತಿಯು ಅವಿದ್ಯೆಯ ಕಟ್ಟನ್ನು ತನ್ನ ಈ ಜೀವಿತದಲ್ಲಿಯೇ ಕಳಚಿಕೊಳ್ಳುತ್ತಾನೆ.


''ಮಗೂ, ಶೌನಕ, ಈ ಪ್ರಪಂಚಕ್ಕೆ ಕಾರಣವಾಗಿರುವ ಪರಮಾತ್ಮನೇ ಇಡಿಯ ವಿಶ್ವರೂಪನೂ ಆಗಿದ್ದಾನೆ. ಅವನೇ ಎಲ್ಲದಕ್ಕೂ ಕಾರಣನಾಗಿದ್ದಾನೆ; ಅವನೇ ಇವೆಲ್ಲವೂ ಆಗಿದ್ದಾನೆ. ಅವನೇ ನಿನ್ನ ಆತ್ಮಸ್ವರೂಪವೂ ಆಗಿದ್ದಾನೆ. ಇದರರ್ಥ ಏನು ಗೊತ್ತೇನು? 'ನೇಹ ನಾನಾಸ್ತಿ ಕಿಂಚನ' – ಈ ವಿಶ್ವವು ಚೈತನ್ಯಮಯವಾಗಿದೆ; ಪರಮಾತ್ಮಮಯವಾಗಿದೆ. ಅದನ್ನು ಬಿಟ್ಟು ಬೇರೆ ಏನೂ ಇಲ್ಲ , ಬೇರೆ ಏನೂ ಇಲ್ಲ.''

ಗುರುವಾದ ಅಂಗಿರಸನು ಇಷ್ಟನ್ನು ಹೇಳಿ, ಧ್ಯಾನಿಸುವರಂತೆ, ಕಣ್ಣುಮುಚ್ಚಿ ಕುಳಿತನು. ಅವನ ಶಿಷ್ಯನಾದ ಶೌನಕನೂ ಧ್ಯಾನಸ್ಥನಾದನು. ಇಬ್ಬರ ಮನಸ್ಸೂ ಇಂದ್ರಿಯಾತೀತವಾಯಿತು; ಪರಮತತ್ತ್ವವಾದ ಅಕ್ಷರದಲ್ಲಿ ಲೀನವಾಯಿತು; ಇಬ್ಬರ ಚೈತನ್ಯವೂ ಏಕೀಭೂತವಾಯಿತು; ಸತ್ಸ್ವರೂಪವಾಯಿತು; ಚಿತ್ಸ್ವರೂಪವಾಯಿತು; ಆನಂದಸ್ವರೂಪವಾಯಿತು. ವಿಶ್ವಾತ್ಮವಾದ ಅಕ್ಷರ ಬ್ರಹ್ಮದಲ್ಲಿ ಲೀನವಾಗಿ ಹೋಯಿತು.




ಶಿವಾಜಿಯ ಮೇಲೆ ವಿಠಲನ ಕೃಪೆ


ಕಥೆ : ಟಿ.ಎಂ. ಸುಂದರರಾಮನ್ **ಚಿತ್ರ : ಗೋವಿ**







4 ಅದರಿಂದ ಏನು ಹಾನಿ? ನಮ್ಮ ರಾಜನನ್ನು ಹಿಡಿಯುವುದು ಅಷ್ಟು ಸುಲಭವೆ? ನಮ್ಮ ರಾಜನ ಶೌರ್ಯ, ಪರಾಕ್ರಮ ನೋಡಿ ಶತ್ರು ರಾಜ ನಿಜವಾಗಿಯೂ ದಂಗಾಗಿದ್ದಾನೆ.



5 ಶಿವಾಜಿ ದೇವಾಲಯಕ್ಕೆ ಭೇಟಿ ನೀಡಿದ ಸುದ್ದಿಯನ್ನು ಕೆಲವು ಮಂದಿ ವಂಚಕರು ಶತ್ರುಗಳಿಗೆ ತಲುಪಿಸಿದರು. ಅವನನ್ನು ಸೆರೆ ಹಿಡಿಯಲು ಇದೇ ತಕ್ಕ ಸಮಯವೆಂದು ತಿಳಿದ ಶತ್ರುಗಳು, ಅದಕ್ಕಾಗಿ ದೊಡ್ಡ ಸೈನ್ಯವನ್ನು ಸಿದ್ಧಪಡಿಸಿದರು.

6 ದೇವಾಲಯದಲ್ಲಿ ಭಜನೆ ನಡೆಯುತ್ತಿರಬೇಕಾದರೆ ಶಿವಾಜಿಯ ಅಂಗರಕ್ಷಕನು ಬಂದು ಗುಟ್ಟಾಗಿ ಹೇಳಿದ ...



7 ಶಿವಾಜಿ ಕೂಡಲೇ ತುಕಾರಾಮನ ಬಳಿಗೆ ಹೋಗಿ, ಅಲ್ಲಿಂದ ಹೊರಡಲು ಸಿದ್ಧನಾದ.




8
ಶಿವಾಜಿಗೆ ತುಂಬಾ ಗುರುಭಕ್ತಿಯಿತ್ತು . ಅವನಿಗೆ ತನ್ನ ಗುರುವಿನ ಆಣತಿಯನ್ನು ಮೀರಲಾಗಲಿಲ್ಲ. ತನ್ನ ಮನಸ್ಸಿನ ಶಕ್ತಿಯನ್ನೆಲ್ಲ ಒಗ್ಗೂಡಿಸುತ್ತ ...
ಏನು ಆಗುವುದೋ ಅದೆಲ್ಲವೂ ದೇವರ ಇಚ್ಛೆಯಂತೆ. ನನ್ನ ಗುರುವಿನ ಮಾತನ್ನು ನಾನು ಮೀರಲಾರೆ.
9
ಇದೇನಿದು? ನಮ್ಮ ರಾಜನು ತಾನಾಗಿಯೇ ಅಪಾಯದಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದಾನೆ.
ಸರಿ, ಮಹಾರಾಜನು ತನ್ನ ಗುರುವಿನ ಮಾತನ್ನು ಮೀರಲಾರ. ನಾವು ರಾಜನ ಆಜ್ಞೆಯನ್ನ ಮೀರಲಾರೆವು. ನಮ್ಮ ರಕ್ತದ ಕೊನೆಯ ಹನಿ ಉಳಿದಿರುವ ವರೆಗೂ ರಾಜನ ರಕ್ಷಣೆಗಾಗಿ ನಾವು ಹೋರಾಡೋಣ.
10
ತುಕಾರಾಮನು ಭಕ್ತಿ ತುಂಬಿ ಭಜನೆ ಮಾಡುತ್ತಿದ್ದ. ಅಷ್ಟರಲ್ಲಿ ಅವನ ಶಿಷ್ಯ ಅಲ್ಲಿಗೆ ಬಂದ...
ಸ್ವಾಮಿ, ಕ್ಷಮಿಸಿ, ನಮ್ಮ ರಾಜ ತುಂಬ ಅಪಾಯದಲ್ಲಿದ್ದಾನೆ. ಅವನನ್ನು ಸೆರೆ ಹಿಡಿಯಲು ಶತ್ರುಗಳು ಬೃಹತ್ತಾದ ಸೈನ್ಯದೊಂದಿಗೆ ಬಂದು ಸುತ್ತುವರಿದಿದ್ದಾರೆ.
ಹೌದೆ? ಅವನು ಇಲ್ಲೇ ಇರುವಂತೆ ಮಾಡಿದವನು ನಾನು. ಅವನು ಎಲ್ಲ ಅಪಾಯವನ್ನೂ ಮರೆತು ಭಜನೆ ಮಾಡುತ್ತಿದ್ದಾನೆ. ಅಂಥ, ಶೂರನಿಗೆ ಏನಾದರೂ ಆಗಿಬಿಟ್ಟರೆ? ಅಯ್ಯೋ ದೇವರೇ! ...
11
ತುಕರಾಮನು ಕಣ್ಣೀರು ತುಂಬಿಕೊಂಡು ವಿಠಲನನ್ನು ಪ್ರಾರ್ಥಿಸಿದ.
ವಿಠಲಾ! ನೀನು ನರಸಿಂಹನ ರೂಪದಲ್ಲಿ ಬಂದು ಪ್ರಹ್ಲಾದನನ್ನು ಕಾಪಾಡಿದೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಮಹಾರಾಜನನ್ನು ಕಾಪಾಡಬೇಕಾದವನು ನೀನೇ. ಅವನು ನಿನ್ನನ್ನೇ ನಂಬಿದ್ದಾನೆ.
ಪ್ರಾರ್ಥನೆ ಮಾಡುತ್ತ ತುಕಾರಾಮನು ನಾಲ್ಕು ಅಭಂಗಗಳನ್ನು ಹಾಡಿದ.

12

ಅಷ್ಟರಲ್ಲಿ ಒಂದು ಪವಾಡ ನಡೆಯಿತು. ಎಲ್ಲ ದಿಕ್ಕುಗಳಿಂದಲೂ ಭಕ್ತರನ್ನು ಶತ್ರುಗಳ ಸೈನ್ಯ ಆವರಿಸಿಬಿಟ್ಟಿತು. ವಿಠಲನು ಶಿವಾಜಿಯ ವೇಷ ಧರಿಸಿ ಕುದುರೆಯ ಮೇಲೇರಿ, ಮಿಂಚಿನಂತೆ ಹೊರಗೆ ನುಗ್ಗಿದನು. ಶತ್ರುಗಳು ಅವನನ್ನು ಬೆನ್ನಟ್ಟಿ ಹೋದರು. ವಿಠಲನು ಅವರನ್ನು ಮರಳುಗೊಳಿಸಿ, ಮೂರು ಗಂಟೆ ಕಾಲ ಸತಾಯಿಸಿದನು. ಕೊನೆಗೆ ಅವನು ಮುಳ್ಳುಕಂಟಿಗಳಿಂದ ತುಂಬಿದ್ದ ಕಾಡನ್ನು ಹೊಕ್ಕು, ಶತ್ರುಗಳನ್ನು ಗೊಂದಲಕ್ಕೀಡುಮಾಡಿದನು.



13

ಅಷ್ಟರಲ್ಲಿ ನಿಜವಾದ ಶಿವಾಜಿಯು ತುಕಾರಾಮನ ಆಶೀರ್ವಾದ ಪಡೆದು, ಅಲ್ಲಿಂದ ತಪ್ಪಿಸಿಕೊಂಡನು.



14

ವಿಠಲನ ಕರುಣೆಯನ್ನು ನೆನೆದು ತುಕಾರಾಮನಿಗೆ ಆನಂದಬಾಷ್ಪವುಂಟಾಯಿತು.





"ಆಧ್ಯಾತ್ಮಿಕ ಸಾಧನೆ ಮಾಡದೆ ಕರ್ಮಯೋಗವನ್ನು ಮಾಡಲು ಸಾಧ್ಯವಿಲ್ಲ. ನಾಲ್ಕು ಬಗೆಯ ಯೋಗಗಳನ್ನೂ ನೀವು ಸಮನ್ವಯಗೊಳಿಸಬೇಕು. ಇಲ್ಲದಿದ್ದರೆ ನಿಮ್ಮ ಮನಸ್ಸು ಹಾಗೂ ಹೃದಯಗಳನ್ನು ಸಂಪೂರ್ಣವಾಗಿ ಭಗವಂತನಲ್ಲಿ ಯಾವಾಗಲೂ ಇಡುವುದು ಹೇಗೆ ಸಾಧ್ಯ ?

ಪ್ರಕೃತಿ ಯಾವಾಗಲೂ ನಮ್ಮನ್ನು ಪ್ರತಿಕ್ರಿಯೆ ನೀಡಲು ಪ್ರೇರೇಪಿಸುವುದು. ಏಟಿಗೆ ಏಟು, ಮೋಸಕ್ಕೆ ಮೋಸ, ಸುಳ್ಳಿಗೆ ಸುಳ್ಳು. ಹೀಗೆ ಇವುಗಳನ್ನು ನಮ್ಮ ಎಲ್ಲ ಶಕ್ತಿಯಿಂದ ಹಿಂದಿರುಗಿಸಲು ಅದು ಬಯಸುವುದು. ಹಾಗೆ ತಿರುಗೇಟು ಕೊಡದಿರಲು, ನಿಯಂತ್ರಣದಲ್ಲಿ ಇಡಲು, ಅನಾಸಕ್ತಿಯಿಂದ ಇರಲು ಅಸಾಧಾರಣ ದೈವೀಶಕ್ತಿ ಬೇಕಾಗುವುದು." *— ಸ್ವಾಮಿ ವಿವೇಕಾನಂದ*



ರಾಮಕೃಷ್ಣ ಮಹಾಸಂಘದ ಅಕ್ಟೋಬರ್ ತಿಂಗಳ ಚಟುವಟಿಕೆಗಳು



ದುರ್ಗಾಪೂಜೆ: ಅಕ್ಟೋಬರ್ ೧೬ರಿಂದ ೧೯ರ ವರೆಗೆ **ಬೇಲೂರು ಮಠ** ಹಾಗೂ ಮಹಾಸಂಘದ ವಿವಿಧ ಕೇಂದ್ರಗಳಲ್ಲಿ ದುರ್ಗಾಪೂಜೆಯನ್ನು ವಿವಿಧ ಸಡಗರ, ಸಂಭ್ರಮಗಳಿಂದ ಆಚರಿಸಲಾಯಿತು. ಬೇಲೂರು ಮಠದಲ್ಲಿ ೧೬ರಂದು ಕುಮಾರಿ ಪೂಜೆ, ಸಂಧಿಪೂಜೆ ನಡೆಯಿತು. ಅಷ್ಟಮಿಯಂದು ಸುಮಾರು ೫೬,೦೦೦ ಮಂದಿ ಪ್ರಸಾದ ಭೋಜನ ಸ್ವೀಕರಿಸಿದರು. ಒಟ್ಟು ನಾಲ್ಕು ದಿನಗಳಲ್ಲಿ ಸುಮಾರು ಒಂದೂವರೆ ಲಕ್ಷ ಜನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. ಇತರ ಶಾಖಾಕೇಂದ್ರಗಳಲ್ಲಿ ೨೬ ಕೇಂದ್ರಗಳು ಮೂರ್ತಿಸಮೇತ ದುರ್ಗಾಪೂಜೆಯನ್ನು ನೆರವೇರಿಸಿದವು.



ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣದ ೧೨೫ನೇ ವಾರ್ಷಿಕೋತ್ಸವ: ರಾಮಕೃಷ್ಣ ಮಿಷನ್ ಸೇವಾಶ್ರಮ, **ಸಿಲ್‌ಚಾರ್** ಕೇಂದ್ರವು ಚಿಕಾಗೋ ಭಾಷಣದ ೧೨೫ನೇ ವಾರ್ಷಿಕೋತ್ಸವದ ಅಂಗವಾಗಿ ಅಕ್ಟೋಬರ್ ೧೯ರಿಂದ ೨೬ರ ವರೆಗೆ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಿತ್ತು. ಇದರಲ್ಲಿ ಪ್ರವಚನ ಹಾಗೂ ಭಾಷಣಗಳು ಸೇರಿದ್ದವು. ಅಮೆರಿಕದ **ಚಿಕಾಗೋ** ಕೇಂದ್ರವು ಗ್ಯಾಂಜಸ್‌ನಲ್ಲಿರುವ ವಿವೇಕಾನಂದ ರಿಟ್ರೀಟ್‌ನಲ್ಲಿ 'ವೇದಾಂತ' ಎಂಬ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಇದರಲ್ಲಿ ೪೦೦ ಮಂದಿ ಭಾಗವಹಿಸಿದ್ದರು.

ಸೋದರಿ ನಿವೇದಿತಾ ಅವರ ೧೫೦ನೇ ಜನ್ಮ ಮಹೋತ್ಸವ

ಕೊಯಮತ್ತೂರು ಮಿಷನ್ ವಿದ್ಯಾಲಯವು ೨೦೧೬ರ ಅಕ್ಟೋಬರ್‌ನಿಂದ ೨೦೧೮ರ ಸೆಪ್ಟೆಂಬರ್ ತನಕ ಅಂತರ್ಜಾಲ ರಸಪ್ರಶ್ನೆ ಸ್ಪರ್ಧೆಯನ್ನು ಏರ್ಪಡಿಸಿತ್ತು. ಇದರಲ್ಲಿ ೯ ಕಾಲೇಜುಗಳ ೩೩೦೮ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಇತರ ಚಟುವಟಿಕೆಗಳು: **ವಿಶಾಖಪಟ್ಟಣಂ** ಕೇಂದ್ರವು ನಡೆಸುತ್ತಿರುವ ಪ್ರೌಢಶಾಲೆಯ ವಜ್ರಮಹೋತ್ಸವವು ಅಕ್ಟೋಬರ್ ೨ ರಿಂದ ೬ರ ತನಕ ನಡೆಯಿತು. ಇದರಲ್ಲಿ ಸಾರ್ವಜನಿಕ ಸಭೆ, ಅಧ್ಯಾಪಕರ ಸಮ್ಮೇಳನ, ಹಳೆಯ ವಿದ್ಯಾರ್ಥಿಗಳ ಸಭೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. **ಶ್ಯಾಮಪುಕುರ ಬಾಟಿಯಲ್ಲಿರುವ** ರಾಮಕೃಷ್ಣ ಮಠವು ಸಮೀಪದಲ್ಲಿರುವ ನಾಲ್ಕು ಮಹಡಿ ಕಟ್ಟಡವನ್ನು ಹೆಚ್ಚಿನ ಕಾರ್ಯಚಟುವಟಿಕೆಗಳಿಗಾಗಿ ಖರೀದಿಸಿದ್ದು, ಅದರ ಉದ್ಘಾಟನೆಯು ಅಕ್ಟೋಬರ್ ೩ ರಂದು ನಡೆಯಿತು. **ಪುರುಲಿಯಾ ವಿದ್ಯಾಪೀಠವು** ಒಂದು ವರ್ಷದ ಅವಧಿಯಷ್ಟು ದೀರ್ಘಕಾಲ ನಡೆದ ವಜ್ರಮಹೋತ್ಸವದ ಸಮಾರೋಪ ಸಮಾರಂಭವನ್ನು ಅಕ್ಟೋಬರ್ ೫ರಿಂದ ೧೦ರ ತನಕ ನಡೆಸಿತು. ಸಾರ್ವಜನಿಕ ಸಭೆ, ಹಳೆ ವಿದ್ಯಾರ್ಥಿಗಳ ಸಭೆ, ಸಾಂಸ್ಕೃತಿಕ ಸ್ಪರ್ಧೆ, ವಿಚಾರ ಸಂಕಿರಣ, ವಸ್ತುಪ್ರದರ್ಶನ, ನಾಟಕ, ಸಂಗೀತ ಇತ್ಯಾದಿ ಕಾರ್ಯುಕ್ರಮಗಳು ನಡೆದವು. **ಅಗರ್ತಲಾ** ಕೇಂದ್ರವು ಅಕ್ಟೋಬರ್ ೪ರಂದು ರಕ್ತದಾನ ಶಿಬಿರವನ್ನು ನೆರವೇರಿಸಿತು. **ಕೊಯಮತ್ತೂರು ಮಿಷನ್ ವಿದ್ಯಾಲಯವು** ಸೆಪ್ಟೆಂಬರ್ ೨೮ ರಿಂದ ೩೦ರ ವರೆಗೆ ರಾಜ್ಯ ಮಟ್ಟದ ಬಾಸ್ಕೆಟ್‌ಬಾಲ್ ಕ್ರೀಡಾಕೂಟವನ್ನು ನೆರವೇರಿಸಿದರು. **ರಾಮ ಹರಿಪುರ** ಕೇಂದ್ರವು ಅಕ್ಟೋಬರ್ ೨ ರಂದು ವೈದ್ಯಕೀಯ ಶಿಬಿರವನ್ನು ನಡೆಸಿತು.

ಸ್ವಚ್ಛ ಭಾರತ ಅಭಿಯಾನ: **ಕೊಯಮತ್ತೂರು ಮಿಷನ್ ವಿದ್ಯಾಲಯವು** ಹಾಗೂ **ಕಾಮಾರಪುಕುರ** ಕೇಂದ್ರಗಳು ಸ್ವಚ್ಛ ಭಾರತ ಅಭಿಯಾನದ ಅಂಗವಾಗಿ ಕೇಂದ್ರದ ಸುತ್ತಮುತ್ತಣ ಪ್ರದೇಶಗಳಲ್ಲಿ ಸ್ವಚ್ಛ ಕಾರ್ಯಕ್ರಮಗಳನ್ನು ನಡೆಸಿದವು.

ವಿದೇಶೀ ಕೇಂದ್ರಗಳಲ್ಲಿ

ದುರ್ಗಾಪೂಜೆ: ದಕ್ಷಿಣ ಆಫ್ರಿಕಾದ **ಡರ್ಬನ್**, ಝಾಂಬಿಯಾದ **ಲುಸಾಕ**, ಬಾಂಗ್ಲಾದೇಶದ ೧೧ ಕೇಂದ್ರಗಳಲ್ಲಿ ದುರ್ಗಾಪೂಜೆ ಉತ್ಸವ ನಡೆಯಿತು. **ಡರ್ಬನ್** ಕೇಂದ್ರದಲ್ಲಿ ಸಾಧುನಿವಾಸದ ಹೊಸ ವಿಸ್ತರಣೆಯನ್ನು ಉದ್ಘಾಟಿಸಲಾಯಿತು. **ಚಿಕಾಗೋ** ಕೇಂದ್ರದ ಗ್ಯಾಂಜಸ್ ರಿಟ್ರೀಟ್‌ನಲ್ಲಿ ದಿವ್ಯತ್ರಯರ ಹೊಸ ಮೂರ್ತಿಗಳನ್ನು ಸ್ಥಾಪಿಸಲಾಯಿತು. ಬಾಂಗ್ಲಾದೇಶದ **ಚಾಂದ್‌ಪುರ್** ಕೇಂದ್ರದಲ್ಲಿ ಅಕ್ಟೋಬರ್ ೫ ರಂದು ಬಾಂಗ್ಲಾದೇಶಕ್ಕೆ ಭಾರತದ ರಾಯಭಾರಿಯಾಗಿರುವ ಹರ್ಷವರ್ಧನ್ ಶ್ರಿಂಗ್ಲಾ ಅವರು ಹೊಸದಾಗಿ ನಿರ್ಮಿಸಿದ ವಿವೇಕಾನಂದ ಭವನ ಹಾಗೂ ಬ್ರಹ್ಮಾನಂದ ಭವನವನ್ನು ಉದ್ಘಾಟಿಸಿದರು.



ವಜ್ರಮಹೋತ್ಸವ, ಪುರುಲಿಯಾ ವಿದ್ಯಾಪೀಠ



ವಜ್ರಮಹೋತ್ಸವ, ವಿಶಾಖಪಟ್ಟಣಂ



ಕ್ರೀಡಾಕೂಟ, ಕೊಯಮತ್ತೂರು

Managing Editor : Swami Atmajnanananda
Editor : Swami Jnanayogananda
Printed and Published by Swami Atmajnanananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

ಆರ್ಕಿಡ್ ಟ್ರಾವೆಲ್ & ಟೂರ್ಸ್

Orchid Travel & Tours

www.orchidtours.net







ದುಬೈ ಗೋಲ್ಡ್ ಶಾಪಿಂಗ್ ಫೆಸ್ಟಿವಲ್ - 2018
5 ದಿನಗಳ ದುಬೈ, ಅಬುಧಾಬಿ, ಶಾರ್ಜ ಪ್ರವಾಸ

ದುಬೈ ಸಿಟಿ ಟೂರ್, ಬುರ್ಜ್ ಖಲೀಫಾ, ಡೌ ಕ್ರೂಸ್, ಡೆಸರ್ಟ್ ಸಫಾರಿ
ಅಬುಧಾಬಿ ಸಿಟಿ ಟೂರ್, ಶಾರ್ಜ ಸಿಟಿ ಟೂರ್



11 ದಿನಗಳ ಸಿಂಗಾಪುರ-ಮಲೇಶಿಯ-ಥೈಲ್ಯಾಂಡ್ ಪ್ರವಾಸ

ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್ ಜೊತೆಗೆ ಸಿ ಅಕ್ವೇರಿಯಂ, ವಿಂಗ್ಸ್ ಆಫ್ ಟೈಮ್, ಜುರೋಂಗ್ ಬರ್ಡ್‌ಪಾರ್ಕ್, ಯುನಿವರ್ಸಲ್ ಸ್ಟುಡಿಯೋ,

ಮಲೇಶಿಯ : ಕೌಲಾಲಂಪುರ್ ಸಿಟಿ ಟೂರ್, ಬಾಟು ಗುಹೆ, ಪುತ್ರಜಯ, ಜಂಟಿಂಗ್ ಹೈಲ್ಯಾಂಡ್, ಕೆ.ಎಲ್.



ಥೈಲ್ಯಾಂಡ್ : ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್

18 ಮತ್ತು 12 ದಿನಗಳ ಅಮೇರಿಕಾ ಪ್ರವಾಸ

ಪ್ರವಾಸ ಸ್ಥಳ : ನ್ಯೂಯಾರ್ಕ್, ವಾಷಿಂಗ್ಟನ್, ನಯಾಗರ ಫಾಲ್ಸ್, ಲಾಸ್‌ವೆಗಾಸ್, ಲಾಸ್ ಎಂಜಲೀಸ್, ಸ್ಯಾನ್‌ಫ್ರಾನ್ಸಿಸ್‌ಕೋ




15 ಮತ್ತು 18 ದಿನಗಳ ಗ್ರ್ಯಾಂಡ್ ಯು.ಕೆ.-ಯುರೋಪ್ ಪ್ರವಾಸ

ಯು.ಕೆ. ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್, ಆಸ್ಟ್ರೀಯಾ, ಲಿಚೆನ್‌ಟೆನ್‌ಸ್ಟೈನ್, ಇಟಲಿ, ವ್ಯಾಟಿಕನ್



6 ದಿನಗಳ ಶ್ರೀಲಂಕಾ ಪ್ರವಾಸ ರಾಮಾಯಣ ಕಾಲದ ಸ್ಥಳ ವೀಕ್ಷಣೆ

ಕೊಲೊಂಬೊ, ನೆಗೆಂಬೊ, ಕ್ಯಾಂಡಿ, ಡಾಂಬುಲಾ, ಸೀತಾ ಅಶೋಕವನ, ಹನುಮಾನ್ ದೇವಸ್ಥಾನ ಹಾಗೂ ಶ್ರೀಲಂಕಾ ಸಾಂಸ್ಕೃತಿಕ ಕಾರ್ಯಕ್ರಮಗಳು



3 ದಿನಗಳ ಅಹೋಬಿಲಂ ನವನಾರಸಿಂಹ ಪ್ರವಾಸ

ಪ್ರವಾಸ ಸ್ಥಳಗಳು: ಜ್ವಾಲಾನರಸಿಂಹ, ಪಾವನನರಸಿಂಹ, ವರಹಾನರಸಿಂಹ, ಕಾರಂಜನರಸಿಂಹ, ಮಾಲೋಲನರಸಿಂಹ, ಯೋಗನರಸಿಂಹ, ಭಾರ್ಗವನರಸಿಂಹ, ಉಗ್ರನರಸಿಂಹ, ಛತ್ರವಟನರಸಿಂಹ ಹಾಗೂ ಲಕ್ಷ್ಮೀನರಸಿಂಹ

For more details please Contact :

Orchid Travel & Tours
BASAVANAGUDI
#98, 1st Floor, DVG Road
Office 080-26621983, 26617178
Mobile +91 9900080793 / 9880079588

Orchid Travel & Tours
MALLESHWARAM
198, 1st Floor, 11th Cross
Office 080 - 23445598, 23445559
Mobile +91 9900080791 / 9880079644

VIVEKA PRABHA (KANNADA MONTHLY)
December 2018, Vol.19, No.12, No.of pages : 44

Registered With Registrar of News Papers Of India
under 72356/2000.postal Regn.No.KA/SK/MYS/480/
2018-20. LICENCED TO POST W.P.P.AT YADAVAGIRI
MYSORE 570 020,VIDE LICENCE NO.SK/WPP/MYS/155/2018-20



Printed at mayur graphics,Bangalore